ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 17
ಏಪ್ರಿಲ್ 22, 2012


ಪುಟ 16 ರೂ. 5/-





ಸಿಪಿಐ(ಎಂ) ನ 20ನೇ ಮಹಾಧಿವೇಶನ



ದ್ವಿಗುಣ ಶಕ್ತಿಯಿಂದ ಪ್ರಸಕ್ತ ಸವಾಲು ಎದುರಿಸುವ ಸಂಕಲ್ಪ







ಅಸ್ಪೃಶ್ಯತೆಯ ವಿರುದ್ಧದ ಹೋರಾಟದಲ್ಲಿ ಕಮ್ಯೂನಿಸ್ಟರು



ಭೀಕರ ಬರಗಾಲ ನಿರ್ಲಕ್ಷ್ಯತನ, ಮೋಜಿನಲ್ಲಿ ಬಿಜೆಪಿ ಸರ್ಕಾರ

ಅರಣ್ಯಭೂಮಿ ಹಕ್ಕು ಸಿಗಬೇಕು ಆದಿವಾಸಿಗಳಿಗೆ, ಬಡ ರೈತರಿಗೆ....

ಸರ್ಕಾರದ ನಗ್ನ ಉಲ್ಲಂಘನೆ ಪ್ರಕರಣಗಳು : ನೇಮಕಾತಿ ಹಿಂದಿನ ಅರ್ಹತೆಯೂ ! ನ್ಯಾಯಾಲಯದ ಕಪಾಳಮೋಕ್ಷವೂ !

ಗುತ್ತಿಗೆದಾರರು, ಗಣಿ ಲೂಟಿಕೋರರ ಕಂಪನಿಗಳಿಗಲ್ಲ......

ಅನ್ನ ಬೆಳೆಯುವ ಬಡ ರೈತರು, ಆದಿವಾಸಿಗಳಿಗೆ ಕೊಡಿ ಅರಣ್ಯ ಭೂಮಿಯ ಹಕ್ಕು

ಸಾಗುವಳಿ ಮಾಡಲಾಗುತ್ತಿರುವ ಅರಣ್ಯ ಭೂಮಿ ತಮ್ಮದೇ ಸ್ವಾಧೀನದಲ್ಲಿದ್ದರೂ ಕಾನೂನು ಬದ್ದವಾದ ಹಕ್ಕು ಪತ್ರ ಸಿಗದಿರುವುದು, ಒಕ್ಕಲೆಬ್ಬಿಸುವ ಆತಂಕ ಕಾಡುತ್ತಿರುವದು ಕರ್ನಾಟಕ ರಾಜ್ಯದ ಲಕ್ಷಾಂತರ ಆದಿವಾಸಿಗಳು ಮತ್ತು ಬಡ ರೈತರ ಒಂದು ದೊಡ್ಡ ಸಮಸ್ಯೆ ಈ ಸಮಸ್ಯೆಗೆ ಒಂದು ಶಾಶ್ವತ ಪರಿಹಾರ ಸಿಗಲೇ ಬೇಕಿದೆ. ಅರಣ್ಯ ಹಕ್ಕು ಕಾಯ್ದೆಯ ಸಮರ್ಪಕ ಜಾರಿ ಈ ಸಮಸ್ಯೆಗೆ ಒಂದು ಉತ್ತಮ ಪರಿಹಾರವಾಗಬೇಕಿತ್ತು. ಆದರೆ ಆಳ್ವುವ ಬಿಜೆಪಿ ಸರ್ಕಾರದ ರೈತ ದ್ರೋಹಿ ಧೋರಣೆಯ ಕಾರಣಕ್ಕೆ ಆ ಕೆಲಸ ಆಗಿಲ್ಲ. ಏಪ್ರಿಲ್, ಮೇ ತಿಂಗಳ ಈ ಹೋರಾಟದಿಂದಲಾದರೂ ಈ ಪ್ರಶ್ನೆ ನಿರ್ಣಾಯಕವಾಗಿ ಇತ್ಯರ್ಥವಾಗುವಂತೆ ಬಲಿಷ್ಟ ಚಳುವಳಿ ನಡೆಸಬೇಕಾಗಿದೆ.

ಜಿ.ಸಿ. ಬಯ್ಯಾರೆಡ್ಡಿ

ಕರ್ನಾಟಕ ರಾಜ್ಯದಲ್ಲೂ, ದೇಶದಲ್ಲೂ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತ ಬದುಕುತ್ತಿರುವ ಲಕ್ಷಾಂತರ ರೈತರಿಗೆ, ಹಾಗೂ ಅರಣ್ಯವಾಸಿ ಆದಿವಾಸಿಗಳಿಗೆ ತಮ್ಮ ಬದುಕಿನ ಆಧಾರವಾದ ಭೂಮಿಯ ಕಾನೂನುಬದ್ಧ ಹಕ್ಕು ಸಿಗಬೇಕಾಗಿದೆ. ಬಡವರ, ದುಡಿಯುವ ಜನರ ಸಮಸ್ಯೆಗಳ ಅರಿವಿಲ್ಲದ, ಅಥವಾ ಆ ಬಗೆಗೆ ಕಾಳಜಿ ಇಲ್ಲದ ಫ್ಯಾಷನ್ ಪರಿಸರ ಪ್ರೇಮಿಗಳಿಗೆ ಇಂತಹ ಬೇಡಿಕೆಯೊಂದನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ.

ಅರಣ್ಯವೆಂದರೆ ...

ಇಲ್ಲಿ ಅರಣ್ಯ ಭೂಮಿ ಅಂದಾಕ್ಷಣ ಅರಣ್ಯ ನಾಶ, ಪರಿಸರ ನಾಶ ಎಂದೇನು ಅರ್ಥವಲ್ಲ. ಅದು ದಾಖಲೆಯ ಲೆಕ್ಕದಲ್ಲಿ ಅರಣ್ಯ ಭೂಮಿ ಎಂದಿದ್ದರೂ ವಾಸ್ತವಿಕವಾಗಿ ಅದು ಕೃಷಿ ಭೂಮಿಯಾಗಿರುತ್ತದೆ. ಬಹುತೇಕ ಸಂದರ್ಭದಲ್ಲಿ ಅದು ಗ್ರಾಮದ ಅಂಚಿನ

ಕುರುಚಲು ಕಾಡು ಹೊಂದಿದ್ದ ಭೂಮಿ, ಅಥವಾ ಪಾಳು ಭೂಮಿಯಾಗಿದ್ದದ್ದು ರೈತರ ಪರಿಶ್ರಮದಿಂದ ಕೃಷಿಯೋಗ್ಯ ಭೂಮಿಯಾಗಿರುತ್ತದೆ. ಹೀಗೆ ವ್ಯರ್ಥವಾಗಿ ಬಿದ್ದಿದ್ದ ಭೂಮಿಯನ್ನು ಹದಗೊಳಿಸಿ ಸಾಗುವಳಿ ಯೋಗ್ಯ ಭೂಮಿಯನ್ನಾಗಿ ಮಾಡಿ ಅಲ್ಲಿ ಹಸಿರು ಹೊಮ್ಮುವಂತೆ ಮಾಡುವುದು ಖಂಡಿತ ಪರಿಸರ ವಿರೋಧಿಯಾಗಲಾರದು.

ಆದರೆ ನಮ್ಮ ಆಳುವ ಸರ್ಕಾರಗಳು ಈ ಪ್ರಶ್ನೆಯನ್ನು ನೋಡುವ ರೀತಿ ಖಂಡಿತ ಜನವಿರೋಧಿಯಾದುದು.



1980 ರಲ್ಲಿ ಕೇಂದ್ರ ಸರ್ಕಾರವು 'ಅರಣ್ಯ ಸಂರಕ್ಷಣಾ ಕಾಯ್ದೆ' ತಂದ ಮೇಲೆ ಅರಣ್ಯ ಭೂಮಿ ಸಾಗುವಳಿದಾರರ ಸಮಸ್ಯೆಗಳು ಹೊಸ ಸ್ವರೂಪ ಪಡೆದುಕೊಂಡವು ಮತ್ತು ತೀವ್ರಗೊಂಡವು. ಅರಣ್ಯ ಭೂಮಿಗೆ ಹಕ್ಕು ಪತ್ರ ಹೋಗಲಿ, ಅರಣ್ಯ ಭೂಮಿ ಅಂತ ಗುರುತಿಸಿದ ಕಡೆ ಸಣ್ಣ ರಸ್ತೆ ಮಾಡಿಕೊಳ್ಳಲೂ ಅವಕಾಶ ಕೊಡುವುದಿಲ್ಲ. ಸಾಗುವಳಿ ಜಮೀನಿನಲ್ಲಿ ಮನೆ ಕಟ್ಟಿಕೊಂಡಿರುವ ಕಡೆ ಮನೆಯ ಪಕ್ಕ ಒಂದು ಸಣ್ಣ ಶೌಚಾಲಯವನ್ನು ಕೂಡ ಕಟ್ಟಿಕೊಳ್ಳಲು ಅರಣ್ಯ ಇಲಾಖೆ ಅವಕಾಶ ಕೊಡುವುದಿಲ್ಲ.

ಕಾಡು, ಪರಿಸರವನ್ನೇ ನಂಬಿ ಕಾಡನ್ನು ರಕ್ಷಿಸುತ್ತ ಕಾಡಿನಲ್ಲೇ ಜೀವನ ನಡೆಸುವ ಆದಿವಾಸಿಗಳಿಗೂ ಅವರ ಬದುಕಿನ ಆಧಾರವನ್ನೇ ಕಸಿದುಕೊಂಡು ಅವರನ್ನು ಅತಂತ್ರಗೊಳಿಸುತ್ತಾ ಬರಲಾಯಿತು. ಸಮಸ್ಯೆಗಳು ತೀವ್ರಗೊಂಡಂತೆ ಹೋರಾಟಗಳೂ ತೀವ್ರಗೊಂಡು ಬೆಳೆಯುತ್ತ ಬಂದವು.

ಒತ್ತಡ ಹೋರಾಟದ ಫಲ

2004 ರಲ್ಲಿ ಅಧಿಕಾರಕ್ಕೆ ಬಂದ ಯುಪಿಎ ಕೇಂದ್ರ ಸರ್ಕಾರ, ಎಡ ಪಕ್ಷಗಳ ಬೆಂಬಲ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಜನ ಬಳಕೆಯಲ್ಲಿ 'ಅರಣ್ಯ ಹಕ್ಕು ಕಾಯ್ದೆ' ಎಂದು ಕರೆಯಲಾಗುವ 'ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007ರ 2) ಮತ್ತು ನಿಯಮಗಳು-2008' ಜಾರಿಗೆ ತಂದಿತು ಎಂಬುದು ಈಗಾಗಲೇ ಪರಿಚಿತವಾದ ವಿಷಯ. ಇದರ ಹಿಂದೆ ಎಡ ಮತ್ತು ಜನಪರ ಸಂಘಟನೆಗಳ ಸುಧೀರ್ಘ ಹೋರಾಟದ ಹಿನ್ನೆಲೆ ಇದ್ದಾಗಲೂ ಕೂಡ ಯುಪಿಎ ಸರ್ಕಾರ ಮೊದಲಿಗೆ 'ಅರಣ್ಯ ಹಕ್ಕು ಕಾಯ್ದೆ' ವ್ಯಾಪ್ತಿಯಲ್ಲಿ ಆದಿವಾಸಿಗಳನ್ನು ತರಲು ಒಪ್ಪಿತ್ತೇ ಹೊರತು, ಅದಿವಾಸಿಗಳಲ್ಲದ ಅರಣ್ಯ ಭೂಮಿ ಸಾಗುವಳಿದಾರರ ಹಕ್ಕನ್ನು ಗುರುತಿಸಲು ಅದು ಸಿದ್ಧವಿರಲಿಲ್ಲ. ಎಡಪಕ್ಷಗಳ ತೀವ್ರ ಒತ್ತಡ, ಹೋರಾಟದ ಫಲವಾಗಿ ಈ ಅಂಶ ಕಾಯ್ದೆಯಲ್ಲಿ ಸೇರಿತು.

ಕಾಯ್ದೆ 2006ರಲ್ಲಿ ಅಂಗೀಕಾರವಾದರೂ ಅದಕ್ಕೆ ನಿಯಮಾವಳಿ ರಚಿಸಿ, ಅದನ್ನು ಜಾರಿಗೆ ತರುವ ನಿಟ್ಟಿನಲ್ಲಿ ಸಹ ಎಡಪಕ್ಷಗಳು ಸಾಕಷ್ಟು ಬೆವರು ಹರಿಸಬೇಕಾಯಿತು. ಕಾಯ್ದೆ ಅಧಿಕೃತವಾಗಿ ಜಾರಿಗೆ ಬರುವ ಹೊತ್ತಿಗೆ 2008 ಆರಂಭವಾಗಿತ್ತು.

ಜೊತೆಗೆ ಕಾಯ್ದೆಯಲ್ಲಿ ಕೆಲವು ಗಂಭೀರ ಸಮಸ್ಯೆಗಳೂ ಉಳಿದು ಹೋದವು.

ಡಿಸೆಂಬರ್ 13, 2005 ಕ್ಕೆ ಮುಂಚೆ ಅರಣ್ಯ ಭೂಮಿಯಲ್ಲಿ ಸ್ವಾಧೀನ ಹೊಂದಿದ್ದ ಆದಿವಾಸಿಗಳು ಭೂಮಿ ಹಕ್ಕು ಪಡೆದುಕೊಳ್ಳಬಹುದಾದರೂ, ಆದಿವಾಸಿಗಳಲ್ಲದ ಇತರ 'ಪಾರಂಪರಿಕ ಅರಣ್ಯವಾಸಿ'ಗಳು ಅಂದರೆ ಬುಡಕಟ್ಟು ಅಲ್ಲದವರು ಭೂಮಿಯ ಹಕ್ಕು ಪಡೆಯಬೇಕಾದರೆ ಆ ಅರಣ್ಯ ಭೂಮಿಯನ್ನು ಕಳೆದ ಮೂರು ತಲೆಮಾರುಗಳ ಕಾಲದಿಂದ ಅಂದರೆ 75 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಬಗೆಗೆ ದಾಖಲೆ ಕೊಡಬೇಕು ಎನ್ನುತ್ತದೆ ಕಾಯ್ದೆ. ಕಾನೂನು ಜಾರಿ ಮಾಡಲು ಮನಸ್ಸಿಲ್ಲದ ಸರ್ಕಾರಗಳಿಗೆ ಕಾಯ್ದೆಯ ಇಂತಹ ಕಲಮುಗಳು ವರವಾಗಿ ಒದಗಿ ಬರುತ್ತಿವೆ.

ಜಾರಿ ಇರಾದೆ ಇಲ್ಲ

ಕರ್ನಾಟಕ ರಾಜ್ಯದಲ್ಲಿ 2008ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರಕ್ಕಂತೂ ಈ ಕಾಯ್ದೆಯ ಜನಪರ ಅಂಶಗಳನ್ನು ಬಳಸಿ ಅದನ್ನು ಜಾರಿ ಮಾಡುವ ಯಾವ ಇರಾದೆಯೂ ಇಲ್ಲ. ರಾಜ್ಯದಲ್ಲಿ ಸುಮಾರು ಮೂರು ವರ್ಷಗಳ ಕಾಲ ಯಡಿಯೂರಪ್ಪ ನೇತೃತ್ವದ ಸರ್ಕಾರ ಇತ್ತು. ಭೂಗಳ್ಳರು, ಭೂ ಮಾಫಿಯಾಗಳ ಪರವಾಗಿ, ಸ್ವಂತ ಕುಟುಂಬದ ಸದಸ್ಯರ ಸಲುವಾಗಿ ಅಕ್ರಮವಾಗಿ ಬಿಡಿಎ, ಕೆಐಎಡಿಬಿಗಳ ಜಮೀನುಗಳನ್ನು ಡಿನೋಟಿಫೈ ಮಾಡಿ, ಕೋಟ್ಯಾಂತರ ರೂಪಾಯಿ ಮೌಲ್ಯದ ಜಮೀನು ಲಪಟಾಯಿಸುವುದೇ ಮುಖ್ಯ ದಂಧೆಯಾಗಿದ್ದ ಯಡಿಯೂರಪ್ಪನವರ ಸಚಿವ ಸಂಪುಟದ ಸದಸ್ಯರು, ಸರ್ಕಾರ ಭ್ರಷ್ಟಕಾಂಡಗಳ ಜೊತೆಗೆ ಜಾತಿ ರಾಜಕಾರಣ, ಕಿತ್ತಾಟ, ಭಿನ್ನಮತ, ಕುರ್ಚಿ ಎಳೆದಾಟಗಳನ್ನು ನಡೆಸಿದ್ದೊಂದೇ ಸಾಧನೆಯಾಗಿದೆ. ಅದನ್ನು ಬಿಟ್ಟು ಬಗರ್ ಹುಕುಂ ಸಾಗುವಳಿದಾರರ, ಅರಣ್ಯ ಭೂಮಿ ಸಾಗುವಳಿದಾರರ ಬೇಡಿಕೆಗಳ ಕಡೆಗೆ ಈ ಜನರು ತಿರುಗಿಯೂ ನೋಡಲಿಲ್ಲ. ಆ ನಂತರದಲ್ಲಿ ಸದಾನಂದ ಗೌಡರ ಸರ್ಕಾರ ಅಧಿಕಾರಕ್ಕೆ ಬಂದಿದ್ದು ಯಡಿಯೂರಪ್ಪ ಸರ್ಕಾರದ, ಹಗರಣಗಳನ್ನು ಮುಚ್ಚಿ ಹಾಕಲು ಶ್ರಮಿಸುವುದು, ಕುರ್ಚಿ ಕಿತ್ತಾಟಗಳನ್ನು ಬಿಟ್ಟರೆ ಈ ಸರ್ಕಾರದಿಂದಲೂ ಜನ ಹೆಚ್ಚು ನಿರೀಕ್ಷೆ ಇಟ್ಟುಕೊಳ್ಳುವಂತಿಲ್ಲ. ಹೀಗಾಗಿ ಜನರು ಸಂಘಟಿತರಾಗಿ, ಚಳುವಳಿ ಮಾಡದೇ ತಮ್ಮ ಹಕ್ಕು ಪ್ರತಿಪಾದನೆ ಮಾಡಿ ಬೀದಿಗಿಳಿಯದೇ ಬೇರೆ ದಾರಿಯೇ ಇಲ್ಲ.

ತೋರಿಕೆಯ ಯತ್ನಗಳು ಕಾಣದ ಕಾಳಜಿ

ನೂತನ ಕಾಯ್ದೆಯ ಅವಕಾಶವನ್ನು ಬಳಸಿ ಜನರಿಗೆ ನೆಮ್ಮದಿ ನೀಡಬೇಕು ಎಂಬ ಕಾಳಜಿ ರಾಜ್ಯದ ಬಿಜೆಪಿ ಸರ್ಕಾರಕ್ಕೆ ಇಲ್ಲವೇ ಇಲ್ಲ ಎಂಬುದಕ್ಕೆ ಈ ಕೆಳಕಂಡ ಅಂಕಿ-ಸಂಖ್ಯೆ ಮಾಹಿತಿಗಳೇ ಸಾಕ್ಷಿ. ಈ ಅಂಕಿ-ಸಂಖ್ಯೆಗಳು ಆಗಸ್ಟ್, 2011ರ ಸಮಯದ ರಾಜ್ಯ ಸರ್ಕಾರದ ಅಧಿಕೃತ ಮಾಹಿತಿಗಳಾಗಿವೆ.

ರಾಜ್ಯದಲ್ಲಿ ಅರಣ್ಯ ಭೂಮಿಯ ಹಕ್ಕು ಕೇಳಿ ಅರ್ಜಿ ಸಲ್ಲಿಸಲಾದವರ ಸಂಖ್ಯೆ ಅಂದರೆ ಅರ್ಜಿಗಳ ಸಂಖ್ಯೆ 1,63,115. ಆದರೆ ಇಲ್ಲಿಯವರೆಗೆ ಪರಿಶೀಲನೆ ಪೂರ್ಣಗೊಳಿಸಿ ಭೂಮಿ ಮಂಜೂರು ಮಾಡಿರುವ ಪ್ರಕರಣಗಳ ಸಂಖ್ಯೆ ಕೇವಲ 6,073.

20,457 ಬುಡಕಟ್ಟು ಜನರ ಅರ್ಜಿಗಳಲ್ಲಿ ಪರಿಗಣಿಸಲಾಗಿರುವುದು ಕೇವಲ 5,972 ಅರ್ಜಿಗಳನ್ನು ಮಾತ್ರ, ಬುಡಕಟ್ಟು ಜನರ ಅರ್ಜಿಗಳೇ ಶೇ. 66 ತಿರಸ್ಕೃತವಾಗುತ್ತವೆ ಎಂದರೆ ಈ ಸರ್ಕಾರಗಳು ತಾವು ಈ ಕಾಯಿದೆಯನ್ನು ಬುಡಕಟ್ಟು ಜನರ ಪರವಾಗಿ ತರುತ್ತೇವೆ... ಬುಡಕಟ್ಟು ಜನರ ಪರವಾಗಿ ಜಾರಿ ಮಾಡುತ್ತೇವೆ ಎಂಬಂತೆ ವೊಂಡಾಟ ಬಂಡಾಟ

ಪುಟ 4ಕ್ಕೆ......

(ಅರ್ಜಿ ಹಾಕುವ ವಿಧಾನ ಹಾಗೂ ಕ್ರಮಗಳ ಕುರಿತ ಮಾಹಿತಿಗಾಗಿ ಮತ್ತು ಪುರಸ್ಕೃತ ಹಾಗೂ ತಿರಸ್ಕೃತ ಅರ್ಜಿಗಳ ಮಾಹಿತಿಗಾಗಿ ಪುಟ 5 ರ ಬಾಕ್ಸ್ ಮತ್ತು ಟೇಬಲ್ ನೋಡಿ)

ನಾಳಿನ ಕಾರ್ಯಕ್ರಮಗಳು

ಏಪ್ರಿಲ್ 17-18, 2012- ಸಿಐಟಿಯು ನೇತೃತ್ವದಲ್ಲಿ ಕನಿಷ್ಟ ಕೂಲಿ ಹೆಚ್ಚಳ ಸೇರಿದಂತೆ ಅಸಂಘಟಿತ ಕಾರ್ಮಿಕರ ಬೇಡಿಕೆಗಳಿಗಾಗಿ ರಾಜ್ಯವ್ಯಾಪಿ ಹೋರಾಟ... - **ಏಪ್ರಿಲ್ 19** ಬೆಂಗಳೂರಿನಲ್ಲಿ ಸಾಮೂಹಿಕ ಧರಣಿ.

ಏಪ್ರಿಲ್ 22, 2012 - ನಗರ ಸಭೆ-ಪುರಸಭೆಗಳಲ್ಲಿ ಕೆಲಸ ಮಾಡುವ ಪೌರ ಕಾರ್ಮಿಕರ ರಾಜ್ಯ ಸಮಾವೇಶ, ಬೆಂಗಳೂರು.

ಮೇ 8-9, 2012 - ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನ ಮಂಗಳೂರಿನಲ್ಲಿ.

ಮೇ 21, 2012 - ಭೂಮಿ, ಮನೆ-ನಿವೇಶನಕ್ಕಾಗಿ ರಾಜ್ಯ ಮಟ್ಟದ ಬೃಹತ್ ಅನಿರ್ದಿಷ್ಟಾವಧಿ "ಮಹಾಧರಣಿ" - ಬೆಂಗಳೂರು.

ಸೆಪ್ಟಂಬರ್ 9 ರಿಂದ 12, 2012- ಡಿವೈಎಫ್ಐನ 9ನೇ ಅಖಿಲ ಭಾರತ ಸಮ್ಮೇಳನ - ಬೆಂಗಳೂರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ರಾಜ್ಯದಲ್ಲಿ ಭೀಕರ ಬರಗಾಲ- ಬಿಜೆಪಿ ಸರಕಾರದ ನಿರ್ಲಕ್ಷತನ, ಮೋಜು

13-04-2012 ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಲಾದ ಹೇಳಿಕೆ

ಏಪ್ರಿಲ್ 23ರಂದು ಸಿಪಿಐ(ಎಂ) ಪ್ರತಿಭಟನೆಗೆ ಕರೆ

ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಲಿದೆ ಎಂದು ರಾಜ್ಯ ಸರಕಾರಕ್ಕೆ 6 ತಿಂಗಳ ಹಿಂದೆಯೇ ಗೊತ್ತಾಗಿತ್ತು. ಅಕ್ಟೋಬರ್ ತಿಂಗಳಲ್ಲೇ ಬರಗಾಲವಿದೆ ಎಂದು ಸರಕಾರ ಘೋಷಿಸಿತ್ತು. ಫೆಬ್ರುವರಿಯಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಒಟ್ಟು 123 ತಾಲ್ಲೂಕುಗಳಲ್ಲಿ ತೀವ್ರ ಬರಗಾಲವಿದೆ ಎಂದು ವರದಿ ನೀಡಲಾಯಿತು. ಆದರೆ ಅಕ್ಟೋಬರ್‌ನಿಂದ ಇಲ್ಲಿಯವರೆಗೆ ಮುಖ್ಯಮಂತ್ರಿಯವರೂ ಸೇರಿದಂತೆ ಯಾವ ಸಚಿವರು ಎಷ್ಟು ತಾಲ್ಲೂಕುಗಳಿಗೆ ಭೇಟಿ ನೀಡಿದ್ದಾರೆ ಎಂದು ಗಮನಿಸಿದರೆ ತೀರಾ ವಿರಳ. ಬಿಜೆಪಿ ಪಕ್ಷದಲ್ಲಿನ ಅಧಿಕಾರ ದಾಹ, ಒಳಜಗಳದಿಂದಾಗಿ, ಬಹುತೇಕ ಸಚಿವರು, ಶಾಸಕರು ದೆಹಲಿ ಓಡಾಟ,ರೆಸಾರ್ಟ್ ವಾಸಗಳಲ್ಲೇ ಕಾಲ ಕಳೆದಿದ್ದರು.

ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ತಮ್ಮ ಬಜೆಟ್ ಭಾಷಣದಲ್ಲಿ 55,90,000 ಎಕರೆ ಕೃಷಿ ಬೆಳೆ ಮುಂಗಾರು(ಖಾರೀಫ್) ಸೀಸನ್‌ನಲ್ಲಿ ಮತ್ತು 30,28,000 ಎಕರೆ ಪ್ರದೇಶದ ಬೆಳೆ ಹಿಂಗಾರು(ರಾಬಿ) ಸೀಸನ್‌ನಲ್ಲಿ ನಷ್ಟವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಇದಲ್ಲದೆ ಕುಡಿಯುವ ನೀರು, ಜಾನುವಾರುಗಳಿಗೆ ನೀರು, ಮೇವು ಪೂರೈಸಬೇಕಾಗಿದೆ. ಆದರೆ ಇದನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರ ವಿಫಲವಾಗಿದೆ. ಬಿಜೆಪಿಯಲ್ಲಿನ ಒಳ ಜಗಳ, ಹಗರಣ-ಅಕ್ರಮಗಳಿಂದಾಗಿ, ಆಡಳಿತ ಯಂತ್ರವನ್ನು ಚುರುಕುಗೊಳಿಸಲು ಸಾಧ್ಯವಾಗುತ್ತಿಲ್ಲ. ಅದು ಸಂಪೂರ್ಣ ನಿಷ್ಕ್ರಿಯವಾಗಿದೆ.

4853 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೀವ್ರ ತೊಂದರೆಯಿದೆಯೆಂದು ಕಂದಾಯ ಇಲಾಖೆಯ ಅಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ. ಆದರೆ ಈವರೆಗೆ ಟ್ಯಾಂಕರ್‌ಗಳ ಮೂಲಕ ನೀರು ಒದಗಿಸಿರುವುದು ಕೇವಲ 400 ಗ್ರಾಮಗಳಿಗೆ ಮಾತ್ರ. ಕೆಲವೆಡೆ ಬಾವಿಗಳಲ್ಲಿ ನೀರಿದ್ದರೂ, ವಿದ್ಯುತ್ ಇಲ್ಲದೆ ನೀರು ಪೂರೈಸಲಾಗುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿಲ್ಲದೆ, ಜನರು ಮಂತ್ರಿಗಳಿಗೆ ಘೇರಾವ್ ಮಾಡಿದ ವರದಿಗಳು ಬಂದಿವೆ.



ಆಡಳಿತ ಯಂತ್ರ ಚುರುಕುಗೊಳಿಸಿ ಕಾರ್ಯಕ್ಕಿಳಿಸಲು ಬಹುತೇಕ ಜಿಲ್ಲೆಗಳ ಉಸ್ತುವಾರಿ ಸಚಿವರು ಪ್ರಯತ್ನವನ್ನೇ ನಡೆಸಿಲ್ಲ. ಬದಲಾಗಿ ಮೊನ್ನೆ ಮೊನ್ನೆಯವರೆಗೆ 'ರೆಸಾರ್ಟ್ ರಾಜಕೀಯ' ದಲ್ಲೇ ಮುಳುಗಿದ್ದರು. ಕೊಪ್ಪಳ ಜಿಲ್ಲೆಯಲ್ಲಿಯಂತೂ ಉಸ್ತುವಾರಿ ಸಚಿವರೇ ಇಲ್ಲ. 'ಜನರ ಕಷ್ಟವನ್ನು ಕೇಳಲಾಗದೆ, ರೆಸಾರ್ಟ್‌ಗೆ ಬಂದಿದ್ದೇವೆ' ಎಂದು ಸಚಿವರಾದ ರೇವುನಾಯಕ್ ಬೆಳಮಗಿ ಒಪ್ಪಿಕೊಂಡಿದ್ದಾರೆ.

ಪತ್ರಿಕೆಗಳಲ್ಲಿ ಬಂದಿರುವ ವರದಿಗಳ ಪ್ರಕಾರ ಜಿಲ್ಲಾಧಿಕಾರಿಗಳ ಖಾತೆಗೆ 182 ಕೋಟಿ ಜಮಾ ಆಗಿದ್ದು, ಇನ್ನೂ 175 ಕೋಟಿ ರೂ. ಅವರ ಬಳಿಯಲ್ಲಿದೆ, ಅಂದರೆ ಖರ್ಚು ಮಾಡಿದ್ದು ಕೇವಲ 7 ಕೋಟಿ ರೂ. ಮಾತ್ರ. ದುಂದು ವೆಚ್ಚ ಮಾಡಬಾರದು ಎಂಬುದು ಸರಿ, ಆದರೆ ಕುಡಿಯುವ ನೀರು, ಮೇವು, ಬೆಳೆ ನಷ್ಟ ಪರಿಹಾರ, ನೀಡಲು ಹಣ ಬೇಕು. ಇಲ್ಲವಾದರೆ, ಗ್ರಾಮೀಣ ಪ್ರದೇಶದ ಜನತೆ ಬದುಕುವುದಾದರೂ ಹೇಗೆ? ಜೊತೆಯಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ನೀಡುವುದನ್ನು ಹೆಚ್ಚಿಸಬೇಕು. ಇಲ್ಲವಾದಲ್ಲಿ ಕೆಲಸಕ್ಕಾಗಿ ಪರದಾಡುತ್ತಾ ಜನ ಗುಳೆ ಹೋಗುತ್ತಾರೆ. ಈಗಾಗಲೇ ಜನ ಗುಳೆ ಹೋಗುತ್ತಿದ್ದಾರೆ ಎಂಬ ವರದಿಗಳು ಬರುತ್ತಿವೆ. ಸಾಮಾನ್ಯ ಜನ ಗುಳೆ ಹೋಗುತ್ತಿದ್ದರೆ, ಸಚಿವರು, ಶಾಸಕರು ಮೋಜಿನಲ್ಲಿ ಕಾಲ ಕಳೆಯುತ್ತಿದ್ದಾರೆ ಅಥವಾ ಬರ ಪರಿಶೀಲನೆ ಹೆಸರಿನಲ್ಲಿ ವಿಮಾನಯಾನ, ಹೆಲಿಕಾಪ್ಟರ್ ಪ್ರಯಾಣ ಹೆಚ್ಚಾಗಿದೆ.

35. ಕೆ.ಜಿ ಆಹಾರ ಧಾನ್ಯ 2ರೂ. ದರದಲ್ಲಿ ನೀಡಿ :

ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಬಿಜೆಪಿ ಸರಕಾರಕ್ಕೆ ಒತ್ತಾಯಿಸುವುದೇನೆಂದರೆ, ಅಧಿಕಾರಕ್ಕೆ ಬರುವ ಮೊದಲು ನಿಮ್ಮ ಪ್ರಣಾಳಿಕೆಯಲ್ಲಿ 35. ಕೆ.ಜಿ ಆಹಾರ ಧಾನ್ಯವನ್ನು ಕೆ.ಜಿಗೆ 2ರೂ ದರದಲ್ಲಿ ನೀಡುವುದಾಗಿ ವಚನವಿತ್ತಿದ್ದೀರಿ. ಆದಾಯ ಮಿತಿಯನ್ನು 30,000 ರೂ.ಗೆ ಹೆಚ್ಚಿಸುದಾಗಿ ಹೇಳಿದ್ದೀರಿ, ನೀವು ವಚನ ಭ್ರಷ್ಟರಾಗಿದ್ದೀರಿ. 123 ತಾಲ್ಲೂಕುಗಳಲ್ಲಿ ಭೀಕರ ಬರ ಅವರಿಸಿರುವ ಹಿನ್ನೆಲೆಯಲ್ಲಿ ಈಗಲಾದರೂ ಪ್ರತಿ ಕುಟುಂಬಕ್ಕೆ 35.ಕೆ.ಜಿ ಆಹಾರ ಧಾನ್ಯವನ್ನೂ ಕೆ.ಜಿ ಗೆ 2ರೂ. ದರದಂತೆ ನೀಡಬೇಕು. ಇಲ್ಲವಾದಲ್ಲಿ ಅಧಿಕಾರದಲ್ಲಿ ಮುಂದುವರೆಯಲು ನಿಮಗೆ ಯಾವುದೇ ಹಕ್ಕು ಉಳಿದಿಲ್ಲ

ಜನರ ಹಾಹಾಕಾರದ ನಡುವೆಯೂ ಅಭಿವೃದ್ಧಿಯ ಮ(ತ)ಂತ್ರ :

ಬರಗಾಲದಿಂದ ರಾಜ್ಯದ ಅರ್ಧಕ್ಕಿಂತಲೂ ಹೆಚ್ಚು ಜನರು ತತ್ತರಿಸುತ್ತಿದ್ದರೆ. ಮುಖ್ಯಮಂತ್ರಿಯವರಂತೂ, ರಾಜ್ಯವನ್ನು ಮಾರಲು ಕೈಗಾರಿಕಾ ಮಂತ್ರಿಗಳೊಂದಿಗೆ ಬಂಡವಾಳಗಾರರನ್ನು ಕರೆದು ತರಲು ವಿದೇಶ ಪ್ರಯಾಣಕ್ಕೆ ಸಜ್ಜಾಗಿದ್ದರು. ಅಂದರೆ ಬರ ಪರಿಹಾರಕ್ಕೆ ವ್ಯವಸ್ಥೆ ಇಲ್ಲ. ಆದರೆ ದೊಡ್ಡ ಮತ್ತು ವಿದೇಶಿ ಬಂಡವಾಳಗಾರರಿಗೆ ಡೊಗ್ಗು ಸಲಾಮು ಹಾಕಲು ಮುಖ್ಯಮಂತ್ರಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಅಲ್ಲದೆ ಬಂಡವಾಳ ಹೂಡಿಕೆದಾರರ ಸಮಾವೇಶದ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ದುಂದುವೆಚ್ಚವಾಗುತ್ತಿದೆ. ಸದ್ಯ ಮುಖ್ಯಮಂತ್ರಿಗಳು ವಿದೇಶಿ ಪ್ರವಾಸ ರದ್ದುಗೊಳಿಸಿದ್ದು ಸಾರ್ವಜನಿಕ ಒತ್ತಡದ ಬಳಿಕವೇ ಹೊರತು ಆತ್ಮಸಾಕ್ಷಿಯ ಪ್ರೇರಣೆಯಿಂದಲ್ಲ.

ಉದಾರೀಕರಣ ನೀತಿಯಲ್ಲಿ ಸಂಪೂರ್ಣ ನಂಬಿಕೆ ಇಟ್ಟಿರುವ ಬಿಜೆಪಿ ಮತ್ತು ಕಾಂಗ್ರೆಸ್‌ಪಕ್ಷಗಳ ನಾಯಕರು ಬರಗಾಲದಲ್ಲೂ 'ಅಭಿವೃದ್ಧಿಯ' ಕನಸು ಕಾಣುತ್ತಿದ್ದಾರೆ!. ಅವರ ಧೋರಣೆಯ ಪ್ರಕಾರ ಬರಗಾಲಕ್ಕೆ ಹಣ ನೀಡುವುದೆಂದರೆ, ತಾತ್ಕಾಲಿಕ ವ್ಯರ್ಥ- ಉದಾರೀಕರಣ ನೀತಿ ಜ್ಯಾರಿಯಾಗುವ ಮೊದಲು ಬರಗಾಲ, ಪ್ರವಾಹ ಬಂತೆಂದರೆ, ಸಚಿವರು, ಶಾಸಕರು ಕನಿಷ್ಠ ದೌಡಾಯಿಸುತ್ತಿದ್ದರು. ಗೋಶಾಲೆ, ಗಂಜಿ ಕೇಂದ್ರ, ಮೇವಿನ ಬ್ಯಾಂಕ್‌ಗಳನ್ನು ತೆರೆಯುತ್ತಿದ್ದರು. ಕಾಮಗಾರಿಗಳ ಮೂಲಕ ಬಡ ಜನರಿಗೆ ಉದ್ಯೋಗ ನೀಡುತ್ತಿದ್ದರು. ಆದರೆ ಈಗ ಇಂತಹ ಕೆಲಸಗಳು 'ಅನಭಿವೃದ್ಧಿ'ಯ ಸಾಲಿಗೆ ಸೇರುತ್ತಿವೆ. ಆದ್ದರಿಂದಲೇ 3 ವರ್ಷಗಳ ಹಿಂದೆ ಅತಿವೃಷ್ಟಿಯಾದಾಗ ಖರ್ಚು 7750 ಕೋಟಿ ಅಂದಾಜು ಮಾಡಿದ್ದರೂ, ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟು ವೆಚ್ಚ ಮಾಡಿದ್ದು 1878 ಕೋಟಿ ರೂ. ಮಾತ್ರ ಶೇ 25ಕ್ಕಿಂತ ಕಡಿಮೆ.

ಇಲ್ಲಿ ಕೇಂದ್ರ ಸರಕಾರದ ನಿರ್ಲಕ್ಷತನವೂ ಗಮನಿಸುವಂತಹದ್ದು. ಕರ್ನಾಟಕದಲ್ಲಿ ಅಧಿಕೃತ ವಿರೋಧ ಪಕ್ಷವಾಗಿರುವ , ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವು ಇದರತ್ತಲೂ ಕ್ರಮವಹಿಸುವ ಹೊಣೆಯಿದೆ.

ಆದ್ದರಿಂದ ಬರ ಪರಿಹಾರ ಕಾಮಗಾರಿಗಳನ್ನು ತೀವ್ರಗೊಳಿಸಬೇಕು, ಹೆಚ್ಚು ಹಣ ಬಿಡುಗಡೆ ಮಾಡಬೇಕು ಎಂದು ಸಿ.ಪಿ.ಐ (ಎಂ) ರಾಜ್ಯ ಸಮಿತಿಯು ಒತ್ತಾಯಿಸುತ್ತದೆ. ಮುಖ್ಯಮಂತ್ರಿಗಳು ಹಾಗೂ ಇನ್ನಿತರ ಮಂತ್ರಿಗಳು ವಿದೇಶಿ ಪ್ರವಾಸ, ಹೆಲಿಕಾಪ್ಟರ್ ಪ್ರವಾಸ, ರೆಸಾರ್ಟ್ ವಾಸಗಳನ್ನು ನಿಲ್ಲಿಸಬೇಕೆಂದು ಆಡಳಿತದತ್ತ ಗಮನ ನೀಡಬೇಕು .

ಬರಗಾಲದ ಈ ಸನ್ನಿವೇಶದಲ್ಲಿ, ಅಬ್ಬರದ ಪ್ರಚಾರಕ್ಕಾಗಿ ಕೋಟ್ಯಾಂತರ ರೂಪಾಯಿ ದುಂದು ವೆಚ್ಚ ಮಾಡುವ ,ಕೃಷಿ ನಾಶಗೊಳಿಸುವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಕೂಡ ರದ್ದುಗೊಳಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಜನತೆಯ ಗಂಭೀರ ಸಮಸ್ಯೆಗಳ ಹಿನ್ನೆಲೆಯಲ್ಲಿ, ಆಡಳಿತದ ಜನವಿರೋಧಿ ನಿರ್ಲಕ್ಷತನದ ವಿರುದ್ಧ, ತೀವ್ರ ಪರಿಹಾರ ಕಾರ್ಯಕ್ಕಾಗಿ ಇದೇ ಏಪ್ರಿಲ್ 23ರಂದು ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಸರಕಾರಿ ಕಛೇರಿಗಳೆದುರು ಪ್ರತಿಭಟಿಸಲು ಸಿಪಿಐ(ಎಂ) ರಾಜ್ಯ ಸಮಿತಿ ಕರೆ ನೀಡಿದೆ.


ಬಿಜೆಪಿ ಸರಕಾರದ ನೀತಿ

ಜನರು ಸಂಕಷ್ಟದಲ್ಲಿರುವಾಗ ಕಾಲಹರಣ ಮಾಡುವುದು, ಮೋಜು ಮಾಡುವುದು ಬಿಜೆಪಿಗೆ ಹೊಸದೇನಲ್ಲ, 3ವರ್ಷಗಳ ಹಿಂದೆ ನೆರೆ ಹಾವಳಿಯಿಂದ ಜನರು ಸಂಕಷ್ಟಕ್ಕೊಳಗಾದಾಗ ಬಿಜೆಪಿ ಶಾಸಕರು, ಸಚಿವರು ಮೈಸೂರಿನಲ್ಲಿ ಆರ್.ಎಸ್.ಎಸ್ ಆಶ್ರಯದಲ್ಲಿ ಚೆನ್ನಾಗಿ ತಿಂದುಂಡು, ವ್ಯಾಯಾಮ ಮಾಡುತ್ತಾ ಕಾಲಹರಣ ಮಾಡುತ್ತಿದ್ದರು. ಈಗ ಬರಗಾಲ ಬಂದಿರುವಾಗ ಇನ್ನೂ ಹೆಜ್ಜೆ ಮುಂದೆ ಹೋಗಿ ರೆಸಾರ್ಟ್‌ನಲ್ಲಿ ಮೋಜು ಮಾಡುತ್ತಿದ್ದಾರೆ.

ಇಂತಹ ಸರಕಾರದಿಂದ ಬರ ಪರಿಹಾರ ನಿರೀಕ್ಷಿಸುವುದು ಸಾಧ್ಯವೇ? ಇಂದು ಬಿಜೆಪಿಯೊಳಗಿನ ಎರಡು ಗುಂಪುಗಳು ಜನರ ಸಂಕಷ್ಟಕ್ಕೆ ಧಾವಿಸುವ ಬದಲಾಗಿ ಒಬ್ಬರು ಇನ್ನೊಬ್ಬರ ಮೇಲೆ ಕೆಸರೆರೆಚಲು ಬಳಸುತ್ತಿವೆ.ಇದು ಖಂಡನೀಯ.

(ಈ ಪತ್ರಿಕಾ ಗೋಷ್ಠಿಯಲ್ಲಿ ರಾಜ್ಯ ಕಾರ್ಯದರ್ಶಿಯವರಾದ ಜಿ.ವಿ ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್, ವಿ.ಜೆ.ಕೆ ನಾಯರ್ ಹಾಜರಿದ್ದರು.)

ಕಾರ್ಟೂನ್ ಕಾರ್ನರ್



ಕೃಪೆ : ದಿ ಹಿಂದು

......ಬಡ ರೈತರು, ಆದಿವಾಸಿಗಳಿಗೆ ಕೊಡಿ ಅರಣ್ಯ ಭೂಮಿಯ ಹಕ್ಕು

ಪುಟ 2 ರಿಂದ

ಮಾಡುವುದೆಲ್ಲವೂ ಬರಿ ತೋರಿಕೆಯ ಬೂಟಾಟಿಕೆ ಎಂಬುದು ಸಿದ್ಧವಾಗುತ್ತದೆ.

ಅದೇ ರೀತಿ ಒಟ್ಟು ಅರ್ಜಿಗಳಲ್ಲಿ 1,39,848 ಅರ್ಜಿಗಳು ಬುಡಕಟ್ಟು ಅಲ್ಲದ ಇತರರದ್ದು. ಅದರಲ್ಲಿ ಅಂಗೀಕಾರವಾಗಿರುವುದು ಕೇವಲ 57 ಅರ್ಜಿಗಳು. ಶೇ. 1 ಅಂಶದಷ್ಟು ಅರ್ಜಿಗಳನ್ನು ಕೂಡ ಅಂಗೀಕರಿಸಿಲ್ಲ.

ಬಡ ರೈತರ ಬದುಕಿನ ಕುರಿತ ಬಿಜೆಪಿ ಸರ್ಕಾರದ ದಿವ್ಯ ತಿರಸ್ಕಾರಕ್ಕೆ ಇದಕ್ಕಿಂತ ಇನ್ನು ಬೇರೆ ಯಾವ ಉದಾಹರಣೆ ಬೇಕಾಗಿದೆ. ತಮ್ಮದು ರೈತ ಪರ ಸರ್ಕಾರ, ತಮ್ಮದು ರೈತ ಪರ ಬಜೆಟ್, ಕೃಷಿ ಬಜೆಟ್ ಎಂದೆಲ್ಲಾ ಬೊಬ್ಬೆ ಹೊಡೆಯುವ ಬಿಜೆಪಿ ಪಕ್ಷದ ಕೂಗು ಮಾರಿ ನಾಯಕರ ಮುಖದ ಮುಂದೆ ಈ ಅಂಕಿ-ಸಂಖ್ಯೆ, ಮಾಹಿತಿ ಹಿಡಿದು ಇಲ್ಲಿ ಅರ್ಜಿ ಹಾಕಿದ ಬಡ ಜನರು ರೈತರಲ್ಲವೇ. ಅವರು ಮನುಷ್ಯರಲ್ಲವೇ ? ತಾವು ಯಾವ ರೈತರ ಪರ, ತಮ್ಮದು ಯಾವ ರೈತ ಪರ ಬಜೆಟ್ ಎಂದು ಜನರು ಕೇಳಬೇಕಾಗಿದೆ.

ಇಲ್ಲಿ ಇನ್ನೊಂದು ಮುಖ್ಯ ಅಂಶವನ್ನು ಗಮನಿಸಬಹುದು. ಪುರಸ್ಕರಿಸಲಾದ 6,073 ಅರ್ಜಿಗಳ ಸಂಬಂಧ ಮಂಜೂರಾದ ಒಟ್ಟು ಅರಣ್ಯ ಭೂಮಿ ಎಷ್ಟು ಗೊತ್ತೆ ? ಕೇವಲ 8,503 ಎಕರೆ. ಅಂದರೆ ಸರಳವಾಗಿ ಹೇಳುವುದಾದರೆ ಸರಾಸರಿ ಲೆಕ್ಕದಲ್ಲಿ ಕುಟುಂಬವೊಂದಕ್ಕೆ ಒಂದೂಕಾಲು ಎಕರೆ ಭೂಮಿ ಕೂಡ ಸಿಕ್ಕಿಲ್ಲ. ಒಟ್ಟಾರೆಯಾಗಿ ನೋಡಿದಾಗ ಅಂದರೆ ಅರ್ಜಿ ಸಲ್ಲಿಸಿದವರಲ್ಲಿ ಸು. ಶೇಕಡಾ 4 ರಷ್ಟು ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗಿದೆ. ಉಳಿದವು ತಿರಸ್ಕೃತಗೊಂಡಿವೆ. ಅಥವಾ ಇತ್ಯರ್ಥವಾಗದೇ ನೆನೆಗುದಿಯಲ್ಲೇ ಬಿದ್ದಿವೆ.

ಆಯ್ದ ಕಡೆ ಮಾತ್ರ ಅರಣ್ಯ ಹಕ್ಕು ಸಮಿತಿಗಳು.

ಈ ವಿಷಯದಲ್ಲಿ ಬಿಜೆಪಿ ಸರ್ಕಾರದ ಬದ್ಧತೆ ಏನೆಂದು ಅರ್ಥವಾಗಬೇಕಾದರೆ ಸರ್ಕಾರ ಈ ಅರಣ್ಯ ಹಕ್ಕು ಸಮಿತಿಗಳನ್ನು ಎಲ್ಲೆಲ್ಲಿ ಮಾಡಲಾಗಿದೆ ಎಂದು ನೋಡಬೇಕು. ಸರ್ಕಾರದ ಈ ಮೇಲ್ಕಂಡ ಪಟ್ಟಿಯಲ್ಲಿ ಕೇವಲ 8 ಜಿಲ್ಲೆಗಳ ವಿವರಗಳು ಮಾತ್ರ ಇವೆ. ಉಳಿದ ಜಿಲ್ಲೆಗಳ ವಿವರ ಇಲ್ಲ. ಏಕೆಂದರೆ ಸರ್ಕಾರ ಈ ಜಿಲ್ಲೆಗಳಲ್ಲಿ ಸಮಿತಿಗಳನ್ನು ರಚಿಸಿಯೇ ಇಲ್ಲ. ಯಾವ ಯಾವ ಜಿಲ್ಲೆಗಳಲ್ಲಿ ಆದಿವಾಸಿ ಜನರ ಸಂಖ್ಯೆ ಹೆಚ್ಚು ಇದೆ ಎಂದು ಸರ್ಕಾರ ಭಾವಿಸಿದೆಯೋ ಆ ಜಿಲ್ಲೆಗಳಲ್ಲಿ ಅಂತಹ ಕಡೆಗಳಲ್ಲಿ ಮಾತ್ರವೇ ಸರ್ಕಾರ ಸಮಿತಿ ರಚಿಸಿದೆ. ನೂತನ ಕಾಯ್ದೆಯು ಬುಡಕಟ್ಟು ಅಲ್ಲದ ಇತರರಿಗೂ ಅರಣ್ಯ ಭೂಮಿಯ ಹಕ್ಕು ನೀಡುತ್ತಿರುವಾಗ ಕೇವಲ ಆದಿವಾಸಿಗಳು ಹೆಚ್ಚಿರುವ ಭಾಗಗಳಲ್ಲಿ ಮಾತ್ರ ಸಮಿತಿ ರಚಿಸುವುದೆಂದರೇನು ?

ಹೋಗಲಿ ಬುಡಕಟ್ಟು ಜನರು ಹೆಚ್ಚಾಗಿರುವ ಎಲ್ಲ ಜಿಲ್ಲೆಗಳಲ್ಲಿ, ಎಲ್ಲ ಭಾಗಗಳಲ್ಲಿ ಸಮಿತಿ ರಚಿಸಲಾಗಿದೆಯಾ ಎಂದರೆ ಅದೂ ಸಹ ಇಲ್ಲ. ಬುಡಕಟ್ಟು ಜನರ ಸಂಖ್ಯೆ ವ್ಯಾಪಕವಾಗಿರುವ ರಾಮ ನಗರ, ಹಾಸನ, ಬೆಂಗಳೂರು ಗ್ರಾಮಾಂತರ ಮುಂತಾದ ಜಿಲ್ಲೆಗಳನ್ನು ಈ ವಿಷಯದಲ್ಲಿ ಲೆಕ್ಕಕ್ಕೇ ಇಟ್ಟುಕೊಂಡಿಲ್ಲ ಎನ್ನುವುದು ಎದ್ದು ಕಾಣುತ್ತಿದೆ.

ಸರ್ಕಾರದ ಈ ವಕ್ರ ಧೋರಣೆಯನ್ನು ಹಿಮ್ಮೆಟ್ಟಿಸಬೇಕಾಗಿದೆ. ಆಯ್ದ ಜಿಲ್ಲೆ, ಆಯ್ದ ಭಾಗಗಳಲ್ಲಿ ಮಾತ್ರವೇ ಅಲ್ಲ ಎಲ್ಲ ಕಡೆಗಳಲ್ಲಿ ಗ್ರಾಮ ಮಟ್ಟದ ಅರಣ್ಯ ಹಕ್ಕು ಸಮಿತಿ ರಚನೆಗಾಗಿ ಚಳುವಳಿ ಶ್ರಮಿಸಬೇಕಾಗಿದೆ. ಏಕೆಂದರೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಅರಣ್ಯ ಇದೆ. ಅರಣ್ಯ ಭೂಮಿ ಇದೆ. ಆ ಅರಣ್ಯ ಭೂಮಿಯಲ್ಲಿ ವಾಸ ಮಾಡುವ, ಸಾಗುವಳಿ ಮಾಡುವ ಬುಡಕಟ್ಟು ಜನರು, ಹಾಗೂ ಬುಡಕಟ್ಟೇತರ ಜನರು ಗಣನೀಯ ಸಂಖ್ಯೆಯಲ್ಲಿ ಇದ್ದಾರೆ.

ಜಡ್ಡುಗಟ್ಟಿ ಜಡಗೊಂಡಿರುವ ಆಡಳಿತ

ರಾಮನಗರ ಜಿಲ್ಲೆಯಲ್ಲಿ ಅರಣ್ಯ ಭೂಮಿ ಸಾಗುವಳಿ ಮಾಡುವ ಬುಡಕಟ್ಟು ಜನರು ಮತ್ತು ಬಡ ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸುವುದರ ವಿರುದ್ಧ ನಡೆದ ಯಶಸ್ವಿ ಹೋರಾಟಗಳ ಬಗೆಗೆ ಈ ಹಿಂದೆ ಇದೇ ಪತ್ರಿಕೆಯಲ್ಲಿ ವರದಿಯಾಗಿದೆ. ಈ ಜಿಲ್ಲೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಬುಡಕಟ್ಟು ಜನರು ಅರಣ್ಯ ಭೂಮಿ ಸಾಗುವಳಿ ಮಾಡುತ್ತಿದ್ದಾರೆ. ಆದರೆ ಈ ಜಿಲ್ಲೆಯಲ್ಲಿ ಅರಣ್ಯ ಹಕ್ಕು ಸಮಿತಿ ರಚನೆ ಆಗಿಲ್ಲ. ಈ ಬಗೆಗೆ ಹೋರಾಟ ನಿರತ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರು ರೆವಿನ್ಯೂ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಹಾಗು ಸಮಾಜ ಕಲ್ಯಾಣ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ, ಮತ್ತು ರಾಮನಗರ ಜಿಲ್ಲಾಧಿಕಾರಿಗಳನ್ನು ಮೂರು ಬಾರಿ ಕಂಡು ಮಾತನಾಡಿದರೂ ಕೂಡ ಇಂದಿಗೂ ಜಿಲ್ಲೆಯಲ್ಲಿ ಸರಿಯಾದ ಕ್ರಮ ಜಾರಿಗೆ ಬಂದೇ ಇಲ್ಲ. ಇತ್ತೀಚಿಗೆ ಕೆಲವು ಕಡೆಗಳಲ್ಲಿ ಮಾತ್ರ ಸಮಿತಿ ರಚಿಸಲಾಗಿದೆ. ಅದೇ ರೀತಿಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ, ಆನೇಕಲ್, ಬನ್ನೇರುಘಟ್ಟ, ಕನಕಪುರಗಳಲ್ಲಿ ಬಡವರು ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡು ಕೃಷಿ ಮಾಡುತ್ತಿರುವುದು ವ್ಯಾಪಕವಾಗಿದ್ದರೂ ಆಡಳಿತ, ಸರ್ಕಾರಗಳು ಈ ಜನರ ಸಮಸ್ಯೆಗಳಿಗೆ ಪರಿಹಾರವನ್ನು ಮಾತ್ರ ಒದಗಿಸಿಲ್ಲ.

ಮನಸ್ಸಿಲ್ಲ, ರಾಜಕೀಯ ಇಚ್ಛಾಶಕ್ತಿ ಇಲ್ಲವೇ ಇಲ್ಲ

ಬಡ ರೈತರು, ಬುಡ ಕಟ್ಟು ಜನರ ಬದುಕಿನ ಜ್ವಲಂತ ಪ್ರಶ್ನೆಯಲ್ಲಿ ರಾಜ್ಯದ ಆಡಳಿತ ಯಂತ್ರ ಜಡ್ಡುಗಟ್ಟಿದ ಧೋರಣೆ ಹೊಂದಿರುವುದು ಕೇವಲ ಆಕಸ್ಮಿಕವಲ್ಲ. ಆಳುವ ಸರ್ಕಾರಕ್ಕೆ ಈ ಪ್ರಶ್ನೆಯನ್ನು ಇತ್ಯರ್ಥ ಪಡಿಸುವ ನಿಟ್ಟಿನಲ್ಲಿ ಯಾವುದೇ ತುಡಿತ, ಆಸಕ್ತಿ, ಬದ್ಧತೆ, ಉದ್ದೇಶ ಇಲ್ಲ ಎಂಬುದು ಆಡಳಿತ ಯಂತ್ರ ನಡೆಸುವ ಮುಂಚೂಣಿ ಜನರಿಗೆ ಗೊತ್ತಿದೆ.

ಈಗ ತರಲಾಗಿರುವ ಕಾಯ್ದೆ ಕಾನೂನಿನಲ್ಲಿ ಏನೇ ಲೋಪ, ಕೊರತೆ ಇದ್ದಾಗಲೂ ಸಹ ಆಳುವ ಸರ್ಕಾರಕ್ಕೆ ನಿಜವಾಗಿಯೂ ಆಸಕ್ತಿ ಇದ್ದರೆ ಇರುವ ಕಾನೂನಿನ ಅವಕಾಶ ಬಳಸಿಕೊಂಡು ಏನೆಲ್ಲ ಮಾಡ ಬಹುದು ಎಂಬುದಕ್ಕೆ ಭಾರತದ ಈಶಾನ್ಯ ಭಾಗದ ಪುಟ್ಟ ರಾಜ್ಯ ತ್ರಿಪುರವೇ ಸಾಕ್ಷಿ.

'ತ್ರಿಪುರ' ಸಾಕ್ಷಿ

ಕೇವಲ ಎರಡು ಲೋಕ ಸಭಾ ಕ್ಷೇತ್ರವನ್ನಷ್ಟೆ ಹೊಂದಿರುವ ಈ ಸಣ್ಣ ರಾಜ್ಯದಲ್ಲಿ ಸಿಪಿಐ(ಎಂ) ನೇತೃತ್ವದ ಚುನಾಯಿತ ಎಡರಂಗ ಸರ್ಕಾರ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಎಕರೆ ಅರಣ್ಯ ಭೂಮಿಯನ್ನು ಹಂಚಿದೆ. ಆಳುವ ಸರ್ಕಾರಗಳಿಗೆ ನಿಜವಾದ ಕಾಳಜಿ ಎಂಬುದೊಂದು ಇದ್ದರೆ ಏನು ಸಾಧ್ಯ ಎಂದು ತ್ರಿಪುರ ರಾಜ್ಯ ಇಡೀ ದೇಶಕ್ಕೆ ತೋರಿಸಿದೆ. ಇಂತಹ ನೀತಿಗಳ ಫಲವಾಗಿಯೇ ತ್ರಿಪುರ ರಾಜ್ಯವು, ಸಾಕ್ಷರತೆ, ಜನಾರೋಗ್ಯ ಮುಂತಾದ ಪ್ರಶ್ನೆಗಳಲ್ಲಿ ಜನಪರವಾದ ಪ್ರಗತಿಯ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದೆ.

ಕರ್ನಾಟಕದಲ್ಲಿ ಬಡ ರೈತರ ಬೇಡಿಕೆಗಳ ನಿರ್ಲಕ್ಷ್ಯ ಮಾತ್ರವೇ ಸಮಸ್ಯೆಯಾಗಿ ಕಾಡುತ್ತಿರುವುದಲ್ಲ. ಇಲ್ಲಿ ಬಡರೈತರನ್ನು ಅದರಲ್ಲೂ ಅರಣ್ಯ ಪ್ರದೇಶದ ಆದಿವಾಸಿಗಳನ್ನು ಪೀಡಿಸುವ ಹಲವು ಪೀಡೆಗಳಿವೆ.

ಮನುಷ್ಯತ್ವವಿಲ್ಲದ 'ಹುಲಿ ಯೋಜನೆ' ಭೂತ

ಕಾಡಿನಲ್ಲಿ ವಾಸಿಸುವ ಜನರಿಗೆ ಕ್ರೂರ ಎನ್ನಲಾಗುವ ಕಾಡು ಪ್ರಾಣಿಗಳಿಗಿಂತಲೂ ಆ ಪ್ರಾಣಿಗಳ ಹೆಸರಿನಲ್ಲಿ ತಮ್ಮ ಬದುಕನ್ನೇ ಕಿತ್ತುಕೊಳ್ಳಲು ಬರುತ್ತಿರುವ ಸರ್ಕಾರಗಳು, ಸರ್ಕಾರದ ಯೋಜನೆಗಳು ಭೀಕರವಾಗಿ ಕಾಣಿಸುತ್ತಿವೆ. ಅಭಯಾರಣ್ಯದ ಹೆಸರಿನಲ್ಲಿ, ಹುಲಿ ಯೋಜನೆ ಹೆಸರಿನಲ್ಲಿ, ರಕ್ಷಿತಾರಣ್ಯದ ಹೆಸರಿನಲ್ಲಿ ಜನರನ್ನು ತಮ್ಮ ಮೂಲನೆಲೆಯಿಂದ ಬೇರು ಸಹಿತ ಕಿತ್ತೆಸೆಯುವ ಯೋಜನೆಗಳನ್ನು ಹಮ್ಮಿಕೊಂಡು ಆಳುವ ಸರ್ಕಾರಗಳು ಬಡ ಜನರನ್ನು ಕಾಡುತ್ತಿವೆ ಭೀತಿ ಸೃಷ್ಟಿಸುತ್ತಿವೆ.

ಇಂತಹ ಪ್ರಶ್ನೆಗಳ ನೆಪದಲ್ಲಿ ಕಾಡಿನೊಳಕ್ಕೆ ತೂರಿಕೊಂಡಿರುವ ಶಸಸ್ತ್ರ ನಕ್ಸಲ್ ವಾದಿಗಳ ಕೊಲೆಪಾತಕ ಹಿಂಸೆ ಮತ್ತು ನಕ್ಸಲ್ ವಿರೋಧಿ ದಳದ ರೂಪದಲ್ಲಿ ಬರುವ ಪೋಲಿಸರ ಅಮಾನುಷ ದೌರ್ಜನ್ಯಗಳ ನಡುವೆ ಸಿಲುಕಿ ಒದ್ದಾಡುವ ಪರಿಸ್ಥಿತಿ ಮಲೆನಾಡಿನ ಅಮಾಯಕ ಆದಿವಾಸಿಗಳದ್ದು. ನಕ್ಸಲ್ ಎಂಬ ಶಂಕೆಯ ಮೇಲೆ ಬಂಧಿತನಾಗಿ ಇಂದಿಗೂ ಬಿಡುಗಡೆ ಕಾಣದ ನಿರಪರಾಧಿ ಆದಿವಾಸಿ ಯುವಕ ವಿಠಲನಂತೆ ಎಷ್ಟೋ ಯುವಜನರ ಬದುಕು ಶಂಕೆ ದಾಳಿಗೆ ಗುರಿಯಾಗಿದೆ.

ಇಷ್ಟು ದಿನ ರಸ್ತೆ ಇಲ್ಲ, ಶಾಲೆ ಇಲ್ಲ. ಆಸ್ಪತ್ರೆ ಕೊಡಿ... ಎಂದೆಲ್ಲಾ ಕೇಳುತ್ತಿದ್ದ ಆದಿವಾಸಿ ಜನರು ನಾವು ನಿಂತ ನೆಲೆಯನ್ನು ಕಸಿದುಕೊಳ್ಳಬೇಡಿ ಎಂದು ಕೇಳುವ ಸ್ಥಿತಿ ಬಂದಿದೆ.

ಅರಣ್ಯ ಹಕ್ಕು ಕಾಯ್ದೆಯ ಸಮರ್ಪಕ ಜಾರಿ ಇಲ್ಲಿನ ಕೆಲವಾದರೂ ಸಮಸ್ಯೆಗಳಿಗೆ ಪರಿಹಾರವಾಗ ಬಲ್ಲದು. ಅರಣ್ಯ ಭೂಮಿಯ ಮೇಲಿನ ಕಾನೂನು ಬದ್ಧ ಹಕ್ಕು ಒಕ್ಕಲೆಬ್ಬಿಸುವ ಆಳುವ ಸರ್ಕಾರಗಳ ಪ್ರಯತ್ನಗಳಿಗೆ ತಡೆಯಾಗ ಬಲ್ಲುದು. ಅದನ್ನು ಸಮರ್ಥವಾಗಿ ಬಳಸಿಕೊಂಡರೆ.

ಒಟ್ಟಾರೆಯಾಗಿ ಹತ್ತು ಹಲವು ರೀತಿಗಳ ಕಿರುಕುಳ, ನೋವುಗಳು ಅವಕಾಶಗಳ ವಂಚನೆಯ ನಡುವೆಯೇ ಬದುಕುತ್ತಿರುವ ಬುಡಕಟ್ಟು ಜನರು, ಮತ್ತು ಇತರ ಅರಣ್ಯ ಭೂಮಿ ಸಾಗುವಳಿದಾರರ ಬದುಕಿನಲ್ಲಿ ಒಂದಷ್ಟು ನೆಮ್ಮದಿ ಮೂಡಬೇಕಾದರೆ ಅವರ ಬದುಕಿನ ಒಂದು ಮೂಲಭೂತ ಆಧಾರವಾದ ಭೂಮಿ ಪ್ರಶ್ನೆ ಇತ್ಯರ್ಥಗೊಳ್ಳಲೇ ಬೇಕಾಗಿದೆ. ಒಂದು ಬಲವಾದ ಚಳುವಳಿಯ ಒತ್ತಡ, ಒತ್ತಾಯ ಇಲ್ಲದೆ ಹೋದರೆ ಎಷ್ಟೇ ಒಳ್ಳೆಯ ಕಾನೂನುಗಳಿದ್ದರೂ ಅವು ಜಾರಿಯಾಗುವುದಿಲ್ಲ. ಸಮಾಜದ ಪಟ್ಟಭದ್ರ ಶಕ್ತಿಗಳು ಅವನ್ನು ಜಾರಿ ಮಾಡಲು ಅವಕಾಶ ಕೊಡುವುದಿಲ್ಲ. ಹೀಗಾಗಿ ನೊಂದ ಜನರ ಐಕ್ಯ ಹೋರಾಟ, ಸಂಘಟಿತ ಚಳುವಳಿಯೊಂದೇ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ದಾರಿ. ಈ ಹಿನ್ನೆಲೆಯಲ್ಲಿ ಖಚಿತ ಬೇಡಿಕೆಗಳು, ಸ್ಪಷ್ಟ ಗುರಿಗಳೊಂದಿಗೆ ಚಳುವಳಿ ಮುಂದೆ ಹೋಗಬೇಕಾಗಿದೆ.

ಈ ಹಂತದ ಚಳುವಳಿಯ ಪ್ರಧಾನ ಬೇಡಿಕೆಗಳು

- **ಎಲ್ಲಡೆ ಅರಣ್ಯ ಹಕ್ಕು ಸಮಿತಿ ರಚನೆಯಾಗಬೇಕು**

  ಎಲ್ಲ ಜಿಲ್ಲೆಗಳಲ್ಲಿಯೂ ಜಿಲ್ಲಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯನ್ನೊಳಗೊಂಡು ಅರಣ್ಯ ಹಕ್ಕು ಸಮಿತಿಯನ್ನು ರಚಿಸಬೇಕು.

  ಅರಣ್ಯ ಭೂಮಿ ಹಕ್ಕು ಸಿಗುವುದು, ಸಿಗದಿರುವುದು ಮುಂದಿನ ಹಂತದಲ್ಲಿ ಇತ್ಯರ್ಥವಾಗುವ ಪ್ರಶ್ನೆ. ಆದರೆ ಅರ್ಜಿ ಸಲ್ಲಿಸುವ ಅವಕಾಶದಿಂದ ಯಾರನ್ನೂ ವಂಚಿಸಬಾರದು. ಬುಡಕಟ್ಟು ಜನರು, ಬುಡಕಟ್ಟು ಅಲ್ಲದ ಜನರು ಎಲ್ಲರಿಗೂ ಅರ್ಜಿ ಸಲ್ಲಿಸಲು ಅವಕಾಶವಾಗುವಂತೆ ಎಲ್ಲ ಕಡೆಗಳಲ್ಲಿಯೂ ಅರಣ್ಯ ಹಕ್ಕು ಸಮಿತಿ ರಚನೆಯಾಗಬೇಕು.

- **ಈಗಾಗಲೇ ಒಕ್ಕಲೆಬ್ಬಿಸಲಾದವರ ಪ್ರಶ್ನೆ**

  ಅರಣ್ಯ ಭೂಮಿ ಸಾಗುವಳಿದಾರರಿಗೆ ಅರಣ್ಯ ಹಕ್ಕು ನೀಡುವ ಕಾಯ್ದೆಯೊಂದು ಸಿದ್ಧಗೊಳ್ಳುತ್ತಿರುವುದು ಗೊತ್ತಿದ್ದೂ ಕೂಡ ಅದರ ಪ್ರಯೋಜನ ರೈತರಿಗೆ ಸಿಗಬಾರದು ಎಂದು 'ಮುನ್ನೆಚ್ಚರಿಕೆ ಕ್ರಮವಾಗಿ' ಜಮೀನಿನಿಂದ ರೈತರನ್ನು, ಆದಿವಾಸಿಗಳನ್ನು ಒಕ್ಕಲೆಬ್ಬಿಸಿದ ಘಟನೆಗಳು ಹಲವಾರು ಇವೆ. ಇದಲ್ಲದೇ ಇದಕ್ಕೂ ಮೊದಲೇ ಸಾಗುವಳಿದಾರರನ್ನು ಒಕ್ಕಲೆಬ್ಬಿಸಿ ಭೂಮಿಯನ್ನು ಕಿತ್ತುಕೊಂಡ ಉದಾಹರಣೆಗಳು ಸಹ ಇವೆ. ಬದಲಾದ ಪರಿಸ್ಥಿತಿಯಲ್ಲಿ ಹಾಗು ಬಲವಾದ ಆಂದೋಲನವೊಂದು ಎದ್ದು ಬರುತ್ತಿರುವ ಈ ಹೊತ್ತಿನಲ್ಲಿ ಇಂತಹ ವಂಚಿತ, ದೌರ್ಜನ್ಯಕ್ಕೆ ತುತ್ತಾದವರ ಪ್ರಶ್ನೆಗಳನ್ನು ಚಳುವಳಿಯಲ್ಲಿ ಕೈಗೆತ್ತಿಕೊಳ್ಳ ಬೇಕು ಹಾಗೂ ಈ ಪ್ರಶ್ನೆಯನ್ನು ನ್ಯಾಯಯುತವಾಗಿ ಸರ್ಕಾರಗಳು ಬಗೆಹರಿಸುವಂತೆ ಒತ್ತಡ ತರಬೇಕು.

- **75 ವರ್ಷಗಳ ದಾಖಲೆ ಕೇಳುವುದು ತಪ್ಪಬೇಕು**

  ಈಗಾಗಲೇ ವಿವರಿಸಿದಂತೆ ಸರ್ಕಾರಗಳು ಆದಿವಾಸಿಗಳಲ್ಲದ ಅರಣ್ಯ ಭೂಮಿ ಸಾಗುವಳಿದಾರರು, 75 ವರ್ಷಗಳಿಂದ ಅಂದರೆ ಮೂರು ತಲೆಮಾರುಗಳಿಂದ

ಪುಟ 5 ಕ್ಕೆ-

ಭೂಮಿ ಸಾಗುವಳಿ ಮಾಡುತ್ತಿರುವುದಕ್ಕೆ ದಾಖಲೆ ಕೊಡಬೇಕೆಂಬ ಷರತ್ತು ಕಾಯ್ದೆಯಿಂದ ತೆಗೆಯುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು. ಹಾಗೂ ಬುಡಕಟ್ಟು ಜನರಿಗೆ ಇರುವಂತೆ ಡಿಸೆಂಬರ್ 13, 2005 ರ ದಿನಾಂಕವನ್ನೇ ಇವರಿಗೂ ನಿಗದಿ ಮಾಡಬೇಕೆಂದು ಆಗ್ರಹಿಸಬೇಕಾಗಿದೆ. ಈ ದಿಸೆಯಲ್ಲಿ ರಾಜ್ಯದ ವಿಧಾನ ಸಭೆಯು ನಿರ್ಣಯವನ್ನು ಅಂಗೀಕಾರ ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕಾಗಿದೆ.

- **ತಿರಸ್ಕೃತ ಬಗರ್ ಹುಕುಂ ಅರ್ಜಿಗಳು ಅರಣ್ಯ ಹಕ್ಕು ಸಮಿತಿಗೆ ವರ್ಗವಾಗಲಿ**

ಬಗರ್ ಹುಕುಂ ಸಕ್ರಮಕ್ಕೆಂದು ಬಡರೈತರು ಅರ್ಜಿ ಹಾಕಿರುವಾಗ ಸಾಗುವಳಿ ಜಮೀನು ಅರಣ್ಯ ಇಲಾಖೆಗೆ ಸೇರಿದೆಯೆಂಬ ಕಾರಣಕ್ಕೆ ತಿರಸ್ಕೃತಗೊಂಡಿರುವುದು ವ್ಯಾಪಕವಾಗಿದೆ. ಹಿಂದೆ ಅರಣ್ಯ ಹಕ್ಕು ಕಾಯ್ದೆಯಂತಹ ಕಾಯ್ದೆಯ ಅನುಕೂಲ ಇರಲಿಲ್ಲ. ಈಗ ಅರಣ್ಯ ಹಕ್ಕು ಕಾಯಿದೆ ಬಂದಿರುವ ಪರಿಸ್ಥಿತಿಯಲ್ಲಿ ಅಂತಹ ಅರ್ಜಿಗಳನ್ನು ಅರಣ್ಯ ಹಕ್ಕು ಸಮಿತಿಗಳಿಗೆ ವರ್ಗಾಯಿಸುವಂತಾಗಬೇಕು ಮತ್ತು ನ್ಯಾಯಬದ್ಧವಾದ ಎಲ್ಲ ಅರ್ಜಿಗಳನ್ನು ಪರಿಗಣಿಸಿ ಬಡರೈತರಿಗೆ ಭೂಮಿ ಹಕ್ಕು ನೀಡಬೇಕು.

ಅರಣ್ಯ ಭೂಮಿಯ ಹಕ್ಕು........

ಅರ್ಜಿ ಹಾಕುವ ನಿಯಮ ಹಾಗೂ ಕ್ರಮಗಳು

ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯ್ದೆಯನ್ನು ಜಾರಿ ಮಾಡುವ ಹೊಣೆ ಸಮಾಜ ಕಲ್ಯಾಣ ಇಲಾಖೆಯದ್ದು. ಸಮಾಜ ಕಲ್ಯಾಣ ಇಲಾಖೆಯೇ ಇಲ್ಲಿ ನೋಡೆಲ್ ಏಜೆನ್ಸಿ. ರಾಷ್ಟ್ರ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲೂ ಅರಣ್ಯ ಭೂಮಿಯ ಪ್ರಶ್ನೆ ಏನೆಲ್ಲಾ ಚರ್ಚೆಯಾದರೂ, ಈ ಸಂಬಂಧ ಕಾಯ್ದೆಯೊಂದು ಅಂಗೀಕಾರ ಗೊಂಡಿದ್ದರೂ ಈ ಯಾವುದರ ಬಗ್ಗೆಯೂ ಅರಿವೇ ಇಲ್ಲದೇ, ಭೂಮಿ ಸಕ್ರಮಕ್ಕೆ ಅರ್ಜಿ ಹಾಕಿಕೊಳ್ಳಬೇಕೆಂಬ ತಿಳುವಳಿಕೆಯೂ ಇಲ್ಲದೇ ಇರುವವರು ಇದ್ದಾರೆ. ಸರ್ಕಾರ ಕಾನೂನಿನ ಈ ಅವಕಾಶದ ಬಗೆಗೆ ವ್ಯಾಪಕ ಪ್ರಚಾರ ನೀಡಿ ಸಾಗುವಳಿದಾರರು ಹೊಸದಾಗಿ ಈಗ ಅರ್ಜಿ ಹಾಕಲು ಅವಕಾಶ ನೀಡುವಂತಾಗಬೇಕು.

ಒಟ್ಟು ಅರಣ್ಯ ಭೂಮಿಯ ಹಕ್ಕು ದಕ್ಕಿಸಿಕೊಳ್ಳುವ ಹೋರಾಟ ಮುಂದೆ ಹೋಗ ಬೇಕಾದರೆ ಅರಣ್ಯ ಭೂಮಿ ಹಕ್ಕಿಗಾಗಿ ಅರ್ಜಿ ಹಾಕುವ ವಿಷಯದಿಂದ ಹಿಡಿದು ನೀತಿ ನಿರ್ಧಾರಗಳನ್ನು ಕೈಗೊಳ್ಳುವ ಉನ್ನತ ಹಂತದ ವರೆಗೆ ಈ ವಿಷಯದ ಪ್ರಕ್ರಿಯೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು.

ನಿಗದಿತ ಅರ್ಜಿ ನಮೂನೆ

ಅರಣ್ಯ ಭೂಮಿ ಸಕ್ರಮದ ವಿಷಯಕ್ಕಾಗಿಯೇ ಪ್ರತ್ಯೇಕವಾದ ನಿಗದಿತ ಅರ್ಜಿ ನಮೂನೆ ಇದೆ. ಆದಿವಾಸಿಗಳು, ಮತ್ತು ಆದಿವಾಸಿಗಳಲ್ಲದವರು ಇಬ್ಬರೂ ಅರ್ಜಿ ಸಲ್ಲಿಸಬೇಕು. ಕರ್ನಾಟಕ ರಾಜ್ಯದಲ್ಲಿ ಈ ಒಟ್ಟು ವಿಷಯದಲ್ಲಿ ಸಮಾಜ ಕಲ್ಯಾಣ ಇಲಾಖೆ ನೋಡೆಲ್ ಏಜೆನ್ಸಿ. ಗ್ರಾಮ ಮಟ್ಟದ 'ಅರಣ್ಯ ಹಕ್ಕು ಸಮಿತಿ'ಯೇ ಈ ವಿಷಯದಲ್ಲಿ ತಳ ಹಂತದ ಮತ್ತು ಪ್ರಾಥಮಿಕವಾದ ಸಮಿತಿ. ಈ ಸಮಿತಿಯಲ್ಲಿ ಚುನಾಯಿತ ಪಂಚಾಯಿ ಸದಸ್ಯರು , ಆದಿವಾಸಿಗಳ ಪ್ರತಿನಿಧಿಗಳು ಮುಂತಾದವರು ಇರಬೇಕೆಂಬ ನಿಯಮಗಳಿವೆ.

ಎರಡು ಬಗೆಯ ಅರ್ಜಿಗಳು.....

ವೈಯುಕ್ತಿಕ ಅರ್ಜಿಗಳು, ಸಾಮೂಹಿಕ ಅರ್ಜಿಗಳು

ತಮ್ಮ ವೈಯುಕ್ತಿಕವಾದ ವಾಸದ ಜಾಗದ ಅಗತ್ಯಕ್ಕಾಗಿ, ವ್ಯವಸಾಯ ಭೂಮಿಗಾಗಿ ಜನರು ವೈಯುಕ್ತಿಕವಾಗಿ ಅರ್ಜಿ ಹಾಕಿಕೊಳ್ಳಬಹುದು. ಅದೇ ರೀತಿ ಶಾಲೆ, ಆಸ್ಪತ್ರೆ ರಸ್ತೆ ಇತ್ಯಾದಿ ಸಾರ್ವಜನಿಕ ಅಗತ್ಯಗಳಿಗಾಗಿ ಒಟ್ಟಾಗಿ ಸೇರಿ ಸಾಮೂಹಿಕವಾಗಿಯೂ ಜನರು ಅರ್ಜಿ ಸಲ್ಲಿಸಬಹುದು.

ಇಂತಹ ಅರ್ಜಿಗಳನ್ನು ಮೊದಲು ಗ್ರಾಮ ಸಮಿತಿ ಪರಿಶೀಲಿಸಿ ಆನಂತರ ಅರ್ಜಿಗಳನ್ನು ಉಪ ವಿಭಾಗ ಮಟ್ಟದ ಸಮಿತಿಗೆ ಕಳಿಸಿಕೊಡುತ್ತದೆ. ಇದು ಸಹಾಯಕ ಕಮೀಷನರ್‌ರ ಅಧ್ಯಕ್ಷತೆಯಲ್ಲಿರುವ ಸಮಿತಿ.

ನಿಜಕ್ಕೂ ಅಗತ್ಯವಾದ ಭೂಮಿಗೆ ಹಕ್ಕು ಕೊಡುವ ಕೆಲಸ, ಸಾಗುವಳಿ ಚೀಟಿ ಕೊಡುವ ಕೆಲಸ ಇಲ್ಲಿಯೇ ಆಗುವುದು. ಅರ್ಜಿಗಳು ಈ ಹಂತದಲ್ಲಿ ತಿರಸ್ಕೃಗೊಂಡರೆ ಮುಂದಿನ ಕ್ರಮವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಸಮಿತಿಗೆ ಮನವಿ ಮಾಡಬೇಕಾಗುತ್ತದೆ. ಈ ಸಮಿತಿ ವಿಷಯವನ್ನು ಅಂತಿಮಗೊಳಿಸುತ್ತದೆ. ಈ ವಿಷಯದ ಕುರಿತು ರಾಜ್ಯದಲ್ಲಿನ ಒಟ್ಟು ವ್ಯವಹಾರಗಳಿಗೆ, ಆಗು ಹೋಗುಗಳಿಗೆ ರಾಜ್ಯ ಮಟ್ಟದಲ್ಲಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ರಾಜ್ಯ ಮಟ್ಟದ ಸಮಿತಿ ಹೊಣೆಗಾರ ಸಮಿತಿಯಾಗಿರುತ್ತದೆ.


ಅರಣ್ಯ ಹಕ್ಕು ಕಾಯ್ದೆ ಜಾರಿ ಎಷ್ಟು? ಏನು?

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಗ್ರಾಮ ಮಟ್ಟದ ಅರಣ್ಯ ಹಕ್ಕು ಸಮಿತಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ				ಅರಣ್ಯ ಸಮಿತಿಗೆ ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ	SDLC ಸಮಿತಿಗೆ ಕಳಿಸಲಾದ ಅರ್ಜಿಗಳ ಸಂಖ್ಯೆ	SDLC ಯು ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ	SDLC ಯಿಂದ DLC ಗೆ ಕಳಿಸಲಾದ ಅರ್ಜಿಗಳ ಸಂಖ್ಯೆ	DLC ಯು ತಿರಸ್ಕರಿಸಿದ ಅರ್ಜಿಗಳ ಒಟ್ಟು ಸಂಖ್ಯೆ
		ಎಸ್.ಟಿ.	ಇತರೆ	ಸಮುದಾಯ	ಒಟ್ಟು					
1	2	3	4	5	6	7	8	9	10	11
1	ಮೈಸೂರು	5387	0	0	5387	0	5387	0	5387	4832
2	ಶಿವಮೊಗ್ಗ	4064	79181	1068	84313	72156	485	0	214	1
3	ಚಿಕ್ಕಮಗಳೂರು	2663	15176	47	17886	16167	2147	428	1719	0
4	ಉತ್ತರ ಕನ್ನಡ	2687	42174	1587	46448	13849	32599	31833	766	0
5	ಚಾಮರಾಜನಗರ	2146	0	25	2171	630	1541	0	1541	0
6	ಕೊಡಗು	2302	788	57	3147	852	1531	724	807	0
7	ದಕ್ಷಿಣ ಕನ್ನಡ	506	1172	26	1704	286	1398	1130	262	190
8	ಉಡುಪಿ	702	1357	0	2059	147	1911	1290	492	0
	ಒಟ್ಟು	20547	139848	2810	163115	104087	46999	35405	11188	5023

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಹಕ್ಕು ಪತ್ರ ನಿರಾಕರಿಸಲಾದ. ಅರ್ಜಿಗಳ ಸಂಖ್ಯೆ				ಅರಣ್ಯ ಸಮಿತಿ ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ	ಅರಣ್ಯ ಹಕ್ಕು ಸಮಿತಿ / SDLs / DLCs / ಗಳು ತಿರಸ್ಕರಿಸಿದ ಒಟ್ಟು ಅರ್ಜಿಗಳ ಸಂಖ್ಯೆ			
		ಎಸ್.ಟಿ.	ಇತರೆ	ಸಮುದಾಯ	ಒಟ್ಟು		ಎಸ್.ಟಿ.	ಇತರೆ	ಸಮುದಾಯ	ಒಟ್ಟು
		13	14	15	16	17	18	19	20	21
1	ಮೈಸೂರು	555	0	0	555	187.27	4832	0	0	4832
2	ಶಿವಮೊಗ್ಗ	93	75	1	169	19.16	1752	69963	442	72157
3	ಚಿಕ್ಕಮಗಳೂರು	1671	0	0	1671	2478.22	991	15176	0	16167
4	ಉತ್ತರ ಕನ್ನಡ	766	0	0	766	1188.29	1887	42208	1587	45682
5	ಚಾಮರಾಜನಗರ	1516	0	25	1541	2481.78	630	0	0	630
6	ಕೊಡಗು	807	0	0	807	1114.23	788	788	0	1576
7	ದಕ್ಷಿಣ ಕನ್ನಡ	72	0	0	72	382.83	434	1172	0	1606
8	ಉಡುಪಿ	492	0	0	492	651.64	210	1227	0	1437
	ಒಟ್ಟು	5972	75	26	6073	8503.42	11524	130534	2029	144087

ಹೋರಾಟದ ಫಲಶ್ರುತಿ: ಕೊರಗ ಕುಟುಂಬಗಳಿಗೆ ಮನೆ ಬಾಡಿಗೆ ಪಾವತಿಸಲು ಆದೇಶ

ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಯ ಸಂದರ್ಭದಲ್ಲಿ ಮನೆ ನಿವೇಶನ ಕಳೆದುಕೊಂಡ ನಂತೂರಿನ ಆರು ಕೊರಗ ಕುಟುಂಬಗಳಿಗೆ ಮಂಗಳೂರು ನಗರ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ವತಿಯಿಂದ ಪರ್ಯಾಯ ನಿವೇಶನ ಹಾಗೂ ಮನೆ ಒದಗಿಸಬೇಕೆಂದು ಕಳೆದ 2 ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದ್ದು, ಹೋರಾಟದ ಪರಿಣಾಮವಾಗಿ ದ.ಕ.ಜಿಲ್ಲಾಡಳಿತ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು, ನಿವೇಶನ ಮಂಜೂರಾಗುವವರೆಗೆ ಬಾಡಿಗೆ ವಸತಿಗಳಲ್ಲಿ ಉಳಕೊಳ್ಳುವ ವ್ಯವಸ್ಥೆ ಮಾಡಿದ್ದರೂ ಸದ್ರಿ ಮನೆಗಳಿಗೆ ಬಾಡಿಗೆ ಪಾವತಿಗೆ ವ್ಯವಸ್ಥೆ ಕಲ್ಪಿಸಿರಲಿಲ್ಲ.



ವರದಿ : ವಾ.ಉ.

ಅತ್ಯಂತ ದೀನ ಸ್ಥಿತಿಯಲ್ಲಿದ್ದು ಆದಿಮ ಬುಡಕಟ್ಟು (ಪ್ರಿಮಿಟಿವ್ ಟ್ರೈಬ್ಸ್) ಎಂದು ಪರಿಗಣಿಸಲ್ಪಟ್ಟಿರುವ ಸಮುದಾಯಗಳಲ್ಲಿ ಕೊರಗ ಸಮುದಾಯವೂ ಒಂದಾಗಿದ್ದು, ಮಂಗಳೂರು ನಗರದ ಆರು ಕುಟುಂಬಗಳ ಪುನರ್ವಸತಿಗಾಗಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಹಾಗೂ ದಲಿತ ಹಕ್ಕುಗಳ ಹೋರಾಟ ಸಮಿತಿಗಳು ಹೋರಾಟ ನಡೆಸುತ್ತಲೇ ಬಂದಿದ್ದವು.

2011ರ ಫೆಬ್ರವರಿ ತಿಂಗಳವರೆಗೆ ತಿಂಗಳಿಗೆ ರೂ.2000 ದಂತೆ ಕೇವಲ ಮೂರು ತಿಂಗಳಿಗೆ ಮಾತ್ರ ಹೆದ್ದಾರಿ ಪ್ರಾಧಿಕಾರ ಬಾಡಿಗೆ ಪಾವತಿಸಿತ್ತು.

ತ್ರಿಪಕ್ಷೀಯ ಮಾತುಕತೆಯನ್ವಯ ಆರು ತಿಂಗಳ ಒಳಗೆ ಈ ಸಂತ್ರಸ್ತ ಕುಟುಂಬಗಳಿಗೆ ಪದವು ಗ್ರಾಮದಲ್ಲಿ ತಲಾ ಐದು ಸೆಂಟ್ಸ್ ಭೂಮಿ ಸರಕಾರವು ಮಂಜೂರಾತಿ ಮಾಡಿ ಹಸ್ತಾಂತರಿಸಬೇಕಿತ್ತು. ಜಿಲ್ಲಾಡಳಿತ ಫೆಬ್ರವರಿ 2011 ರಲ್ಲಿ ಭೂ ಮಂಜೂರಾತಿಗಾಗಿ ಸರಕಾರಕ್ಕೆ ದಾಖಲೆಯನ್ನು ಸಲ್ಲಿಸಿದ್ದನ್ನು ಬಿಟ್ಟರೆ ಈ ವರೆಗೆ ಯಾವುದೇ ಪ್ರಯತ್ನ ಮಾಡಿಲ್ಲ. ಹಲವಾರು ಬಾರಿ ಆದಿವಾಸಿ ಹಕ್ಕು ಸಮಿತಿಯ ಮಂಗಳೂರು ನಿಯೋಗ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿತ್ತು. ಮನೆ ಬಾಡಿಗೆ ಪಾವತಿಸಲು ಅಸಾಧ್ಯವೆಂದು ಜಿಲ್ಲಾಡಳಿತ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿಯನ್ನು ತಿರಸ್ಕರಿಸಿತ್ತು. ಇದನ್ನು ಖಂಡಿಸಿ ಸಮಿತಿಯು ರಾಷ್ಟ್ರೀಯ ಬುಡಕಟ್ಟು ಆಯೋಗಕ್ಕೆ ಮನವಿ ಸಲ್ಲಿಸಿತ್ತು. ಒಂದು ವರ್ಷದಿಂದ ಈ ಬಗ್ಗೆ ವಾದ ವಿವಾದ ನಡೆದು ಕಳೆದ ಮಾರ್ಚ್ 23 ರಂದು ಆಯೋಗವು ಆದೇಶ ನೀಡಿದ್ದು ತನ್ನ ಆದೇಶದಲ್ಲಿ ಎಲ್ಲಾ ಕೊರಗ ಕುಟುಂಬಗಳಿಗೆ ಸರಕಾರದಿಂದ ಭೂಮಿ ಮಂಜೂರಾತಿ ಆಗಿ ಹಸ್ತಾಂತರ ಆಗುವವರೆಗೆ ಮನೆ ಬಾಡಿಗೆಯನ್ನು ತಿಂಗಳಿಗೆ ತಲಾ ರೂ.2000 ದಂತೆ ಜಿಲ್ಲಾಡಳಿತ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನೀಡತಕ್ಕದ್ದೆಂದು ನಿರ್ದೇಶಿಸಿದೆ. ಕೊರಗ ಸಮುದಾಯದ ಪರವಾಗಿ ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹಸಂಚಾಲಕರಾದ ಕೃಷ್ಣಪ್ಪ ಕೊಂಚಾಡಿ ವಾದ ಮಂಡಿಸಿದ್ದರು. ಕಾನೂನು ಹೋರಾಟಗಳಿಗೂ ಕೆಲವೊಮ್ಮೆ ಅನಿವಾರ್ಯವಾಗುತ್ತದೆಯೆಂಬ ಪಾಠ ಇದರಿಂದಾಗಿ ಹೋರಾಟಗಾರರ ಅರಿವಿಗೆ ಬಂದಿರುತ್ತದೆ.

ನಿವೇಶನ ಹಕ್ಕು ಪತ್ರಕ್ಕೆ ಆಗ್ರಹಿಸಿ ಪುತ್ತೂರಿನಲ್ಲಿ ಸಿಪಿಐ(ಎಂ) ಪ್ರತಿಭಟನೆ

ನಿವೇಶನ ರಹಿತರಿಗೆ ಮನೆ ನಿವೇಶನ ಹಾಗೂ ಕಳೆದ ಹಲವಾರು ವರ್ಷಗಳಿಂದ ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಂಡು ಬದುಕುತ್ತಿರುವವರಿಗೆ ನಿವೇಶನ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಸಿಪಿಐ(ಎಂ) ಪುತ್ತೂರು ತಾಲೂಕು ಸಮಿತಿಯ ನೇತೃತ್ವದಲ್ಲಿ ಎಪ್ರಿಲ್ 11 ರಂದು ತಾಲೂಕು ಕಚೇರಿಯ ಎದುರು ಪ್ರತಿಭಟನೆ ನಡೆಯಿತು.

ಪುತ್ತೂರು ರೈಲು ನಿಲ್ದಾಣ ಬಳಿಯ ಸಿಪಿಐ(ಎಂ) ಕಚೇರಿ ಬಳಿಯಿಂದ ತಾಲೂಕು ಕಚೇರಿ ವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಬಳಿಕ ತಾಲೂಕು ಕಚೇರಿ ಎದುರು ಪ್ರತಿಭಟನಾ ಸಭೆ ನಡೆಸಿದರು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸೆಕ್ರೆಟಾರಿಯಟ್ ಸಮಿತಿ ಸದಸ್ಯ ಬಿ.ಎಂ.ಭಟ್, ತಾಲೂಕು ಸಮಿತಿ ಕಾರ್ಯದರ್ಶಿ ಪಿ.ಕೆ.ಸತೀಶನ್, ಮಾತನಾಡಿದರು. ಸಭೆಯ ಬಳಿಕ ತಾಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಪಕ್ಷದ ಕಾರ್ಯಕರ್ತರಾದ ಜಯರಾಮ ಮಯ್ಯ, ಮೇದಪ್ಪ, ಕೇಶವ, ಕೃಷ್ಣ ನಿಡ್ಪಳ್ಳಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬೇಸಿಗೆಯ ಬೇಗೆಯಲ್ಲಿ ನಲುಗುತ್ತಿರುವ ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ಬರಪರಿಸ್ಥಿತಿ

ಚಿತ್ರದುರ್ಗ :-

ಚಿತ್ರದುರ್ಗ ಜಿಲ್ಲೆಯ ಸದಾ ಬರಗಾಲ ಪೀಡಿತ ಜಿಲ್ಲೆಗಳಲ್ಲಿ ಒಂದಾಗಿದೆ. ಕಳೆದ 2011ರಲ್ಲಿ ಮಳೆಯ ತೀವ್ರ ಕೊರತೆಯಿಂದ ಜಿಲ್ಲೆಯ ಬಹುತೇಕ ಕೆರೆಗಳು ನೀರಿಲ್ಲದೆ ಬತ್ತಿವೆ. ಅಂತರ್ಜಲ ಕುಸಿದಿದೆ. ತೀವ್ರ ಬರಕ್ಕೆ ತುತ್ತಾದ ಚಳ್ಳಕೆರೆ, ಮೊಳಕಾಲ್ಮೂರು, ಚಿತ್ರದುರ್ಗಾ, ಹಿರಿಯೂರು, ಹೊಳಲ್ಕೆರೆ ಮತ್ತು ಹೊಸದುರ್ಗಾ ಈ ಎಲ್ಲಾ 6 ತಾಲ್ಲೂಕುಗಳಲ್ಲಿ ಕುಡಿಯುವ ನೀರು ಮೇವು, ಕೂಲಿ ಕೆಲಸದ ಕೊರತೆ ಎದ್ದು ಕಾಣುತ್ತದೆ. "ಬರದಿಂದ ಜನ ಎಲ್ಲಿಯೂ ಗುಳೇ ಹೋಗುತ್ತಿಲ್ಲ, ಜಾನುವಾರು ರಕ್ಷಣೆಗೆ ಜಿಲ್ಲೆಯಲ್ಲಿ 12 ಗೋಶಾಲೆ ತೆರೆದಿದ್ದೇವೆ. ನೀರಿನ ಅಭಾವ ನೀಗಿಸಲು ಕೊರೆಸಿದ 300 ಕೊಳವೆ ಬಾವಿಗಳಲ್ಲಿ ಬಹುತೇಕ ಯಶಸ್ವಿಯಾಗಿವೆ. ನೀರಿನ ಕೊರತೆಯ ಚಳ್ಳಕೆರೆಯ ಕೆಲವು ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ. ರೂ. 94 ಕೋಟಿ ಯೋಜನೆಯ 45 ದಿನ ಕೆಲಸವನ್ನು ರೇಗಾದಡಿ ಜಿಲ್ಲೆಯಲ್ಲಿ ಈಗ ಮಾಡಲಾಗುತ್ತಿದೆ" ಎಂದು ಜಿಲ್ಲಾಧಿಕಾರಿಗಳು ತಿಳಿಸುತ್ತಾರೆ. ಆದರೆ ಅವರ ಈ ಹೇಳಿಕೆಗಳು ಕೇವಲ ದಾಖಲೆಯಲ್ಲಿ ಇರದೆ ಜನರ ಸಂಕಷ್ಟಕ್ಕೆ ಆಸರೆಯಾಗಲಿ ಎಂದು ಜಿಲ್ಲೆಯ ಜನ ಹೇಳುತ್ತಿದ್ದಾರೆ. ಜನಪ್ರತಿನಿಧಿಗಳು ಯಾರಾರೂ ಬರದ ಸಮಸ್ಯೆ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಜಿಲ್ಲೆಯಲ್ಲಿ ಗಂಜಿಕೇಂದ್ರ ತೆರೆದಿಲ್ಲ. ಬಡವರಿಗೆ ಉಚಿತವಾಗಿ ರೇಷನ್ ಕೊಡುತ್ತಿಲ್ಲ. ಭೂರಹಿತರು, ಕೂಲಿಕಾರರು ಸಂಕಷ್ಟದಲ್ಲಿದ್ದಾರೆ. ಏಪ್ರಿಲ್‌ನಿಂದ ತಾಪಮಾನ ಹೆಚ್ಚಾಗಿದ್ದು, ಮಳೆಯ ಹನಿ ಬಿದ್ದಿಲ್ಲ. ಜಿಲ್ಲೆಯಲ್ಲಿ ಹೆಚ್ಚಿನ ಪಾಲು ಪರಿಶಿಷ್ಟ ಜನಾಂಗ ಹಿಂದುಳಿದ ವರ್ಗ ಅಲ್ಪಸಂಖ್ಯಾತರು ಇದ್ದಾರೆ. ಡಾ॥ ವಿಶ್ವೇಶ್ವರಯ್ಯನವರು ಕಟ್ಟಿದ ರಾಜ್ಯದ ಪ್ರಥಮ

ವರದಿ : ಕೆ.ಎಲ್. ಭಟ್

ಜಲಾಶಯ ಕೇವಲ 3ಬಾರಿ ತುಂಬಿದ್ದು ಕಳೆದ 25 ವರ್ಷಗಳಲ್ಲಿ ಅರ್ಧಕ್ಕಿಂತ ಕಡಿಮೆ ನೀರು ಹೊಂದಿದ್ದು ಈಗ ಬರಿದಾಗುತ್ತಿದೆ.

ಬಡವರಿಗೆ ಉಚಿತ ರೇಶನ್, ಗಂಜಿಕೇಂದ್ರ ಕುಡಿಯುವ ನೀರಿನ ಪೂರೈಕೆ ಇತ್ಯಾದಿಗಳ ಬಗ್ಗೆ ಕಾಳಜಿ ವಹಿಸಲು ಯಾವ ಜನಪ್ರತಿನಿಧಿಗಳು ಗಮನಿಸುತ್ತಿಲ್ಲ. ಪ್ರಜಾಪ್ರಭುತ್ವ ಚಳುವಳಿಯ ಕೊರತೆಯೂ ಜನರ ಬವಣೆಯು ನಿವಾರಣೆ ಆಗದಿರಲು ಕಾರಣವಾಗಿದೆ.

ದಾವಣಗೆರೆ :-

ಜಿಲ್ಲೆಯ 6 ತಾಲೂಕುಗಳ ಪೈಕಿ ಕ್ರಮವಾಗಿ ಜಗಳೂರು, ಹರಪನಹಳ್ಳಿ, ಹರಿಹರ ಮತ್ತು ದಾವಣಗೆರೆ ತಾಲೂಕುಗಳು ಹೆಚ್ಚು ಬರಪೀಡಿತವಾಗಿವೆ. ಈ 4 ತಾಲೂಕುಗಳು ಬರಪೀಡಿತವಾಗಿವೆ. ಈ 4 ತಾಲೂಕುಗಳನ್ನು ಬರಪೀಡಿತವೆಂದು ಸಾರಲಾಗಿದ್ದರೂ ಗಂಜಿಕೇಂದ್ರ, ಬಡವರಿಗೆ ಉಚಿತ ರೇಶನ್ ಒದಗಿಸಿಲ್ಲ. ಜಗಳೂರು ತಾಲೂಕಿನಲ್ಲಿ ಏಪ್ರಿಲ್ 1 ರಂದು ಗೋಶಾಲೆಯೊಂದನ್ನು ತೆರೆಯಲಾಗಿದೆ. "ಜಿಲ್ಲೆಯ 519 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆಯಿದೆ. ಈ ಭಾಗದಲ್ಲಿ ಕೊರೆಸಿದ 243 ಕೊಳವೆ ಬಾವಿಗಳಲ್ಲಿ 209 ಕೊಳವೆ ಬಾವಿಗಳು ಯಶಸ್ವಿಯಾಗಿದೆ. ಬರಪರಿಹಾರಕ್ಕೆ 2 ಕೋಟಿ ರೂಪಾಯಿ ಅನುದಾನ ಬಂದಿದೆ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ "ಟಾಸ್ಕ್ ಫೋರ್ಸ್" ರಚಿಸಲಾಗಿದೆ. ಈ ಸಮಿತಿಯಿಂದ ಬರಪರಿಹಾರ ಕೆಲಸಗಳು ಆರಂಭವಾಗುತ್ತಿದೆ" ಎಂದು ಜಿಲ್ಲಾಧಿಕಾರಿ ತಿಳಿಸುತ್ತಾರೆ. ಬರಪೀಡಿತ 4 ತಾಲೂಕು ಕೇಂದ್ರಗಳಲ್ಲಿ ನೀರಿನ ಕೊರತೆ ಅಷ್ಟಾಗಿ ಕಂಡು ಬರುತ್ತಿಲ್ಲವಾದರೂ ಹಳ್ಳಿಗಳಲ್ಲಿ ಕೊರತೆ ತುಂಬಾ ಇದೆ. ರೇಗಾ ಕೆಲಸವು ಸರಿಯಾಗಿ ನಡೆಯದೆ ಕೇವಲ ಕಂಟ್ರಾಕ್ಟರು-ಅಧಿಕಾರಿಗಳಿಗೆ 'ರೇಗಾ'ದ ಬಹುತೇಕ ಹಣ ಹೋಗುತ್ತಿದೆ. ಜಿಲ್ಲೆಯ ಇಬ್ಬರು ಪ್ರಭಾವಿ ಮಂತ್ರಿಗಳು ಪ್ರಭಾವಿ ಲೋಕಸಭಾ ಸದಸ್ಯರು ಬರದ ಪ್ರಶ್ನೆಯನ್ನು ಸಮಸ್ಯೆಯಾಗಿ ಗುರುತಿಸಿಲ್ಲ. ಬರದ ಅಧ್ಯಯನದ ಪ್ರವಾಸ ಇತ್ಯಾದಿಗಳನ್ನು ಬಿಟ್ಟು ಮುಖ್ಯಮಂತ್ರಿಯ ಕುರ್ಚಿಯ ಸಮಸ್ಯೆ ಪರಸ್ಪರ ಕಚ್ಚಾಟದಲ್ಲಿ ನಿರತರಾಗಿದ್ದಾರೆ. ಪ್ರಚಾರಕ್ಕಾಗಿ ಉದ್ಘಾಟನೆ ಶಂಕುಸ್ಥಾಪನೆ ಕೆಲಸದಲ್ಲಿ ತೊಡಗಿರುವ ಈ ರಾಜಕಾರಣಿಗಳಿಗೆ ಪಾಠ ಕಲಿಸಲು-ಮುಂದಿನ ದಿನದಲ್ಲಿ ಜನ ತಯಾರಿದ್ದಾರೆ.

ಬಜೆಟ್ ವಿರೋಧಿಸಿ ಮಂಗಳೂರು ಮತ್ತು ಉಡುಪಿಯಲ್ಲಿ ಪ್ರತಿಭಟನೆಗಳು

ಕೇಂದ್ರ ಮತ್ತು ರಾಜ್ಯಗಳ ಜನವಿರೋಧಿ ಬಜೆಟನ್ನು ವಿರೋಧಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಕರೆಕೊಟ್ಟ ಮೇರೆಗೆ ಎಪ್ರಿಲ್ 12 ರಂದು ಮಂಗಳೂರು ಮತ್ತು ಉಡುಪಿಗಳಲ್ಲಿ ಪ್ರತಿಭಟನೆಗಳು ನಡೆದುವು.

ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಸಾಯಂಕಾಲ ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಕಾರ್ಯದರ್ಶಿ ಬಿ.ಮಾಧವ ಮಾತನಾಡಿದರು.

ಸಿಪಿಐ(ಎಂ) ಉಡುಪಿ ತಾಲೂಕು ಸಮಿತಿ ನೇತೃತ್ವದಲ್ಲಿ ಸಾಯಂಕಾಲ ಉಡುಪಿ ಬಸ್ ನಿಲ್ದಾಣದ ಬಳಿ ಇರುವ ಮಹಾತ್ಮಗಾಂಧಿ ಪ್ರತಿಮೆ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು. ತಾಲೂಕು ಸಮಿತಿ ಕಾರ್ಯದರ್ಶಿ ವಿಶ್ವನಾಥ ರೈ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸೆಪ್ಟೆಂಬರ್ 2012 ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಅಖಿಲ ಭಾರತ ಸಮ್ಮೇಳನದ ಸ್ವಾಗತ ಸಮಿತಿ ರಚನೆಯಾಗಿದೆ. ಈ ಸ್ವಾಗತ ಸಮಿತಿ ರಚನೆಗೆ ಸೇರಿದ ಜನ ತೋರಿದ ಉತ್ಸಾಹ ನೋಡಿದರೆ ಸಮ್ಮೇಳನ ಅರ್ಥಪೂರ್ಣ ಸಮ್ಮಿಳನ ಆಗಲಿದೆ. ಮತ್ತು ಭಾರಿ ಯಶಸ್ವಿಯಾಗಲಿದೆ ಎನಿಸುತ್ತದೆ.

ಅಖಿಲ ಭಾರತ ಯುವ ಸಮ್ಮೇಳನಕ್ಕೆ ಸ್ವಾಗತ ಸಮಿತಿ ರಚನೆ

ಬಿ.ರಾಜಶೇಖರಮೂರ್ತಿ

ದೇಶದ ಯುವಜನತೆಗೆ ಆದರ್ಶ ಯಾರಾಗಬೇಕು. ನೆಹರು ಕುಟುಂಬದ ಮರಿ ಮಗ ರಾಹುಲ್ ಗಾಂಧೀನಾ ?, ಅಖಿಲೇಶ್ ಯಾದವ್, ಒಮ್ಮರ್ ಅಬ್ದುಲ್ಲಾ, ಕನಿಮೋಳಿ, ಬಿ.ವೈ. ರಾಘವೇಂದ್ರನಾ.... ಅಥವಾ ಸಾಲು ಸಾಲಾಗಿ ಚಿತ್ರರಂಗದಿಂದ ರಾಜಕೀಯಕ್ಕೆ ಬರುತ್ತಿರುವ ಯುವನಾಯಕ-ನಾಯಕಿಯರಾ ? ಯಾರಾಗಬೇಕು. ಯುವಜನತೆ ಎದುರಿಸುತ್ತಿರುವ ನಿರುದ್ಯೋಗ-ಬಡತನ, ದಾರಿದ್ರ್ಯ ಮುಂತಾದ ಸಮಸ್ಯೆ-ಸವಾಲುಗಳಿಂದ ಹೊರಬರಬೇಕಾದರೆ, ನಿಜವಾಗಿ ಆದರ್ಶ ಯಾರಾಗಬೇಕೆಂಬ ಬಗ್ಗೆ ಯುವಜನತೆ ಗಂಭೀರವಾಗಿ ಯೋಚಿಸುವಂತಹ ಸನ್ನಿವೇಶ. ಏಪ್ರಿಲ್ 1, 2012ರಂದು ಡಿ.ವೈ.ಎಫ್.ಐ. ರಾಷ್ಟ್ರ ಸಮ್ಮೇಳನ ಯಶಸ್ವಿಗೆ ಪೂರಕ ನಡೆದ 'ಸ್ವಾಗತಾ ಸಮಿತಿ' ರಚನಾ ಸಭೆಯಲ್ಲಿ ವ್ಯಕ್ತವಾಯಿತು.

ಸಾಮಾಜಿಕ ಪರಿಸರ

ಸಹ ಜೀವಿಗಳ ಬಗ್ಗೆ ಸ್ಪಂದನೆ ಮತ್ತು ಸೂಕ್ಷ್ಮತೆಯನ್ನೂ ಕಳೆದುಕೊಳ್ಳುತ್ತಿರುವ ಯುವಜನತೆ ಕಂಗೆಟ್ಟಿದ್ದಾರೆ. ತಂದೆ-ತಾಯಿ ಮತ್ತು ಸಂಬಂಧದ ಮಾನವ ಕಾಳಜಿ ಇಲ್ಲದೆ ನನಗೆ ನಾನೇ ದೊಡ್ಡವನು. ನನ್ನನ್ನು ಬಿಟ್ಟರೇ ಬೇರ್ಯಾರು ಇಲ್ಲ ಎಂಬ ಭಾವನೆಗಳು ಯುವಜನತೆಯಲ್ಲಿ ಬೇರೂರುತ್ತಿವೆ. ಸ್ವಾರ್ಥಕ್ಕಾಗಿ ಹೊಡಿ -ಬಡಿ- ಕೊಲ್ಲು ಯಾರಾನ್ನಾದರೂ ಪರವಾಗಿಲ್ಲ ಎಂಬಂತಾಗಿದೆ. ಒಂದು ರೀತಿಯಲ್ಲಿ ಕಾಡು ಪ್ರಾಣಿಗಳಂತೆ ಪರಸ್ಪರ ಕಚ್ಚಾಡುವಂತಹ, ದ್ವೇಷಿಸುವಂತಹ ಪ್ರವೃತ್ತಿಯನ್ನೂ ಯುವಜನತೆಯಲ್ಲಿ ಬೆಳೆಸಲಾಗುತ್ತಿದೆ. ಇದಕ್ಕೆಲ್ಲಾ ಮುಖ್ಯ ಕಾರಣ ಜಾಗತೀಕರಣದಿಂದಾದ ನವ ಉದಾರೀಕರಣ ನೀತಿಗಳು.

ಮರೆಸಲಾಗುತ್ತಿರುವ ಸಾಮಾಜಿಕ ಕಳಕಳಿ.

ಯುವಜನತೆ ಸಹಜೀವಿಗಳ ಜೊತೆಗಿನ ನೋವು-ನಲಿವುಗಳಿಗೆ ಸ್ಪಂದಿಸುವುದನ್ನು ನವ ಉದಾರೀಕರಣ ನೀತಿಗಳು ಮಾಯಗೊಳಿಸಿವೆ. ಇಂತಹ ಸಂದರ್ಭದಲ್ಲಿ ತಮ್ಮ ದೇಶದ ಸಹ ಜೀವಿಗಳನ್ನೂ ಶೋಷಣೆಯಿಂದ ಮುಕ್ತಗೊಳಿಸಿವ ಮಹಾನ್ ಸಿದ್ಧಾಂತದ ಪ್ರಚಾರಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ 23 ವರ್ಷದ ಯುವಕ ಭಗತ್‌ಸಿಂಗ್, ಚಂದ್ರಶೇಖರ್ ಅಜಾದ್, ಸುಖದೇವ್, ರಾಜಗುರು. ದೇಶದಲ್ಲಿ ಮಡುಗಟ್ಟಿರುವ ಅವಮಾನವೀಯ ಅಸ್ಪೃಶ್ಯತೆ ಆಚರಣೆ, ಜಾತಿಭೇದ ವಿರುದ್ಧ ವಿದ್ಯಾರ್ಥಿಯಾಗಿದ್ದಲೇ ಸಿಡಿದೆದ್ದು ಹೋರಾಡಿದ್ದ ಡಾ॥ಬಿ.ಆರ್.ಅಂಬೇಡ್ಕರ್, ಬ್ರಿಟೀಷ್ ಸಾಮ್ರಾಜ್ಯಶಾಹಿಗಳನ್ನು ಒದ್ದೋಡಿಸಲು ಶಸಸ್ತ್ರ ಪಡೆಯನ್ನು ಕಟ್ಟಿದ ಜೀವದ ಹಂಗು ತೊರೆದು ಹೋರಾಡಿದ ನೇತಾಜೀ ಸುಭಾಷ್‌ಚಂದ್ರ ಬೋಸ್. ಭಾರತದಿಂದ ಬ್ರಿಟೀಷ ಸಾಮ್ರಾಜ್ಯ ಶಾಹಿಗಳನ್ನು ಹೊರ ದಬ್ಬಬೇಕೆಂಬ ಕನಸಿನೊಂದಿಗೆ ಹೋರಾಡುತ್ತಾ ತನ್ನ ಮಕ್ಕಳನ್ನೇ ಬ್ರಿಟೀಷರಿಗೆ ಒತ್ತೆ ಇಟ್ಟು ವೀರಾವೇಷದಿಂದ ರಣರಂಗದಲ್ಲಿ ದೇಶಕ್ಕಾಗಿ ಮಡಿದ ಟಿಪ್ಪು , ಇಂಥವರೂ ಇಂದು ಯುವಜನತೆಗೆ ಮಾದರಿಯಾಗಬೇಕಿದೆ, ಆದರ್ಶವಾಗಬೇಕಿದೆ. ಹೀಗಾಗಿ ಯುವಜನತೆಯಲ್ಲಿ ಸಹ ಸ್ಪಂದನೆ ಸೂಕ್ಷ್ಮತೆಯ ಮತ್ತು ವಿಚಾರಶೀಲತೆಯನ್ನು ಬೆಳೆಸಬೇಕಿದೆ. ಈ ಹಿನ್ನೆಲೆಯಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ಯುವಜನತೆಯನ್ನು ದೇಶಾದ್ಯಂತ ಸಂಘಟಿಸುತ್ತಿದ್ದು, ಯುವಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ಅಡೆ-ತಡೆಯಾಗಿರುವ ಶಕ್ತಿಗಳ ವಿರುದ್ಧ ತ್ಯಾಗ-ಬಲಿದಾನಗಳ ಜೊತೆಗೆ ದೇಶದ ಅತಿದೊಡ್ಡ ಯುವಜನ ಸಂಘಟನೆಯಾಗಿ ಹೊರಹೊಮ್ಮಿದೆ. ಪ್ರಸ್ತುತ ಸಂದರ್ಭದಲ್ಲಿ ಯುವಜನತೆಯನ್ನು ಬಾಧಿಸುತ್ತಿರುವ ನಿರುದ್ಯೋಗ, ಭ್ರಷ್ಟಾಚಾರ, ಕೋಮುವಾದ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಪ್ರಜಾಸತ್ತಾತ್ಮಕ ಹಕ್ಕುಗಳ ಮತ್ತು ದೇಶದ ಸೌಹಾರ್ದ ಪರಂಪರೆಯನ್ನು ಎತ್ತಿಹಿಡಿಯುವ ಜವಾಬ್ದಾರಿಯನ್ನು ಮನಗಾಣಬೇಕಿದೆ. ಈ ಹಿನ್ನೆಲೆಯಲ್ಲಿ ಡಿವೈಎಫ್‌ಐ ಅಖಿಲ ಭಾರತ 9ನೇ ಯುವಜನ ಸಮ್ಮೇಳನವನ್ನು ಪ್ರಥಮ ಬಾರಿಗೆ ಕರ್ನಾಟಕದ ರಾಜಧಾನಿ ಬೆಂಗಳೂರು ಮಹಾನಗರದಲ್ಲಿ ಆಯೋಜಿಸಲು ಡಿವೈಎಫ್‌ಐ ಕೇಂದ್ರ ಸಮಿತಿ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಸಮ್ಮೇಳನವನ್ನು ಯಶಸ್ವಿಗೊಳಿಸಲು 'ಸ್ವಾಗತ ಸಮಿತಿ' ರಚನಾ ಸಭೆಯನ್ನೂ ಏಪ್ರಿಲ್ 1, 2012ರಂದು ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಹಾಲ್‌ನಲ್ಲಿ ಡಿವೈಎಫ್‌ಐ ರಾಜ್ಯ ಸಮಿತಿ ಆಯೋಜಿಸಿತ್ತು.



'ಪುರಾಣಗಳ ಜನಪರ ವ್ಯಾಖ್ಯಾನವೂ ಸಾಧ್ಯ'

ಈ ಸಭೆಗೆ ನಾಡೋಜ ಪ್ರಶಸ್ತಿ ಪುರಸ್ಕೃತ ಡಾ॥ಬರಗೂರು ರಾಮಚಂದ್ರಪ್ಪನವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಾ, ಪ್ರಗತಿಪರ ಸಂಘಟನೆಗಳು ಎಪ್ಪತ್ತು, ಎಂಭತ್ತರ ದಶಕದಲ್ಲಿ ಬಳಸುತ್ತಿದ್ದ ಭಾಷೆಗೂ, ಇಂದು ಬಳಸಬೇಕಾದ ಭಾಷೆಗೂ ವ್ಯತ್ಯಾಸವಿದೆ. ಮೂಲಭೂತ ಸಿದ್ಧಾಂತ, ತತ್ವ ಬಿಟ್ಟು ಕೊಡದೆ ನಮ್ಮ ವಿಚಾರಗಳನ್ನು ಸೃಜನಶೀಲವಾಗಿ ಹೇಳುವುದು ಸಾಧ್ಯವಾಗಬೇಕು ಎಂದರು. ಪುರಾಣ, ಐತಿಹ್ಯಗಳನ್ನು ಪೂರ್ಣವಾಗಿ ತಿರಸ್ಕರಿಸದೇ ಅದರ ಜನಪರ ವ್ಯಾಖ್ಯಾನ ಸಾಧ್ಯವಿದೆ. ಕೋಮುವಾದದ ಅಪಾಯಗಳನ್ನು, ಪ್ರಗತಿ ವಿರೋಧಿ ವಿಚಾರಗಳನ್ನು ಎದುರಿಸಲು ಇದರಿಂದ ಸಾಧ್ಯ .

ಸಮ್ಮೇಳನದ ಯಶಸ್ಸಿಗೆ ನನ್ನನ್ನು ತೊಡಗಿಸಿಕೊಳ್ಳುತ್ತೇನೆ. ರಾಷ್ಟ್ರದ ಯುವಜನತೆಯಲ್ಲಿ ನವೀನ ರೀತಿಯಲ್ಲಿ ಒಂದಾಗಿ ದೊಡ್ಡ ಯುವಜನಾಂದೋಲನಕ್ಕೆ ಈ ಸಮ್ಮೇಳನ ಪ್ರೇರಣೆಯಾಗಲಿ ಎಂದು ಹಾರೈಸಿದರು.

ಸ್ವಾಗತ ಸಮಿತಿ ರಚನೆ

ಸಭೆಗೆ ಸ್ವಾಗತ ಸಮಿತಿ ರಚನೆ ಮತ್ತು ಅಂದಾಜು ಹಣಕಾಸಿನ ಖರ್ಚು ಮತ್ತು ಸಂಘಟನಾ ಕೆಲಸ ಕಾರ್ಯಗಳು ಸೇರಿದಂತೆ ವಿವಿಧ ಉಪಸಮಿತಿಗಳ ಪ್ರಸ್ತಾವನೆಯನ್ನು ಮಾಡಲಾಯಿತು. ಸೂಕ್ತ ತಿದ್ದುಪಡಿಗಳೊಂದಿಗೆ ಪ್ರಸ್ತಾವನೆಯನ್ನು ಸಭೆಯಲ್ಲಿ ಅಂಗೀಕರಿಸಲಾಯಿತು. ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಿವೈಎಫ್‌ಐನ ಅಖಿಲ ಭಾರತ ಅಧ್ಯಕ್ಷರಾದ ಶ್ರೀರಾಮಕೃಷ್ಣನ್ ಮತ್ತು ಪ್ರಧಾನ ಕಾರ್ಯದರ್ಶಿ ತಪಸ್ ಸಿನ್ಹಾ ಹಾಗೂ ಅಖಿಲ ಭಾರತ ಉಪಾಧ್ಯಕ್ಷರಾದ ಪುಷ್ಪೇಂದ್ರ ತ್ಯಾಗಿ, ಕೇರಳ ರಾಜ್ಯದ ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಸ್ವರಾಜ್, ಕೇಂದ್ರ ಸಮಿತಿ ಸದಸ್ಯರಾದ ಬರ್ತೃಹರಿ ಹಾಗೂ ತಮಿಳುನಾಡು ರಾಜ್ಯ ಮುಖಂಡರಾದ ಅಶ್ವಥನಾರಾಯಣ್ ಸಂಗಾತಿಗಳು ಭಾಗವಹಿಸಿದ್ದರು. ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಸಿಐಟಿಯು ರಾಜ್ಯಾಧ್ಯಕ್ಷರಾದ ವಿ.ಜೆ.ಕೆ.ನಾಯರ್, ಡಿವೈಎಫ್‌ಐ ಮಾಜಿ ರಾಜ್ಯಕಾರ್ಯದರ್ಶಿಗಳಾದ ಹಾಗೂ ಜನಶಕ್ತಿ ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್, ಎಸ್.ಎಫ್.ಐ. ಮಾಜಿ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಸೇರಿದಂತೆ ಹಲವು ಮುಖಂಡರು ವೇದಿಕೆಯಲ್ಲಿದ್ದರು. ಸಭೆಯಲ್ಲಿ ಹಿಂದಿನ ರಾಜ್ಯ ಅಧ್ಯಕ್ಷರಾಗಿದ್ದ ಕೆ.ಎನ್. ಉಮೇಶ್, ರಾಜ್ಯ ಕಾರ್ಯದರ್ಶಿಗಳಾದ ಕೆ.ಮಹಂತೇಶ್, ಅಲ್ಲದೇ ಪ್ರಗತಿಪರ ಚಿಂತನೆಯ ಹಿರಿಯರು, ಸಿಐಟಿಯು, ಎಸ್‌ಎಫ್‌ಐ, ಕೆಪಿಆರ್‌ಎಸ್, ಜೆಎಂಎಸ್, ಎಐಎಡಬ್ಲ್ಯೂಯು, ಎಐಎಲ್‌ಯು, ಎಐಐಇಎ, ಬಿಇಎಫ್‌ಐ, ಸಮುದಾಯ ಮತ್ತು ಸರ್ಕಾರಿ ನೌಕರರ ಒಕ್ಕೂಟ, ದಲಿತ ಸಂಘಟನೆಯ ರಾಜ್ಯ ಮುಖಂಡರುಗಳು, ಡಿವೈಎಫ್‌ಐನ ಮಾಜಿ ಮುಖಂಡರು, ಹಿತೈಷಿಗಳು ಬೆಂಬಲಿಗರು, ಹಲವಾರು ವಿಭಾಗಗಳ ತಜ್ಞರು-ಮುಖಂಡರು ಸೇರಿದಂತೆ ನೂರಾರು ಮುಖಂಡರು 'ಸ್ವಾಗತ ಸಮಿತಿ' ರಚನಾ ಸಭೆಯಲ್ಲಿ ಭಾಗವಹಿಸಿ ಸಮ್ಮೇಳನದ ಯಶಸ್ಸಿಗೆ ನಾವೆಲ್ಲಾ ನಿಮ್ಮೊಂದಿಗೆ ಇದ್ದೇವೆ ಮುನ್ನಡೆಯಿರಿ ಎಂಬ ಆತ್ಮವಿಶ್ವಾಸವನ್ನು ತುಂಬಿದರು.

ಬೆಲೆ ಏರಿಕೆಯ ಕಾಲದಲ್ಲಿ

ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಆದ ಜಿ.ಸಿ. ಬಯ್ಯಾರೆಡ್ಡಿಯವರು ಮಾತನಾಡಿ ತುಂಬಾ ದೊಡ್ಡ ಬಜೆಟ್ಟಿನ ಕಾರ್ಯಕ್ರಮ. ಜೊತೆಗೆ ಇನ್ನಾರು ತಿಂಗಳ ನಂತರದ ಸಮ್ಮೇಳನ ನಡೆಯುವಾಗ ಅವಶ್ಯಕ ವಸ್ತುಗಳ ಬೆಲೆಗಳು ಯಾವ ಮಟ್ಟಕ್ಕೆ ಏರಿರುತ್ತವೋ ಎಂಬ ಆತಂಕವಿದೆ. ಆದ್ದರಿಂದ ಎಲ್ಲರೂ ಕೈ ಜೋಡಿಸಿ ಸಾಮೂಹಿಕವಾಗಿ ಈ ದೊಡ್ಡ ಹೊಣೆ ನಿಬಾಯಿಸಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಡಿವೈಎಫ್‌ಐನ ರಾಜ್ಯ ಪದಾಧಿಕಾರಿಗಳು, ಕಾರ್ಯಕರ್ತರು, ಬೆಂಗಳೂರು ಜಿಲ್ಲಾ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಪ್ರಮುಖ ಬೆಂಗಳೂರು ಜಿಲ್ಲಾ ಡಿವೈಎಫ್‌ಐನ ಮುಖಂಡರು ಕಾರ್ಯಕರ್ತರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಎನ್.ಎಲ್.ಭರತ್‌ರಾಜ್ ವಹಿಸಿದ್ದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆಯನ್ನು ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿರವರು ನಡೆಸಿಕೊಟ್ಟರು.

ಗೆಲುವು ನಮ್ಮದೇ ಎಂಬ ಹಾಡಿನೊಂದಿಗೆ ಯುವಜನ ಸಮ್ಮೇಳನದ ಯಶಸ್ಸಿಗೆ ಬಂದಿದ್ದ ಎಲ್ಲರೂ ಜವಾಬ್ದಾರಿ ಹೊತ್ತು ನಿರ್ಗಮಿಸಿದರು.

ಸ್ವಾಗತ ಸಮಿತಿ

ಗೌರವ ಅಧ್ಯಕ್ಷರು : ನಾಡೋಜ ಡಾ॥ಬರಗೂರು ರಾಮಚಂದ್ರಪ್ಪನವರು
ಅಧ್ಯಕ್ಷರು : ಜಿ.ಸಿ.ಬಯ್ಯಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಕೆಪಿಆರ್‌ಎಸ್
ಪ್ರಧಾನ ಕಾರ್ಯದರ್ಶಿ : ಬಿ.ರಾಜಶೇಖರಮೂರ್ತಿ, ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ
ಸಂಘಟನಾ ಕಾರ್ಯದರ್ಶಿಗಳು : ಎನ್.ಎಲ್.ಭರತ್‌ರಾಜ್, ಡಿವೈಎಫ್‌ಐ ರಾಜ್ಯ ಅಧ್ಯಕ್ಷರು, ಪಿ.ನಾಗರಾಜ್, ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಅಧ್ಯಕ್ಷರು, ಖಜಾಂಚಿ: ಲಿಂಗರಾಜು, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ

ಅಸ್ಪೃಶ್ಯತೆಯ ವಿರುದ್ಧದ ಹೋರಾಟದಲ್ಲಿ ಕಮ್ಯುನಿಸ್ಟರು

ಏಪ್ರಿಲ್ 14, ಜಾತಿ, ಅಸ್ಪೃಶ್ಯತೆಗಳ ವಿರುದ್ಧದ ಒಬ್ಬ ಅಪ್ರತಿಮ ಹೋರಾಟಗಾರ ಡಾ. ಬಿ.ಆರ್.ಅಂಬೇಡ್ಕರ್ ಅವರ 121ನೇ ಜನ್ಮ ದಿನ. ಈ ಸಂದರ್ಭದಲ್ಲಿ ಭಾರತದಲ್ಲಿ ಅಸ್ಪೃಶ್ಯತೆಯ ವಿರುದ್ಧ ಕಮ್ಯುನಿಸ್ಟರು ನಡೆಸಿದ ಹೋರಾಟದ ಒಂದು ಮೆಲುಕು. ಅಂಬೇಡ್ಕರರ ಹೋರಾಟಗಳ ಒಬ್ಬ ಆತ್ಮೀಯ ಒಡನಾಡಿಯಾಗಿದ್ದ ಕಮ್ಯುನಿಸ್ಟ್ ನಾಯಕ ಬಿ.ಆರ್. ಮೋರೆ ಅವರ ಬದುಕಿನ ಚಿತ್ರಣದೊಂದಿಗೆ.

ಜಿ.ಎನ್.ನಾಗರಾಜ್
'ಸಂವಾದ' ಪತ್ರಿಕೆಗಾಗಿ ಬರೆದ ಲೇಖನ

ರಾಮಚಂದ್ರ ಬಾಬಾಜಿ ಮೋರೆ ಅಥವಾ ಆರ್.ಬಿ.ಮೋರೆ, ಇವರ ಹೆಸರನ್ನು ದಲಿತ ಚಳುವಳಿಯುಲ್ಲಿರುವ ಯಾರಾದರೂ ಕೇಳಿದ್ದಾರೆಯೇ ? ಯಾರ ನೆನಪಿನಲ್ಲಾದರೂ ಉಳಿದಿದೆಯೇ ? ಖಂಡಿತಾ ಇಲ್ಲ. ಮಹಾರಾಷ್ಟ್ರದ ಹೊರಗಂತೂ ಯಾರಿಗೂ ಗೊತ್ತಿಲ್ಲದಂತೆ ಅವರ ಹೆಸರು ಮರೆಯಾಗಿ ಬಿಟ್ಟಿದೆ.

ಭಾರತದ ದಲಿತ ಚಳುವಳಿಯ ಇತಿಹಾಸದಲ್ಲಿ ಚಳುವಳಿಯ ಧ್ರುವತಾರೆ ರಾಷ್ಟ್ರ ನಾಯಕ ಡಾ.ಅಂಬೇಡ್ಕರ್‌ರವರ ಜೊತೆಗೇ ಪ್ರಕಾಶ ಮಾನವಾಗಿ ಬೆಳಗಬೇಕಾದ ಹೆಸರದು. ಆದರೆ ಒಂದು ನಿರ್ದಿಷ್ಟ ಕಾರಣದಿಂದ ಅದು ದಲಿತ ಚಳುವಳಿ ಇತಿಹಾಸದಿಂದ ಮರೆಮಾಚಲಾಗಿದೆ.

ಆರ್.ಬಿ.ಮೋರೆಯವರು 1903ರಲ್ಲಿ ಮಹಾಡ್ ತಾಲ್ಲೂಕಿನ ಲಡಾವಳಿ ಎಂಬ ಗ್ರಾಮದಲ್ಲಿ ಜನಿಸಿದವರು. ಮಹಾಡ್ ತಾಲ್ಲೂಕಿನ ದಾಸಗಾಂವ್ ಎಂಬ ಊರಿನಲ್ಲಿ ವಾಸಮಾಡಿ ಅಲ್ಲಿಯೇ ದಲಿತರಿಗಾಗಿದ್ದ ಪ್ರತ್ಯೇಕ ಪ್ರಾಥಮಿಕ ಶಾಲೆಯಲ್ಲಿ ಓದಿದವರು. ಆದರೆ ಅವರಿಗೆ ಶಿಕ್ಷಣ ಮುಂದುವರೆಸಲು ಸ್ಕಾಲರ್‌ಶಿಪ್ ದೊರೆತರೂ ಕೂಡ ದಲಿತರ ಅಸ್ಪೃಶ್ಯತೆಯ ಕಾರಣಕ್ಕಾಗಿ ತಾಲೂಕು ಕೇಂದ್ರವಾದ ಮಹಾಡ್‌ನ ಪ್ರೌಢಶಾಲೆಯಲ್ಲಿ ಪ್ರವೇಶ ದೊರಕಲಿಲ್ಲ.

11 ರ ಎಳೆಯ ವಯಸ್ಸಿನಲ್ಲಿಯೇ ಹೋರಾಟ ಆರಂಭ

'ಅಗಲೇ, 11ರ ಸಣ್ಣ ವಯಸ್ಸಿನಲ್ಲಿಯೇ ಮಹಾಡ್‌ನಲ್ಲಿ ಅಸ್ಪೃಶ್ಯತೆಯ ವಿರುದ್ಧ ಅವರ ಹೋರಾಟ ಆರಂಭವಾಯಿತು. ಮಹಾಡ್‌ನಲ್ಲಿಯ ಕೆಲವು ಸಮಾಜ ಸುಧಾರಕರ ನೆರವಿನಿಂದ ಜಿಲ್ಲಾಧಿಕಾರಿ ಸೇರಿದಂತೆ ವಿವಿಧ ಅಧಿಕಾರಿಗಳಿಗೆ, ಪತ್ರಿಕೆಗಳಿಗೆ ಪತ್ರ ಬರೆದು ಕೊನೆಗೂ ಪ್ರೌಢಶಾಲೆಯಲ್ಲಿ ಪ್ರವೇಶಾವಕಾಶ ದೊರೆಸಿಕೊಂಡರು. ಈ ಸುದ್ದಿ ಮಹಾಡ್ ತಾಲ್ಲೂಕಿನಲ್ಲಿ ಅಲೆಯಂತೆ ಹಬ್ಬಿತು. ಹೀಗೆ ವಿದ್ಯಾರ್ಥಿ ದೆಸೆಯಿಂ ದಲೇ ಇಂತಹ ಅನ್ಯಾಯದ ಅನೇಕ ಪ್ರಕರಣಗಳನ್ನು ಎತ್ತಿಕೊಂಡು ಪತ್ರ ಸಮರ ಆರಂಭಿಸಿದರು. ಮಹಾಡ್‌ನ ಸಾರ್ವಜನಿಕ ಸ್ಥಳಗಳಲ್ಲಿ ದಲಿತರು ಮೀನು, ತರಕಾರಿ ಮಾರುವ ಅವಕಾಶಕ್ಕಾಗಿ ಇದೇ ರೀತಿ ಹೋರಾಡಿ ಜಯಗಳಿಸಿದರು. ಮಹಾಡ್‌ನಲ್ಲಿ ದಲಿತರಿಗಾಗಿಯೇ ಅವರು ಆರಂಭಿಸಿದ ಹೋಟೆಲ್ ಒಂದು ದಲಿತ ಸೈನಿಕರ, ದಲಿತ ಕ್ರಿಯಾಶೀಲರ ಕೇಂದ್ರವಾಯಿತು.



ಕೆರೆಯ ನೀರಿಗಾಗಿ ಹೋರಾಟ


ಈ ಎಲ್ಲ ಹೋರಾಟಗಳ ಮುಂದುವರಿಕೆಯಾಗಿ ಅವರು 1926ರಲ್ಲಿ ಕೊಂಕಣಸ್ಥ ಮಹಾರ್ ಸೇವಾ ಸಂಘವನ್ನು ಕಟ್ಟಿದರು. ಈ ಸಂಘಕ್ಕೆ ಆರ್.ಬಿ.ಮೋರೆಯವರು ಪ್ರಧಾನ ಕಾರ್ಯದರ್ಶಿಯಾದರೆ ಭಿಕಾಜಿ ಗಾಯಕವಾಡ್ ಅಧ್ಯಕ್ಷರು. ದಲಿತರ ಅನೇಕ ರೀತಿಯ ಸಂಕಟಗಳನ್ನು ನೋಡುತ್ತಾ ರೋಸಿ ಹೋಗಿದ್ದ ಮೋರೆ ತಮ್ಮ ಊರಾದ ದಾಸಗಾಂವ್ ಗ್ರಾಮದಲ್ಲಿದ್ದ ಕ್ರಾಫೋರ್ಡ್‌ನ ಕೆರೆಯೆಂಬ ಸಾರ್ವಜನಿಕ ಕೆರೆಯಲ್ಲಿ ನೀರನ್ನು ಉಪಯೋಗಿಸುವುದಕ್ಕಾಗಿ ಜೊತೆಗಾರರೊಂದಿಗೆ ದಾಸಗಾಂವ್ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಪ್ರಚಾರ ಆರಂಭಿಸಿದರು. 1926ರ ಡಿಸೆಂಬರ್ ನಾಲ್ಕರಂದು ಪ್ರಸಿದ್ಧ ಮಹಾಡ್ ಸತ್ಯಾಗ್ರಹಕ್ಕಿಂತ ಮೂರು ತಿಂಗಳು ಮೊದಲೇ ನೂರಾರು ಜನ ದಲಿತರು ಕೆರೆಯ ನೀರನ್ನು ಉಪಯೋಗಿಸುವ ನೇರ ಕಾರ್ಯಕ್ರಮಕ್ಕೆ ಕೈ ಹಾಕಿದರು. ಈ ದಿಟ್ಟ ಕ್ರಮ ಇಡೀ ಜಿಲ್ಲೆಯಲ್ಲಿಯೇ ಮಿಂಚಿನಂತಹ ಪ್ರಭಾವ ಬೀರಿತು.

ಈ ಪ್ರದೇಶದಲ್ಲಿ ದಲಿತರ ಸಮಾವೇಶ ಒಂದನ್ನು ಸಂಘಟಿಸಿ ಅದಕ್ಕೆ ಡಾ.ಅಂಬೇಡ್ಕರ್‌ರವರನ್ನು ಕರೆಯಬೇಕೆಂದು 1924ರಿಂದಲೇ ಪ್ರಯತ್ನಿಸಿ ಕೊನೆಗೆ ಅವರು ಮಾರ್ಚ್ 19-20ಕ್ಕೆ ಮಹಾಡ್‌ಗೆ ಬರುವುದೆಂದು ನಿಶ್ಚಿತವಾಯಿತು. ದಾಸಗಾಂವ್ ಗ್ರಾಮದ ಕ್ರಾಫೋರ್ಡ್ ಕೆರೆಯ ಹೋರಾಟದ ಯಶಸ್ಸಿನಿಂದ ಸ್ಫೂರ್ತಿಗೊಂಡ ವಾತಾವರಣದಲ್ಲಿ ಮೋರೆ ಮತ್ತು ಸಂಗಡಿಗರು ಹಳ್ಳಿ ಹಳ್ಳಿಗೆ ಹೋಗಿ ಸಭೆಗಳನ್ನು ನಡೆಸಿ ಮಹಾಡ್ ಸಮಾವೇಶದ ಯಶಸ್ಸಿಗಾಗಿ ಹಗಲಿರುಳೂ ದುಡಿದರು.

ಮಹಾಡ್ ಕೆರೆ ಸತ್ಯಾಗ್ರಹ

1927ರ ಮಾರ್ಚ್ 19ರಂದು 5,000ಕ್ಕೂ ಹೆಚ್ಚು ದಲಿತರು ಮಹಾಡ್‌ನಲ್ಲಿ ಸೇರಿದರು. ಡಾ.ಅಂಬೇಡ್ಕರ್‌ರವರ ಭಾಷಣ ಅವರಲ್ಲಿ ಮತ್ತಷ್ಟು ಸ್ಫೂರ್ತಿ ತುಂಬಿತು. ಇದರಿಂದ ಉತ್ತೇಜಿತರಾಗಿ ಮರುದಿನ 20ರಂದು ಮಹಾಡ್‌ನ ಚವಡಾರ್ ಕೆರೆಯ ನೀರಿನ ಉಪಯೋಗದ ಹಕ್ಕನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಮತ್ತು ಅಂಬೇಡ್ಕರ್‌ರವರ ನೇತೃತ್ವದಲ್ಲಿ ಸಾವಿರಾರು ದಲಿತರು ಕೆರೆಯ ನೀರನ್ನು ಸ್ಪರ್ಶಿಸಿದರು. ಇದರಿಂದ ಉದ್ರಿಕ್ತರಾದ ಮೇಲು ಜಾತಿಗಳ ಸನಾತನಿಗಳು ಈ ಚಳುವಳಿಕಾರರ ಮೇಲೆ, ಊರಿನ ದಲಿತರ ಮನೆ, ಅಂಗಡಿಗಳ ಮೇಲೆ ಧಾಳಿ ಮಾಡಿದರು. ಈ ಹೋರಾಟದ ಸುದ್ಧಿ ಮರುದಿನ ಇಡೀ ದೇಶಕ್ಕೆ ಹಬ್ಬಿತು. ಅಂಬೇಡ್ಕರ್‌ರವರು ರಾಷ್ಟ್ರೀಯ ನಾಯಕರಾಗಿ ಹೆಸರಾದರು.





ಡಾ|| ಬಿ.ಆರ್.ಅಂಬೇಡ್ಕರ್ - ಒಡನಾಡಿ ಕಾಮ್ರೇಡ್ ಬಿ.ಆರ್.ಮೋರೆ

"ಬಹಿಷ್ಕೃತ ಭಾರತ" ಎಂಬ ಪ್ರಸಿದ್ಧ ಪತ್ರಿಕೆ ಮತ್ತು ಸಮತಾ ಸೈನಿಕ ದಳ

ಈ ಚಳುವಳಿಯ ಯಶಸ್ಸಿನ ಜೊತೆಯಲ್ಲಿಯೇ "ಬಹಿಷ್ಕೃತ ಭಾರತ' ಎಂಬ ಪತ್ರಿಕೆಯನ್ನು ಮೋರೆಯವರ ಸಹಾಯದೊಂದಿಗೆ ಆರಂಭಿಸಲು ಅಂಬೇಡ್ಕರರು ನಿಶ್ಚಯಿಸಿದರು. ಕೇವಲ 10 ದಿನಗಳ ನಂತರ ಏಪ್ರಿಲ್ 1, 1927ರಂದು ಹೊರ ಬಂದ ಮೊದಲ ಸಂಚಿಕೆ ಮಹಾಡ್ ಸಮಾವೇಶ ಹಾಗೂ ಸತ್ಯಾಗ್ರಹದ ಬಗ್ಗೆ ಆರ್.ಬಿ.ಮೋರೆಯವರ ಲೇಖನವನ್ನು ಒಳಗೊಂಡಿತ್ತು. ಈ ಲೇಖನದಲ್ಲಿಯೇ ಮಹಾಡ್‌ನಲ್ಲಿಯ ಧಾಳಿ, ದಮನಗಳನ್ನು ಎದುರಿಸಲು ಮತ್ತೊಂದು ಸಮಾವೇಶವನ್ನೂ ಸಂಘಟಿಸುವ ತೀರ್ಮಾನವನ್ನು ಘೋಷಿಸಿದ್ದರು.

ಮನುಸ್ಮೃತಿಯನ್ನು ಸುಟ್ಟಿದ್ದು

ಮಹಾಡ್‌ನ ಎರಡನೇ ಸಮಾವೇಶಕ್ಕಾಗಿ ಭರದಿಂದ ಸಿದ್ಧತೆಗಳು ಆರಂಭವಾದವು. ಈ ಸಿದ್ಧತೆಗಳ ಭಾಗವಾಗಿ ಸಮಾವೇಶದ ಮೇಲೆ ನಡೆಯಬಹುದಾದ ಧಾಳಿಗಳಿಂದ ರಕ್ಷಿಸಿಕೊಳ್ಳಲು ಕಾಂಗ್ರೆಸ್ ಸೇವಾದಳದ ಉದಾಹರಣೆಯನ್ನು ಅನುಸರಿಸಿ ಅಂಬೇಡ್ಕರ್ ಸೇವಾ ದಳ ಎಂಬ ಸಂಘಟನೆಯನ್ನು ಮೋರೆಯವರು ಮತ್ತು ಅವರ ಜೊತೆಗಾರರು ಕಟ್ಟಿದರು. ಇದರಲ್ಲಿ ಬ್ರಿಟಿಷ್ ಸೈನ್ಯದಿಂದ ನಿವೃತ್ತರಾಗಿದ್ದ ಸೈನಿಕರು ಮತ್ತು ದಲಿತ ಯುವಕರು ಹೆಚ್ಚು ಸಂಖ್ಯೆಯಲ್ಲಿದ್ದರು. ಈ ಸೇವಾ ದಳಕ್ಕೆ ಮುಂದೆ ಅಂಬೇಡ್ಕರರು ಸಮತಾ ಸೈನಿಕ ದಳ ಎಂದು ಹೆಸರು ಬದಲಾಯಿಸಿದರು.

ಎರಡನೇ ಮಹಾಡ್ ಸಮಾವೇಶ 1927ರ ಡಿಸೆಂಬರ್ 25-26ರಂದು ನಡೆಸಲಾಯಿತು. ಈ ಸಮಾವೇಶದ ಸಮಯದಲ್ಲಿ ಕೋರ್ಟ್ ಚವಡಾರ್ ಕೆರೆಯ ಕಡೆಗೆ ಸಾಗದಂತೆ ನಿಷೇಧವನ್ನೂ ಹೇರಿತ್ತು. ಅದನ್ನು ಧಿಕ್ಕರಿಸಿ ಕೆರೆಯ ನೀರನು ಕುಡಿಯಲು ಬಳಸಲು ಮೋರೆ, ಗಾಯಕವಾಡ್ ಮೊದಲಾದವರು ಒತ್ತಾಯಿಸಿದರು. ಅನೇಕರು ಈ ಕ್ರಮಕ್ಕೆ ಮುಂದಾಗಲು ಹಿಂಜರಿದಾಗ, ಅದಕ್ಕೆ ಬದಲಾಗಿ ಮನುಸ್ಮೃತಿಯನ್ನು ಸುಡಲಾಯಿತು. ಈ ಸಮಾವೇಶದ ಭಾಗವಾಗಿ ಮೊದಲ ಬಾರಿಗೆ ದಲಿತ ಮಹಿಳೆಯರ ಸಮಾವೇಶವನ್ನು ನಡೆಸಲಾಯಿತು.

ಹೀಗೆ ಮೋರೆಯವರು ಅಂಬೇಡ್ಕರರ ನಾಯಕತ್ವದಲ್ಲಿ ನಡೆದ ಮಹಾಡ್ ಸಮಾವೇಶ ಮತ್ತು ಚಳುವಳಿಗಳೆಲ್ಲದರ ಮುಖ್ಯ ಸಂಘಟಕ ಮತ್ತು ಸಹಾಯಕರಾಗಿದ್ದರು. ಮುಂದೆ ಕೂಡ ಕೊಂಕಣ ಪ್ರಾಂತ್ಯದ ಪಾಳೆಯಗಾರಿ ಪದ್ಧತಿಯಾದ 'ಖೋತ್' ಪದ್ಧತಿಯ ವಿರುದ್ಧ ಹೋರಾಟದಲ್ಲಿ ತೊಡಗಿದರು. ಈ ಸಂದರ್ಭದಲ್ಲಿಯೇ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಬಿ.ಟಿ.ರಣದಿವೆ, ಶ್ಯಾಮರಾವ್ ಮತ್ತು ಗೋದಾವರಿ ಪರುಳೇಕರ್‌ರವರ

ಪುಟ 13ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ದ್ವಿಗುಣ ಶಕ್ತಿಯಿಂದ ಪ್ರಸಕ್ತ ಸವಾಲುಗಳನ್ನು ಎದುರಿಸುವ ಸಂಕಲ್ಪ

ಸಿಪಿಐ(ಎಂ) ೨೦ನೇ ಮಹಾಧಿವೇಶನದ ದೃಢ ನಿರ್ಧಾರ

ಮಾರ್ಕ್ಸ್‌ರವರು ತಮ್ಮ ಪ್ರಖ್ಯಾತ ಉದ್ಗಾರದಲ್ಲಿ ಹೇಳಿರುವಂತೆ, ಜಗತ್ತನ್ನು ಅರಿಯುವುದಷ್ಟೇ ಅಲ್ಲ, ಅದನ್ನು ಬದಲಾಯಿಸಬೇಕು. 20ನೇ ಮಹಾಧಿವೇಶನದಲ್ಲಿ ಚರ್ಚಿಸಿದ ಪ್ರಧಾನ ಪ್ರಶ್ನೆ ಇದು: ಭಾರತೀಯ ಮೂರ್ತ ಪರಿಸ್ಥಿತಿಗಳಲ್ಲಿ ಬಂಡವಾಳಶಾಹಿಗೆ ರಾಜಕೀಯ ಪರ್ಯಾಯವನ್ನು ಬಲಪಡಿಸುವುದು ಹೇಗೆ ಎಂಬುದು. ವಸ್ತುಸ್ಥಿತಿ ಬಂಡವಾಳಶಾಹಿಗೆ ಒಂದು ರಾಜಕೀಯ ಪರ್ಯಾಯವನ್ನು ಬಲಪಡಿಸುವ ಅಗತ್ಯದತ್ತ ತೀವ್ರವಾಗಿ ಬೊಟ್ಟು ಮಾಡುತ್ತಿದ್ದರೆ, ಕಾರಕ ಅಂಶವನ್ನು, ಎಂದರೆ, ಇಂತಹ ಒಂದು ರಾಜಕೀಯ ಪರ್ಯಾಯವನ್ನು ಸ್ಥಾಪಿಸಲು, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಎಲ್ಲ ಶೋಷಿತ ಜನವಿಭಾಗಗಳ ಹೋರಾಟದಲ್ಲಿನ ಐಕ್ಯತೆಯನ್ನು ಬಲಪಡಿಸಬೇಕಾಗಿದೆ. 20ನೇ ಮಹಾಧಿವೇಶನ ಈ ರಾಜಕೀಯ ಪರ್ಯಾಯವನ್ನು ಬಲಪಡಿಸುವ ಸಿಪಿಐ(ಎಂ)ನ ದೃಢನಿರ್ಧಾರವನ್ನು ದ್ವಿಗುಣಗೊಳಿಸಿದೆ.

'ಪೀಪಲ್ಸ್ ಡೆಮಾಕ್ರೆಸಿ' ವಾರ ಪತ್ರಿಕೆಯ ಏಪ್ರಿಲ್ 12, 2012 ರ ಸಂಪಾದಕೀಯ

ಆರು ದಿನಗಳ ಕಾಲ, 727 ಚುನಾಯಿತ ಪ್ರತಿನಿಧಿಗಳು ಮತ್ತು 74 ವೀಕ್ಷಕರು ಮೂರು ಪ್ರಧಾನ ದಸ್ತಾವೇಜುಗಳ ಮೇಲೆ ಚರ್ಚೆ ನಡೆಸಿ ಅವನ್ನು ಅಂಗೀಕರಿಸಿದರು–ಎಪ್ರಿಲ್4ರಿಂದ 9ರ ವರೆಗೆ ಕೇರಳದ ಕೋಝಿಕೊಡ್‌ನಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ 20 ನೇ ಮಹಾಧಿವೇಶನದಲ್ಲಿ ಕರಡು ರಾಜಕೀಯ ನಿರ್ಣಯ, ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಮೇಲೆ ಕರಡು ನಿರ್ಣಯ ಮತ್ತು ರಾಜಕೀಯ–ಸಂಘಟನಾತ್ಮಕ ನಿರ್ಣಯವನ್ನು ಅಂಗೀಕರಿಸಲಾಯಿತು.

ಎಂದಿನಂತೆ, ಸಿಪಿಐ(ಎಂ) ಅನುಸರಿಸಿಕೊಂಡು ಬಂದಿರುವ ಆಂತರಿಕ ಪ್ರಜಾಪ್ರಭುತ್ವದ ಆಚರಣೆಗೆ ಅನುಗುಣವಾಗಿ ಮೊದಲ ಎರಡು ದಸ್ತಾವೇಜುಗಳ ಕರಡುಗಳನ್ನು ಮಹಾಧಿವೇಶನದ ಎರಡು ತಿಂಗಳ ಮೊದಲು ಪಕ್ಷದ ಎಲ್ಲ ಸದಸ್ಯರೂ ಚರ್ಚಿಸಲು ಅನುವಾಗುವಂತೆ ಬಿಡುಗಡೆ ಮಾಡಲಾಗಿತ್ತು. ಅವುಗಳು ಸಾರ್ವಜನಿಕವಾಗಿ ಲಭ್ಯವಾಗಿದ್ದವು. ಇದು ಭಾರತದ ಬೇರಾವ ರಾಜಕೀಯ ಪಕ್ಷದಲ್ಲೂ ಬಹಳ ಅಪರೂಪವಾಗಿರುವ ಆಚರಣೆ. ಈ ಚರ್ಚೆಗಳ ಪರಿಣಾಮವಾಗಿ ಮಹಾಧಿವೇಶನ ಆರಂಭವಾಗುವ ಮೊದಲು 3713 ತಿದ್ದುಪಡಿಗಳನ್ನು ಪರಿಶೀಲಿಸಿ ಅವುಗಳಲ್ಲಿ 163 ತಿದ್ದುಪಡಿಗಳನ್ನು ರಾಜಕೀಯ ನಿರ್ಣಯದಲ್ಲಿ ಸ್ವೀಕರಿಸಲಾಯಿತು. ಅದೇ ರೀತಿ ಸೈದ್ಧಾಂತಿಕ ನಿರ್ಣಯಕ್ಕೆ 1014 ತಿದ್ದುಪಡಿಗಳು ಮಹಾಧಿವೇಶನದ ಆರಂಭವಾಗುವ ಮೊದಲೇ ಬಂದಿದ್ದವು. ಇವುಗಳಲ್ಲಿ 38ನ್ನು ಸ್ವೀಕರಿಸಲಾಯಿತು. ಇವಲ್ಲದೆ, ಮಹಾಧಿವೇಶನದಲ್ಲಿ ಪ್ರತಿನಿಧಿಗಳು ರಾಜಕೀಯ ನಿರ್ಣಯಕ್ಕೆ 349 ತಿದ್ದುಪಡಿಗಳನ್ನು ಮತ್ತು ಸೈದ್ಧಾಂತಿಕ ನಿರ್ಣಯಕ್ಕೆ 235 ತಿದ್ದುಪಡಿಗಳನ್ನು ಮಂಡಿಸಿದರು. ಮಹಾಧಿವೇಶನ ಇವುಗಳಲ್ಲಿ ಪ್ರತಿಯೊಂದನ್ನೂ ಆಮೂಲಾಗ್ರವಾಗಿ ಪರಿಶೀಲಿಸಿ ಅವುಗಳಲ್ಲಿ ಕೆಲವನ್ನು ಸ್ವೀಕರಿಸಿತು. ಈಗ ಅಂಗೀಕರಿಸಿರುವ ನಿರ್ಣಯಗಳು ಈ ರೀತಿಯ ತೀವ್ರ ಚರ್ಚೆಯ ಫಲಿತಾಂಶಗಳು–ಇವು ಮುಂದಿನ ಮೂರು ವರ್ಷಗಳಲ್ಲಿ ಸಿಪಿಐ(ಎಂ) ಅನುಸರಿಸುವ ರಾಜಕೀಯ–ಕಾರ್ಯತಂತ್ರಾತ್ಮಕ ಮಾರ್ಗವನ್ನು ಹಾಕಿ ಕೊಟ್ಟಿವೆ.

ಈ 20ನೇ ಮಹಾಧಿವೇಶನ, 1930ರ ದಶಕದ ಮಹಾ ಕುಸಿತದ ನಂತರದ ಅತ್ಯಂತ ಕೆಟ್ಟ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಇನ್ನೂ ಮುಂದುವರೆಯುತ್ತಿರುವ ಹಿನ್ನೆಲೆಯಲ್ಲಿ ನಡೆದಿದೆ. ಇದು, ಬಂಡವಾಳಶಾಹಿ ಎಂದಿಗೂ ಮಾನವ ಶೋಷಣೆಯಿಂದ ಮತ್ತು ಬಿಕ್ಕಟ್ಟುಗಳಿಂದ ಮುಕ್ತವಾದ ಒಂದು ವ್ಯವಸ್ಥೆಯಾಗಲು ಸಾಧ್ಯವಿಲ್ಲ ಎಂಬ ಸಿಪಿಐ(ಎಂ)ನ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ತಿಳುವಳಿಕೆಯನ್ನು ಘಂಟಾಘೋಷವಾಗಿ ಎತ್ತಿ ಹಿಡಿದಿದೆ. ಹಿಂದಿನ ಸೋವಿಯೆತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದವನ್ನು ಕಳಚಿ ಹಾಕಿದ ಎರಡು ದಶಕಗಳ ನಂತರ ಮೊದಲ ಬಾರಿಗೆ ವಿಶ್ವವ್ಯಾಪಿಯಾಗಿ ಸಾರ್ವತ್ರಿಕ ಪ್ರತಿಭಟನೆಗಳು ಹೆಚ್ಚುತ್ತಿವೆ; ಈ ಬಿಕ್ಕಟ್ಟಿನ ವಿರುದ್ಧ, ಅದು ಹೇರುತ್ತಿರುವ ಸಂಕಟಗಳು, ಕ್ಲೇಶಗಳ ವಿರುದ್ಧ ಪ್ರತಿಭಟಿಸುತ್ತಿದ್ದಾರೆ, ಬಂಡವಾಳಶಾಹಿಯನ್ನು ಒಂದು ವ್ಯವಸ್ಥೆಯಾಗಿಯೇ ಪ್ರಶ್ನಿಸುತ್ತಿದ್ದಾರೆ, ಒಂದು ಪರ್ಯಾಯದ ಅಗತ್ಯವನ್ನು ಎತ್ತಿ ತೋರಿಸುತ್ತಿದ್ದಾರೆ. ಅದೇ ರೀತಿ ಭಾರತದಲ್ಲೂ, ಇದು ಭಾರತೀಯ ಆಳುವ ವರ್ಗಗಳು ಅನುಸರಿಸುತ್ತಿರುವ ನವ–ಉದಾರವಾದಿ ಆರ್ಥಿಕ ಧೋರಣೆಗಳು ಹೇರುತ್ತಿರುವ ಸಂಕಟಗಳ ವಿರುದ್ಧ ಪ್ರತಿಭಟನೆಗಳು ಮತ್ತು ಹೋರಾಟಗಳ ಮೂಲಕ ವ್ಯಕ್ತಗೊಳ್ಳುತ್ತಿದೆ. ಜನತೆ ಸ್ವತಃ ಕಲಿತುಕೊಂಡ ಅನುಭವಗಳು ಕೂಡ, ಸಮಾಜವಾದ ಮಾತ್ರವೇ ಮಾನವ ಶೋಷಣೆಯನ್ನು ಕೊನೆಗೊಳಿಸುವ, ಮಾನವ ನಾಗರಿಕತೆಯ ಮುನ್ನಡೆಯ ಪ್ರಯೋಜನಗಳು ಕೆಲವರಿಗೇ ಸೀಮಿತವಾಗುವ ಬದಲು ಎಲ್ಲರಿಗೂ ಲಭ್ಯಗೊಳಿಸುವ ಪರ್ಯಾಯ ವ್ಯವಸ್ಥೆ ಎಂಬ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ತಿಳುವಳಿಕೆಯನ್ನು ಮತ್ತೊಮ್ಮೆ ಘಂಟಾಘೋಷವಾಗಿ ಎತ್ತಿ ತೋರಿದೆ. ಬಂಡವಾಳಶಾಹಿಗೆ ಈ ಪರ್ಯಾಯದ ಅಗತ್ಯ ಜಗತ್ತಿನಾದ್ಯಂತ ತ್ವರಿತವಾಗಿ ಬೆಳೆಯುತ್ತಿದೆ.

ರಾಜಕೀಯ ಪರ್ಯಾಯವನ್ನು ಬಲಪಡಿಸುವುದು ಹೇಗೆ?

ಆದರೆ ಚರ್ಚೆಯ ಅಂಶವೆಂದರೆ, ಮಾರ್ಕ್ಸ್‌ರವರು ತಮ್ಮ ಪ್ರಖ್ಯಾತ ಉದ್ಗಾರದಲ್ಲಿ ಹೇಳಿರುವಂತೆ, ಜಗತ್ತನ್ನು ಅರಿಯುವುದಷ್ಟೇ ಅಲ್ಲ, ಅದನ್ನು ಬದಲಾಯಿಸಬೇಕು. 20ನೇ ಮಹಾಧಿವೇಶನದಲ್ಲಿ ಚರ್ಚಿಸಿದ ಪ್ರಧಾನ ಪ್ರಶ್ನೆ ಇದು: ಭಾರತೀಯ ಮೂರ್ತ ಪರಿಸ್ಥಿತಿಗಳಲ್ಲಿ ಬಂಡವಾಳಶಾಹಿಗೆ ರಾಜಕೀಯ ಪರ್ಯಾಯವನ್ನು ಬಲಪಡಿಸುವುದು ಹೇಗೆ ಎಂಬುದು.

ಪುಟ 10ಕ್ಕೆ



ಜನಶಕ್ತಿ
ಕನ್ನಡ ವಾರಪತ್ರಿಕೆ

ಸವಾಲುಗಳನ್ನು ಎದುರಿಸೋಣ

ಪುಟ 9 ರಿಂದ

ಭಾರತದಲ್ಲಿ ಇಂತಹ ಒಂದು ಪರ್ಯಾಯವನ್ನು ಬಲಪಡಿಸುವುದು ಇಲ್ಲಿನ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸುವ ಮೂಲಕ ಮಾತ್ರವೇ ಸಾಧ್ಯವಾಗುತ್ತದೆ. ಮುಂದಿನ ಮಹಾಧಿವೇಶನದ ವರೆಗಿನ ಮೂರು ವರ್ಷಗಳಲ್ಲಿ ಸಿಪಿಐ(ಎಂ)ನ ರಾಜಕೀಯ–ಕಾರ್ಯತಂತ್ರಾತ್ಮಕ ಮಾರ್ಗದ ಪ್ರಧಾನ ಒತ್ತು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸುವ ಗುರಿಯ ಮೇಲಿರುತ್ತದೆ. ಆಳುವ ವರ್ಗಗಳ ಸಾಮಾಜಿಕ–ಆರ್ಥಿಕ ಧೋರಣೆಗಳ ದಿಕ್ಕು ಹೇರುತ್ತಿರುವ ಹೆಚ್ಚೆಚ್ಚು ಸಂಕಟಗಳ ವಿರುದ್ಧ ಜನತೆಯ ಬೃಹತ್ ಹೋರಾಟಗಳ ಮೂಲಕ ಇದನ್ನು ಸಾಧಿಸಬೇಕಾಗಿದೆ. ವಸ್ತುಸ್ಥಿತಿ ಬಂಡವಾಳಶಾಹಿಗೆ ಒಂದು ರಾಜಕೀಯ ಪರ್ಯಾಯವನ್ನು ಬಲಪಡಿಸುವ ಅಗತ್ಯದತ್ತ ತೀವ್ರವಾಗಿ ಬೊಟ್ಟು ಮಾಡುತ್ತಿದ್ದರೆ, ಕಾರಕ ಅಂಶವನ್ನು, ಎಂದರೆ, ಇಂತಹ ಒಂದು ರಾಜಕೀಯ ಪರ್ಯಾಯವನ್ನು ಸ್ಥಾಪಿಸಲು, ಕಾರ್ಮಿಕ ವರ್ಗದ ನೇತೃತ್ವದಲ್ಲಿ ಎಲ್ಲ ಶೋಷಿತ ಜನವಿಭಾಗಗಳ ಹೋರಾಟದಲ್ಲಿನ ಐಕ್ಯತೆಯನ್ನು ಬಲಪಡಿಸಬೇಕಾಗಿದೆ.

ಕಾರಕ ಅಂಶವನ್ನು ಬಲಪಡಿಸುವ ಈ ಗುರಿಸಾಧನೆಯಾಗಬೇಕಾದರೆ, ಆಮೂಲಕ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸಿ ರಾಜಕೀಯ ಪರ್ಯಾಯವನ್ನು ಸ್ಥಾಪಿಸಲು ಪಕ್ಷದ ಮಹಾಧಿವೇಶನ ಎಂಟು ಪ್ರದೇಶಗಳನ್ನು ಎತ್ತಿ ತೋರಿದೆ, ಅವನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕಾಗಿದೆ ಮತ್ತು ಎದ್ದು ಬರುವ ಸವಾಲುಗಳನ್ನು ನೇರವಾಗಿ ಎದುರಿಸಬೇಕಾಗಿದೆ.

ಮೊದಲನೆಯದಾಗಿ, ಸಾಮ್ರಾಜ್ಯಶಾಹಿ ಮತ್ತು ಪ್ರತಿಗಾಮಿ ಶಕ್ತಿಗಳು ಮಾರ್ಕ್ಸ್‌ವಾದ ಮತ್ತು ಸಮಾಜವಾದದ ವಿರುದ್ಧ ಹಾಕುತ್ತಿರುವ ಸೈದ್ಧಾಂತಿಕ ಸವಾಲುಗಳನ್ನು ಎದುರಿಸಿ ಸೋಲಿಸುವ ತುರ್ತು ಅಗತ್ಯ ಇದೆ. ಎರಡು ದಶಕಗಳ ಕಾಲ ಅವರು ಬಂಡವಾಳಶಾಹಿಯ 'ಅನಂತತೆ'ಯ ಬಗ್ಗೆ ಹಾಡಿ ಕುಣಿದರು, ಮಾರ್ಕ್ಸ್‌ವಾದ ಮತ್ತು ಸಮಾಜವಾದ ಸತ್ತಿವೆ ಎಂದು ಸಾರಿದರು. ಇಂದು ತೀವ್ರ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಎದುರು ಅವರು ಆಧುನಿಕೋತ್ತರವಾದದಂತಹ ಹೊಸ ತಾತ್ವಿಕ ರಚನೆಗಳ ಮೂಲಕ ಇಂತಹ ಸೈದ್ಧಾಂತಿಕ ದಾಳಿಗಳನ್ನು ತೀವ್ರವಾಗಿ ನಡೆಸುತ್ತಿದ್ದಾರೆ. ಈ ಸೈದ್ಧಾಂತಿಕ ದಾಳಿಗಳ ಸಾರಾಂಶವೆಂದರೆ, ವರ್ಗ ಶೋಷಣೆ ಮತ್ತು ವರ್ಗ ಹೋರಾಟದ ಅಸ್ತಿತ್ವವನ್ನೇ ನಿರಾಕರಿಸುತ್ತಾ, ಮಾನವ ಸಮಾಜ ಮತ್ತು ನಾಗರಿಕತೆ ಹತ್ತು ಹಲವು ಸಣ್ಣ–ಪುಟ್ಟ ಅಥವ ಸ್ಥಳೀಯ ವಿದ್ಯಮಾನಗಳ ಮೊತ್ತವಷ್ಟೇ ಎಂದು ಬಿಂಬಿಸುವ ಪ್ರಯತ್ನ. ಹೀಗೆ, ಈ ಸೈದ್ಧಾಂತಿಕ ಸವಾಲುಗಳು ಮಾನವ ಶೋಷಣೆ ತೀವ್ರಗೊಳ್ಳುತ್ತಿದೆ ಎಂಬ ಸತ್ಯವನ್ನು ಮತ್ತು ಬಂಡವಾಳಶಾಹಿಯ ಅಡಿಯಲ್ಲಿ ಪ್ರಕೃತಿಯ ಶಿಥಿಲೀಕರಣವನ್ನು ಮಬ್ಬುಗೊಳಿಸಲು ಪ್ರಯತ್ನಿಸುತ್ತವೆ.

ಎರಡನೆಯದಾಗಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಬಲವರ್ಧನೆ ಭಾರತದ ವಿಶಾಲ ಶೋಷಿತ ಜನಸಮೂಹಗಳ ಜನಪ್ರಿಯ, ಸಮರಶೀಲ ಹೋರಾಟಗಳನ್ನು ಬಲಪಡಿಸುವ ಮೂಲಕ ಮಾತ್ರವೇ ಸಂಭವಿಸಬಲ್ಲದು. ಇಂತಹ ಸಂಸದೇತರ ಹೋರಾಟಗಳನ್ನೇ ಬಲಪಡಿಸುವ ಅಗತ್ಯವಿದೆ. ಈ ಹೋರಾಟಗಳ ಶಕ್ತಿ ಮಾತ್ರವೇ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರಾತಿನಿಧ್ಯದ ಹೆಚ್ಚಳದ ಮೂಲಕ ಸಂಸತ್ತಿನಲ್ಲಿ, ವಿಧಾನಸಭೆಗಳಲ್ಲಿ, ಇತರ ಪ್ರಜಾಸತ್ತಾತ್ಮಕ ಸ್ಥಳೀಯ ಸಂಸ್ಥೆಗಳಲ್ಲಿ ಬಿಂಬಿತವಾಗುತ್ತದೆ. ಈ ಹೆಚ್ಚಳ ಕೇವಲ ರಾಜಕೀಯ ಕಸರತ್ತುಗಳು ಮತ್ತು ಸಂದೀಯ ಸಂದರ್ಭಸಾಧಕತನದ ಮೂಲಕ ಸಾಧ್ಯವಿಲ್ಲ. ಇಂತಹ ಜನಪ್ರಿಯ ಜನತಾ ಹೋರಾಟಗಳ ಆಧಾರದಲ್ಲಿ ಕಟ್ಟುವ ಎಡಪಕ್ಷಗಳ ಶಕ್ತಿಯ ಮೂಲಕ ಮಾತ್ರವೇ ಇದು ಸಂಭವಿಸಬಲ್ಲದು. ಹೀಗೆ ಈ ಗುರಿ ಸಾಧನೆಗೆ ಹೋರಾಟದ ಸಂಸದೇತರ ಮತ್ತು ಸಂಸದೀಯ ಮಾರ್ಗಗಳನ್ನು ಪರಿಣಾಮಕಾರಿಯಾಗಿ ಬೆಸೆದು ಬಲಪಡಿಸಬೇಕು.



ಕಾರ್ಮಿಕ–ರೈತ ವರ್ಗಮೈತ್ರಿ

ಮೂರನೆಯದಾಗಿ, ಸಮರಶೀಲ ಜನಪ್ರಿಯ ಹೋರಾಟಗಳ ಈ ರೀತಿಯ ಬಲವರ್ಧನೆ ಕಾರ್ಮಿಕ ವರ್ಗ, ಬಡರೈತರು ಮತ್ತು ಕೃಷಿ ಕೂಲಿಕಾರರ ನಡುವೆ ಹೋರಾಟಗಳಲ್ಲಿನ ಐಕ್ಯತೆಯನ್ನು ಕಟ್ಟಿದಾಗ ಮಾತ್ರವೇ ಕಾರ್ಯಸಾಧ್ಯವಾಗುತ್ತದೆ. ಈ ಕಾರ್ಮಿಕ–ರೈತ ಮೈತ್ರಿ ಬಲಗೂಡಿಸಿಕೊಂಡ ಜನಪ್ರಿಯ ಹೋರಾಟಗಳ ಬುನಾದಿಯಾಗಿರುತ್ತದೆ.

ನಾಲ್ಕನೆಯದಾಗಿ, ಕಾರ್ಮಿಕ–ರೈತ ಮೈತ್ರಿಯನ್ನು ಬಲಪಡಿಸುವ ಗುರಿಸಾಧನೆ ಸ್ವತಃ ಕಾರ್ಮಿಕ ವರ್ಗದ ಐಕ್ಯತೆಯನ್ನು ಬಲಪಡಿಸಿದಾಗಲೇ ಸಾಧ್ಯ. ಶ್ರಮಶಕ್ತಿಯ ತ್ವರಿತ ಬೆಳವಣಿಗೆಗೆ ದಾರಿ ಮಾಡಿಕೊಟ್ಟು, ಅದನ್ನು ಹೆಚ್ಚೆಚ್ಚಾಗಿ ವಿವಿಧ ಅಸಂಘಟಿತ ವಿಭಾಗಗಳ ಮಟ್ಟಕ್ಕಿಳಿಸುವುದೇ ನವ–ಉದಾರವಾದಿ ಸುಧಾರಣೆಗಳ ತರ್ಕವಾಗಿದೆ. ಖಾಯಂ ಉದ್ಯೋಗವನ್ನು ಆಕಸ್ಮಿಕ ಅಥವ ಕಾಂಟ್ರಾಕ್ಟ್ ಶ್ರಮವಾಗಿ ಪರಿವರ್ತಿಸುವುದರಿಂದ ಮಾಲಕರಿಗೆ ಹೆಚ್ಚಿನ ಲಾಭ ಸಿಗುತ್ತದಷ್ಟೇ ಅಲ್ಲ, ಕಾರ್ಮಿಕ ವರ್ಗದ ಐಕ್ಯತೆಯನ್ನು ಮುರಿದಿಟ್ಟು, ಅದನ್ನು ಛಿದ್ರಗೊಳಿಸುವ ಆಳುವ ವರ್ಗಗಳ ಪ್ರಯತ್ನಕ್ಕೆ ಅನುಕೂಲ ಕಲ್ಪಿಸುತ್ತದೆ. ಈ ಸವಾಲನ್ನು ಎದುರಿಸಬೇಕಾಗಿದೆ, ಅದಕ್ಕಾಗಿ, ಹೆಚ್ಚುತ್ತಿರುವ ಅಸಂಘಟಿತ ಶ್ರಮಿಕ ಸಮೂಹಗಳನ್ನು ಒಟ್ಟುಗೂಡಿಸಿ ಸಂಘಟಿತ ಕಾರ್ಮಿಕ ಆಂದೋಲನವಾಗಿ ಮಾಡಬೇಕಾಗಿದೆ.

ಐದನೆಯದಾಗಿ, ಆಧುನಿಕೋತ್ತರವಾದದಂತಹ ಮಾರ್ಕ್ಸ್‌ವಾದ–ವಿರೋಧಿ, ಕಮ್ಯುನಿಸ್ಟ್ – ವಿರೋಧಿ ಸೈದ್ಧಾಂತಿಕ ರಚನೆಗಳಿರುವುದರಿಂದ ಐಡೆಂಟಿಟಿ ರಾಜಕೀಯ ಹೆಚ್ಚೆಚ್ಚಾಗಿ ತಲೆಯೆತ್ತಲು ಅವು ಸೈದ್ಧಾಂತಿಕ ಪೋಷಣೆ ಕೊಡುತ್ತವೆ. ಇದು ಕೂಡ ಶೋಷಿತ ವಿಭಾಗಗಳ ವರ್ಗ ಐಕ್ಯತೆಯನ್ನು ಮುರಿಯುತ್ತದೆ. ಭಾರತದಲ್ಲಿ ವರ್ಗ ಹೋರಾಟವನ್ನು ತೀವ್ರಗೊಳಿಸುವುದು ಆರ್ಥಿಕ ಶೋಷಣೆಯ ಮತ್ತು ಸಾಮಾಜಿಕ ದಮನದ ಪ್ರಶ್ನೆಗಳನ್ನು ಏಕಕಾಲಕ್ಕೆ ಕೈಗೆತ್ತಿಕೊಂಡಾಗ ಮಾತ್ರವೇ ಸಾಧ್ಯ ಎಂದು ಸಿಪಿಐ(ಎಂ) ಹಿಂದಿನಿಂದಲೂ ಹೇಳುತ್ತಾ ಬಂದಿದೆ. ಜಾತಿ, ಜನಾಂಗ ಮತ್ತು ಲಿಂಗಾಧಾರಿತ ಸಾಮಾಜಿಕ ದಮನದ ಪ್ರಶ್ನೆಗಳನ್ನು ಸಿಪಿಐ(ಎಂ) ಮತ್ತು ಎಡಪಕ್ಷಗಳು ಎತ್ತಿಕೊಳ್ಳದಿದ್ದರೆ, ಈ ವಿಭಾಗಗಳು ಇಂತಹ ಐಡೆಂಟಿಟಿ ರಾಜಕೀಯಕ್ಕೆ ಬಲಿಯಾಗುತ್ತವೆ ಮತ್ತು ನಾವು ಯಾವ ಐಕ್ಯತೆಯನ್ನು ಬಲಪಡಿಸಬೇಕೆಂದಿದ್ದೇವೆಯೋ ಅದೇ ಛಿದ್ರಗೊಳ್ಳುತ್ತದೆ. ಆದ್ದರಿಂದ ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನ ಇವೆರಡರ ವಿರುದ್ಧವೂ ಹೋರಾಟಗಳನ್ನು ಏಕಕಾಲಕ್ಕೆ ಬಲಪಡಿಸುವ ಅಗತ್ಯವಿದೆ.

ಆರನೆಯದಾಗಿ, ಕೋಮುವಾದದ ಸವಾಲನ್ನು– ಬಹುಸಂಖ್ಯಾತ ಹಿಂದೂ ಕೋಮುವಾದವನ್ನು ಮತ್ತು ಎಲ್ಲ ಬಣ್ಣಗಳ ಅಲ್ಪಸಂಖ್ಯಾತ ಧಾರ್ಮಿಕ ಮೂಲಭೂತವಾದವನ್ನು– ಎದುರಿಸಬೇಕಾಗಿದೆ. ಈ ಶಕ್ತಿಗಳು ಧಾರ್ಮಿಕ ವಿಭಜನೆಯ ಆಧಾರದಲ್ಲಿ ಶೋಷಿತ ವಿಭಾಗಗಳ ಐಕ್ಯತೆಯನ್ನು ಮುರಿಯುವ ಪ್ರಯತ್ನ ಮಾಡುತ್ತವೆ, ಈ ಮೂಲಕ ಭಾರತೀಯ ಜನತೆಯ ಧಾರ್ಮಿಕ ನಂಬಿಕೆಗಳನ್ನು ತಮ್ಮ ಸಂಕುಚಿತ ಮತ್ತು ಛಿದ್ರಕಾರೀ ರಾಜಕೀಯ ಗುರಿಗಳ ಸಾಧನೆಗೆ ದುರುಪಯೋಗ ಪಡಿಸಿಕೊಳ್ಳುತ್ತವೆ. ಕೋಮುವಾದ, ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತದ ಬುನಾದಿಯನ್ನು ದುರ್ಬಲಗೊಳಿಸುವುದಲ್ಲದೆ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸಲು ಅಗತ್ಯವಾದ ಶೋಷಿತ ವರ್ಗಗಳ ಐಕ್ಯತೆಯನ್ನೇ ಛಿದ್ರಗೊಳಿಸುತ್ತದೆ.


ಏಳನೆಯದಾಗಿ, ಭಾರತದಂತಹ ಒಂದು ಬಹುದೇಶೀಯ ಮತ್ತು ಜಾಗತಿಕವಾಗಿ ಎಲ್ಲೂ ಕಾಣದಷ್ಟು ಸಾಮಾಜಿಕ=ಸಾಂಸ್ಕೃತಿಕ ವೈವಿಧ್ಯತೆ ಇರುವ ರಾಷ್ಟ್ರದಲ್ಲಿ, ಜನಗಳನ್ನು ಸಂಕುಚಿತ ರೀತಿಗಳಲ್ಲಿ ವಿಭಜಿಸುವ ಪ್ರತಿಗಾಮಿ ಜನಾಂಗೀಯ ದೇಶೀಯತೆಯ ಪ್ರವೃತ್ತಿಗಳ ಬೆಳವಣಿಗೆಗೆ ಅಪಾರ ಅವಕಾಶಗಳಿರುತ್ತವೆ. ಈ ವಿಭಾಗಗಳ ನೈಜವಾದ ದಮನ ಮತ್ತು ಪಕ್ಷಪಾತದ ವಿರುದ್ಧ ಹೋರಾಟಗಳನ್ನು ಪ್ರತಿಪಾದಿಸುತ್ತಲೇ, ಶೋಷಿತ ವಿಭಾಗಗಳ ಐಕ್ಯತೆಯನ್ನು ಇನ್ನಷ್ಟು ಛಿದ್ರಗೊಳಿಸಲು ಪ್ರಯತ್ನಿಸುವ ಈ ಸವಾಲನ್ನು ನೇರವಾಗಿ ಎದುರಿಸಿ ಸೋಲಿಸಬೇಕು.

ಎಂಟನೆಯದಾಗಿ, ನಮ್ಮ ದೇಶದ ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳ ಜನತೆಯ ಹೋರಾಟಗಳನ್ನು ಸಿಪಿಐ(ಎಂ) ಮತ್ತು ಎಡಪಕ್ಷಗಳು ಬಲವಾಗಿ ಪ್ರತಿಪಾದಿಸಬೇಕು. ಆರ್ಥಿಕ ಹಿಂದುಳಿಕೆಯನ್ನು ಭಾಷಾವಾರು ಪುನರ್ಸಂಘಟನೆಯ ನೀತಿಯನ್ನು ಛಿದ್ರಗೊಳಿಸಿ ಈಗಿರುವ ರಾಜ್ಯಗಳನ್ನು ಪುನರ್ವ್ಯವಸ್ಥೆಗೊಳಿಸಲು ಬಳಸುವ ಪ್ರವೃತ್ತಿಗಳು ಕೂಡ ಶೋಷಿತ ವಿಭಾಗಗಳ ವರ್ಗ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುತ್ತವೆ.

ವರ್ಗ ಬಲಾಬಲದಲ್ಲಿ ಬದಲಾವಣೆ

ಇಂತಹ ಸವಾಲುಗಳನ್ನು ಎದುರಿಸಿ, ಮೀರಿ ನಿಂತು ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಬಲಪಡಿಸುವ ಗುರಿ ಸಾಧಿಸಲು, ಸಿಪಿಐ(ಎಂ) ತನ್ನನ್ನು ಸಂಘಟನಾತ್ಮಕವಾಗಿ ಬಲಪಡಿಸಿಕೊಳ್ಳುವುದು ಅತ್ಯಂತ ಅನಿವಾರ್ಯ. ಸಿಪಿಐ(ಎಂ)ನ್ನು ಸಂಘಟನಾತ್ಮಕವಾಗಿ ಬಲಪಡಿಸಿ, ಅದರ ಆಧಾರದಲ್ಲಿ ನಮ್ಮ ದೇಶದ ಶೋಷಿತ ವಿಭಾಗಗಳ ಐಕ್ಯತೆಯನ್ನು ಕಟ್ಟದೆ ಈ ಯಾವ ಗುರಿಗಳ ಸಾಧನೆಯೂ ಸಾಧ್ಯವಾಗದು. ರಾಜಕೀಯ–ಸಂಘಟನಾತ್ಮಕ ವರದಿ ಈ ಕಾರ್ಯಭಾರಗಳನ್ನೆಲ್ಲ ಪರಿಶೀಲಿಸಿತು.

ಹೀಗೆ ಸಿಪಿಐ(ಎಂ)ನ 20ನೇ ಮಹಾಧಿವೇಶನ ಪ್ರಸಕ್ತ–ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾತ್ಮಕ–ಸವಾಲುಗಳನ್ನು ಎದುರಿಸುವ ಮತ್ತು ಆಳುವ ವರ್ಗಗಳು ಅನುಸರಿಸುತ್ತಿರುವ ನವ–ಉದಾರವಾದಿ ಬಂಡವಾಳಶಾಹಿ ಬೆಳವಣಿಗೆಯ ಪ್ರಸಕ್ತ ದಾರಿಗೆ ರಾಜಕೀಯ ಪರ್ಯಾಯವನ್ನು ಬಲಪಡಿಸುವ ತನ್ನ ದೃಢನಿರ್ಧಾರವನ್ನು ದ್ವಿಗುಣಗೊಳಿಸಿದೆ. ಹೀಗೆ ಸಿಪಿಐ(ಎಂ) ನಮ್ಮ ಜನತೆಯ ನಡುವಿನ ಪ್ರಸಕ್ತ ವರ್ಗ ಬಲಾಬಲವನ್ನು ಬದಲಿಸಲು ಭಾರತೀಯ ಜನತೆಯ ಎಲ್ಲ ಶೋಷಿತ ಜನವಿಭಾಗಗಳನ್ನು ಅಣಿನೆರೆಸುವ ತನ್ನ ಕ್ರಾಂತಿಕಾರಿ ಹೊಣೆಗಾರಿಕೆಯನ್ನು ನಿರ್ವಹಿಸುತ್ತದೆ, ಮತ್ತು ಜನತಾ ಪ್ರಜಾಪ್ರಭುತ್ವದ ಸ್ಥಾಪನೆಗೆ ಮತ್ತು ಅದರ ಬುನಾದಿಯ ಮೇಲೆ ಸಮಾಜವಾದದ ಸ್ಥಾಪನೆಗಾಗಿ ಕ್ರಾಂತಿಕಾರಿ ದಾಳಿಯನ್ನು ನಡೆಸುತ್ತದೆ; ಏಕೆಂದರೆ ಆ ಸಮಾಜವಾದ ಮಾತ್ರವೇ ಮಾನವ ವಿಮೋಚನೆಯ, ಉದ್ಧಾರದ ಆಧಾರವಾಗಿದೆ.



ಆರ್ ರಾಮಕೃಷ್ಣ

ಅನುಮಾನವೇ ಬೇಡ.

ನಿವೃತ್ತ ನ್ಯಾಯಮೂರ್ತಿಗಳ ಪೂರ್ವಾಪರ. ನ್ಯಾಯಮೂರ್ತಿಗಳ ನಿಷ್ಠೆ ಅವರ ವೈಯುಕ್ತಿಕ

ಪುಟ 15 ಕ್ಕೆ

ನೇಮಕಾತಿಗಳ ಹಿಂದಿನ 'ಅರ್ಹತೆ' ಯೂ.. ನ್ಯಾಯಾಲಯದ ಕಪಾಳ ಮೋಕ್ಷವೂ

ಕಳೆದ ಕೆಲವು ವಾರಗಳಲ್ಲಿ ಬಿಜೆಪಿ ಸರ್ಕಾರ ಹಲವು ಬಾರಿ ತೀವ್ರ ಕಪಾಳ ಮೋಕ್ಷಗಳಿಗೆ ಗುರಿಯಾಗಿದೆ, ಅದೂ ರಾಜ್ಯದ ನ್ಯಾಯಾಲಯಗಳಿಂದ.

ಮೊದಲನೆಯದು ರಾಜ್ಯ ಪೋಲಿಸ್ ಮಹಾ ನಿರ್ದೇಶಕರ ನೇಮಕಾತಿ ಸಂಬಂಧ. ಎರಡನೆಯದು ಕರ್ನಾಟಕ ರಾಜ್ಯದ ಉಪ ಲೋಕಾಯುಕ್ತ ನೇಮಕಾತಿ ಸಂಬಂಧ. ಮೂರನೆಯದು ರಾಜ್ಯದಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆ ಸಂಬಂಧ.

ಶಂಕರ ಬಿದರಿಯವರನ್ನು ರಾಜ್ಯ ಪೋಲಿಸ್ ಮಹಾ ನಿರ್ದೇಶಕರ ಹುದ್ದೆಯಿಂದ ಕೂಡಲೇ ಕೆಳಗಿಳಿಸಿ ಆ ಜಾಗಕ್ಕೆ ಎ.ಆರ್. ಇನ್‌ಫ್ಯಾಂಟ್ ಅವರನ್ನು ನೇಮಿಸಿ ಅಂತ ರಾಜ್ಯದ ಹೈಕೋರ್ಟ್ ಮಾರ್ಚ್ 30 ರಂದು ತೀರ್ಪು ನೀಡಿತ್ತು.

ಇಂತಹ ತೀರ್ಪು ನೀಡಲು ಕಾರಣವಾದ ಅಂಶಗಳು ನಿಜಕ್ಕೂ ಅಘಾತಕಾರಿಯಾಗಿವೆ. ವೀರಪ್ಪನ್‌ನನ್ನು ಹಿಡಿಯುವ ಸಂಬಂಧದ ಜಂಟಿ ಕಾರ್ಯಪಡೆ ಕಾರ್ಯಾಚರಣೆಯ ವೇಳೆ ಕಾರ್ಯಪಡೆಯ ಪೋಲಿಸರಿಂದ ಗ್ರಾಮಸ್ಥರ ಮೇಲೆ ವಿಚಾರಣೆಯ ಹೆಸರಿನಲ್ಲಿ ಅಮಾನುಷ ದೌರ್ಜನ್ಯಗಳು, ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಗಳು, ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರಗಳು ನಡೆದಿವೆ ಎಂದು ಈ ಸಂಬಂಧವಾಗಿ ರಚಿತವಾಗಿದ್ದ ಸುಪ್ರಿಂಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಆಯೋಗ, ಹಾಗೂ ಮಾನವ ಹಕ್ಕುಗಳ ಆಯೋಗ ಎರಡೂ ಕೂಡ ವರದಿ ನೀಡಿವೆ. ಈ ಅವಧಿಯಲ್ಲಿ "ನಾನು ಜಂಟಿ ಕಾರ್ಯಪಡೆಯ ಕಮಾಂಡರ್ ಆಗಿರಲಿಲ್ಲ. ಉಪ ಕಮಾಂಡರ್ ಅಷ್ಟೆ ಆಗಿದ್ದೆ. ನಾನು ಸದ್ದಾಂ ಹುಸೇನ್ ಅಥವಾ ಗಢಾಫಿಯ ರೀತಿಯಲ್ಲಿ ಶಕ್ತಿಶಾಲಿ ಆಗಿರಲಿಲ್ಲ. ಕಮಾಂಡರ್ ಹೇಳಿದಂತೆ ಕೇಳುವುದಷ್ಟೆ ನನ್ನ ಕೆಲಸ ಆಗಿತ್ತು" ಎಂಬ ಬಿದರಿಯವರ ಸಮರ್ಥನೆಯನ್ನು ಕೋರ್ಟ್ ತಳ್ಳಿಹಾಕಿದೆ.

ಮುಖ್ಯಮಂತ್ರಿಗೆ ತರಾಟೆ

ಹುದ್ದೆಗೆ ಅರ್ಹ ವ್ಯಕ್ತಿಗಳ ಹೆಸರನ್ನು ಶಿಫಾರಸ್ಸು ಸಂಬಂಧ ಕೇಂದ್ರ ಲೋಕಸೇವಾ ಆಯೋಗಕ್ಕೆ ಶಿಫಾರಸ್ಸು ಮಾಡುವಾಗ- ಈ ಮಾಹಿತಿಯನ್ನು ನೀಡದೆ ಶಂಕರ ಬಿದರಿಯವರಿಗೆ ವೀರಪ್ಪನ್ ಕಾರ್ಯಾಚರಣೆ ಸಂಬಂಧ ನೀಡಲಾಗಿರುವ ಶೌರ್ಯ ಪ್ರಶಸ್ತಿಯ ಕುರಿತು ಮಾತ್ರ ಮಾಹಿತಿ ನೀಡಲಾಗಿದೆ. ದೌರ್ಜನ್ಯಗಳ ಕುರಿತ ಆಯೋಗದ ವರದಿಯನ್ನು ಮುಚ್ಚಿಡಲಾಗಿದೆ... ಇಂತಹ ಗಂಭೀರ ಆರೋಪಗಳನ್ನು ಹೊತ್ತ ಕಾರ್ಯಪಡೆಯ ಮುಖ್ಯಸ್ಥರಾಗಿದ್ದ ವ್ಯಕ್ತಿಯನ್ನು ಇಂತಹ ಉನ್ನತ ಹುದ್ದೆಗೆ ನೇಮಕ ಮಾಡುವಂತೆ ಹೇಗೆ ಶಿಫಾರಸ್ಸು ಮಾಡಲು ಸಾಧ್ಯ ಎಂದು ಪ್ರಶ್ನಿಸಿರುವ ನ್ಯಾಯಾಲಯ ಈ ಸಂಬಂಧ ಮುಖ್ಯಮಂತ್ರಿಗಳನ್ನೇ ತರಾಟೆಗೆ ತೆಗೆದುಕೊಂಡಿದೆ.

ಉಪ ಲೋಕಾಯುಕ್ತರ ನೇಮಕಾತಿ ರದ್ದು

ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇರುವ ವರೆಗೂ ರಾಜ್ಯದ ಲೋಕಾಯುಕ್ತರ ಸ್ಥಾನಕ್ಕೆ ಒಬ್ಬ ಅರ್ಹ ವ್ಯಕ್ತಿಯನ್ನು ನೇಮಕ ಮಾಡುವ ಕೆಲಸ ಬಹುಶಃ ಆಗುವುದಿಲ್ಲ ಎಂದು ಕಾಣುತ್ತದೆ. ಈ ವಿಷಯದಲ್ಲಿ ರಾಜ್ಯದ ವಿಳಂಬ ತಂತ್ರಗಾರಿಕೆ ಯಶಸ್ವಿಯಾಗಿ ಮುಂದುವರಿದೆ. ಭ್ರಷ್ಟಾಚಾರದ ವಿರುದ್ಧ ಹಾರಾಡುವ ಬಿಜೆಪಿ ಕೇಂದ್ರ ನಾಯಕರೂ ರಾಜ್ಯ ಬಿಜೆಪಿ ಮುಖಂಡರಿಗೆ ಬುದ್ದಿ ಹೇಳುವ ಸ್ಥಿತಿಯಲ್ಲಿ ಇಲ್ಲ. ಬಿಜೆಪಿ ಹೈಕಮಾಂಡೇ ಬಳ್ಳಾರಿಯ ಹಬ್ಬದೂಟಕ್ಕೆ ಬಂದು ರೆಡ್ಡಿಗಳು ಕೊಟ್ಟ ಚಿನ್ನದ ಕತ್ತಿ, ಕೋಟಿ ಕಾರು ಇಲ್ಲ ತೆಗೆದುಕೊಂಡ ಹೋದ ಮೇಲೆ ಪಾಪ ಯಾವ ರೀತಿ ಅವರು ಬುದ್ದಿ ಹೇಳಿಯಾರು ? ಅಥವಾ ಅವರು ಹೇಳ ಬೇಕಾದ ಬುದ್ದಿಯನ್ನು ಈಗಾಗಲೇ ಹೇಳಿದ್ದು ಅದರಿಂದಾಗಿಯೇ ಲೋಕಾಯುಕ್ತ ನೇಮಕಾತಿ ಪರ್ವ ಈ ರೀತಿಯಾಗಿ ಮುಂದುವರಿಯುತ್ತಲೇ ಇರಬಹುದು. ಇರಲಿ, ಅದು ಪ್ರತ್ಯೇಕ ವಿಷಯ. ಮತ್ತೊಂದು ನೇಮಕಾತಿ ವಿಷಯ ನೋಡೋಣ.

ನ್ಯಾ. ಚಂದ್ರ ಶೇಖರಯ್ಯರವರ ನೇಮಕಾತಿ ರದ್ದು

ಸದಾನಂದಗೌಡರ ನೇತೃತ್ವದ ಬಿಜೆಪಿ ಸರ್ಕಾರದಿಂದ ರಾಜ್ಯದ ಉಪಲೋಕಾಯುಕ್ತರಾಗಿ ನೇಮಕಗೊಂಡಿದ್ದ ನ್ಯಾ. ಚಂದ್ರಶೇಖರಯ್ಯ ಅವರ ನೇಮಕವನ್ನು ರದ್ದು ಮಾಡಿ ರಾಜ್ಯ ಹೈ ಕೋರ್ಟ್‌ನ ವಿಭಾಗೀಯ ಪೀಠ ಏಪ್ರಿಲ್ 3 ರಂದು ತೀರ್ಪು ನೀಡಿದೆ.

ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರ ನೇಮಕಾತಿ ವಿಷಯದಲ್ಲಿ ರಾಜ್ಯದ ಮುಖ್ಯ ನ್ಯಾಯಮೂರ್ತಿಗಳ ಸಲಹೆ ಪಾಲಿಸುವುದು ಕಾನೂನು ಪ್ರಕಾರ ಕಡ್ಡಾಯವಾಗಿದ್ದು, ಚಂದ್ರಶೇಖರಯ್ಯನವರ ನೇಮಕಾತಿ ಸಂದರ್ಭದಲ್ಲಿ ಈ ನಿಯಮ ಪಾಲಿಸಿಲ್ಲ. ಮುಖ್ಯ ನ್ಯಾಯಮೂರ್ತಿಗಳು ಉಪಲೋಕಾಯುಕ್ತ ಹುದ್ದೆಗೆ ನ್ಯಾ. ರಂಗವಿಠಲಾಚಾರ್ ಅವರ ಹೆಸರನ್ನು ಶಿಫಾರಸ್ಸು ಮಾಡಿದ್ದರು. ಆದರೆ ಆ ಹೆಸರನ್ನು ಉಳಿದ ಶಿಫಾರಸ್ಸುದಾರರಿಗೆ ಕಳುಹಿಸಿಯೇ ಇಲ್ಲ. ಮತ್ತು ಇತರರು ಸಲಹೆ ಮಾಡಿರುವ ಹೆಸರುಗಳನ್ನು ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೂ ತಂದಿಲ್ಲ. ಜೊತೆಗೆ ಮು.ನ್ಯಾ.ಗಳ ಸಲಹೆಯನ್ನು ಪರಿಗಣಿಸಲಾಗುತ್ತಿಲ್ಲ ಎಂಬ ವಿಷಯವನ್ನು ಅವರ ಗಮನಕ್ಕೆ ತಂದಿಲ್ಲ ಎಂದಿರುವ ಪೀಠ ಈ ನೇಮಕವು ಕಾನೂನು ಬಾಹಿರ, ಅಸಂವಿಧಾನಿಕ ಎಂದು ವ್ಯಾಖ್ಯಾನಿಸಿ ನೇಮಕಾತಿ ರದ್ದುಗೊಳಿಸಿದೆ.

ಹಿಂದಿನ ಮುಖ್ಯಮಂತ್ರಿಗಳ ಅವಧಿಯಲ್ಲಿ ಲೋಕಾಯುಕ್ತರ ನೇಮಕದ ವಿಷಯದಲ್ಲಿ ಇಂಥದ್ದೇ ತಪ್ಪು ಮಾಡಿ, ಮುಂದೆ ಇಂತಹ ತಪ್ಪು ಮಾಡುವುದಿಲ್ಲ ಎಂದು ಕ್ಷಮೆ ಕೋರಿ ಪತ್ರ ಬರೆದಿರುವ ಬಗೆಗೆ ಪ್ರಸ್ತಾಪಿಸಿರುವ ನ್ಯಾಯ ಪೀಠ ಕಾನೂನಿನ ಬಗೆಗೆ ಸರ್ಕಾರಕ್ಕೆ ಗೊತ್ತಿದ್ದೂ ಕೂಡ ಮತ್ತೆ ಅದೇ ತಪ್ಪು ಮಾಡಲಾಗಿದೆ ಎಂದು ತೀಕ್ಷ್ಣವಾಗಿ ಟೀಕಿಸಿದೆ.

ಅವರೇ ಅವರೇ

ಇಲ್ಲಿ ಹಿಂದಿನ ಮುಖ್ಯಮಂತ್ರಿ ಎಂದರೆ ಅದು ಡಾ. ಬಿ.ಎಸ್. ಯಡಿಯೂರಪ್ಪನವರೇ, ಆ ಬಗ್ಗೆ

ಕುರ್ಚಿ ತಕರಾರಿನ ನಂತರ ಈಗ ಬರ ನಿರ್ವಹಣೆ ತಕರಾರು

ಬಿಜೆಪಿಯವರೇ ವಿರೋಧ ಪಕ್ಷ– ಆಡಳಿತ ಪಕ್ಷ ಎರಡೂ ಆಗುವುದು ಸಾಧ್ಯವಿಲ್ಲ.


ಬಹತೇಕ ಬರಪೀಡಿತರಿಗೆ ನೀರಿಲ್ಲ, ನೆರಳಿಲ್ಲ..... ಅರ್ಧಕ್ಕಿಂತ ಹೆಚ್ಚು ಪ್ರವಾಹ ಸಂತ್ರಸ್ತರಿಗೆ..... ಇನ್ನೂ ಮನೆ ಸಿಕ್ಕಿಲ್ಲ

ರಾಜ್ಯದ ಮೂರನೇ ಎರಡರಷ್ಟು ಭಾಗದಲ್ಲಿ ಗಂಭೀರ ಬರ ತನ್ನ ಕ್ರೂರ ಪ್ರತಾಪವನ್ನು ಮೆರೆಯುತ್ತಿರುವಾಗ ಜನತೆ ತಮಗೆ ತಮ್ಮ ದನ ಕರುಗಳಿಗೆ ಕುಡಿಯಲು ನೀರು, ಮೇವು, ನೆರಳೂ ಸಿಗದೇ ಪರಿತಪಿಸುತ್ತಿರುವಾಗ ರಾಜ್ಯ ಸರ್ಕಾರವು ಬರೀ ಬಾಯುಪಚಾರದ ಮಾತನ್ನಾಡುತ್ತಾ ತೋರಿಕೆಯ ಕೆಲವು ಸಾಂಕೇತಿಕ ಎನ್ನುವಂತಹ ಕ್ರಮ ಕೈಗೊಳ್ಳುತ್ತಾ, ಕೇಂದ್ರ ಸರ್ಕಾರದ ಕಡೆ ಕೈ ತೋರುತ್ತಾ ಕಾಲ ಹರಣ ಮಾಡುತ್ತಿದೆ. ಮಾಜಿ ಮುಖ್ಯಮಂತ್ರಿ ಡಾ. ಬಿ.ಎಸ್. ಯಡಿಯೂರಪ್ಪನವರು ತಮ್ಮ ಹೋಮ, ಹವನ, ಪೂಜೆ, ತೀರ್ಥ ಯಾತ್ರೆ, ರೆಸಾರ್ಟ್ ಯಾತ್ರೆ, ದೆಹಲಿ ಯಾತ್ರೆ, ಬಂಡಾಯ ಚಟುವಟಿಕೆಗಳ ನಡುವಿನಲ್ಲೆ ಸ್ವಲ್ಪ ಬಿಡುವು ಮಾಡಿಕೊಂಡು ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಅಲ್ಲಲ್ಲಿ ಭೇಟಿ ನೀಡಿ, ಬಿಜೆಪಿ ಸರ್ಕಾರದ್ದೇ ಮುಖ್ಯ ಮಂತ್ರಿಯಾದ ಸದಾನಂದಗೌಡ, ಸರ್ಕಾರದ ಮುಖ್ಯಕಾರ್ಯದರ್ಶಿ ಮುಂತಾದವರ ವಿರುದ್ಧ ಗುಟುರು ಹಾಕುತ್ತಿದ್ದಾರೆ.

ನಿಜಕ್ಕೂ ಇದರ ಅರ್ಥ ಏನು ? ಆಡಳಿತ ಪಕ್ಷವೂ ತಾವೇ, ಆಗಿ ವಿರೋಧ ಪಕ್ಷವು ತಾವೇ ಆಗಿ ತೋರಿಸಿಕೊಳ್ಳುವ ರಾಜ್ಯ ಬಿಜೆಪಿ ಮುಖಂಡರ, ಅಧಿಕಾರಸ್ಥರ ಪಾತ್ರ ನಿರ್ವಹಣೆಗೆ ಏನನ್ನುವುದು??

ಭಿನ್ನಮತೀಯ ಚಟುವಟಿಕೆ, ಗುಂಪುಗಾರಿಕೆ, ಕುರ್ಚಿ ತಕರಾರಿನ ಭಾಗವಾಗಿ ಸನ್ಮಾನ ಸಮಾರಂಭ, ಭೋಜನ ಕೂಟದ ರಾಜಕೀಯವನ್ನು ಯಡಿಯೂರಪ್ಪನವರು ತಾರಕ್ಕೇರಿಸಿದಾಗ ಸದಾನಂದಗೌಡರು ರಾಜ್ಯದ ಬರ ಪರಿಸ್ಥಿತಿಯ ನಡುವೆ ನನಗೆ ಸನ್ಮಾನ ಇತ್ಯಾದಿ ಬೇಡ ಎಂದು ಪರೋಕ್ಷವಾಗಿ ಯಡಿಯೂರಪ್ಪನವರನ್ನು ಕುಟುಕಿದರು. ಇದಾದ ಮೇಲೆ ಯಡಿಯೂರಪ್ಪನವರಿಗೆ ರಾಜ್ಯದಲ್ಲಿ ಬರ ಇದೆ ಎಂಬುದರ ನೆನಪಾಯಿತು. ಆಮೇಲೆ ಈಗ ಕೆಲವು ದಿನ ಕುರ್ಚಿ ತಕರಾರಿನ ಬದಲು, ಬರದ ತಕರಾರು.

ಸಾದಾನಂದಗೌಡ, ಯಡಿಯೂರಪ್ಪನವರ ಈ ಜಂಗೀ ಕುಸ್ತಿ ನೋಡುತ್ತಾ ಕುಳಿತರೆ ಬರಪೀಡಿತ ಜನತೆಯ ಹೊಟ್ಟೆ ತುಂಬುವುದಿಲ್ಲ. ದನಕರುಗಳಿಗೆ ಗೋಶಾಲೆ, ಮೇವು, ನೀರು. ಜನರಿಗೆ ಉದ್ಯೋಗ ಖಾತ್ರಿ ಯೋಜನೆ, ಕಾಲಬದ್ಧ ಕೂಲಿ ಪಾವತಿ, ಆಹಾರ ಧಾನ್ಯ



ಪೂರೈಕೆ, ಬೆಳೆ ಹಾನಿಗೆ ಪರಿಹಾರ, ಮುಂತಾದ ಕೆಲಸಗಳು ಸಮರೋಪಾದಿಯಾಗಿ, ಭ್ರಷ್ಟಾಚಾರವಿಲ್ಲದೇ ಜಾರಿಯಾಗಬೇಕು. ಶಾಸಕರು, ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು ಎಲ್ಲರೂ, ಅಧಿಕಾರಿಗಳು ಎಲ್ಲರೂ ಟೊಂಕ ಕಟ್ಟಿ ನಿಲ್ಲಬೇಕು. ತಾವಾಗಿಯೇ ಎಲ್ಲರೂ ಹೀಗೆ ತೊಡಗುವುದಿಲ್ಲ. ಕೇಂದ್ರ ಸರ್ಕಾರದ ಮೇಲೂ ಒತ್ತಡ ತರಬೇಕು. ಸರ್ಕಾರ ಅಂತಹ ಮುತುವರ್ಜಿ ವಹಿಸಬೇಕು. ಆದರೆ ಬಿಜೆಪಿ ಸರ್ಕಾರದ ಕಾರ್ಯದಕ್ಷತೆ, ನೋಡಿದರೆ ಈ ವರ್ಷಕ್ಕಲ್ಲ ಮುಂದಿನ ವರ್ಷಕ್ಕೂ ಬರ ಪರಿಹಾರ ಜನರಿಗೆ ತಲುಪುವ ಲಕ್ಷಣ ಕಾಣುತ್ತಿಲ್ಲ.

ಬೋರಲು ಬಿದ್ದರೂ ಮೀಸೆ ಇನ್ನೂ ಮಣ್ಣಾಗಿಲ್ಲ ಎಂಬ ಪ್ರದರ್ಶನ

2ಜಿ ತೀರ್ಪಿನ ಮೇಲೆ ರಾಷ್ಟ್ರಪತಿಗಳ ಹೆಸರಲ್ಲಿ ಪರಾಮರ್ಶೆ ಅರ್ಜಿ

ಸುಪ್ರಿಂ ಕೋರ್ಟ್ 2ಜಿ ಹಗರಣದಲ್ಲಿದ್ದ 122 ಟೆಲಿಕಾಂ ಪರವಾನಿಗೆಗಳನ್ನು ರದ್ದು ಮಾಡಿದ ನಂತರ ಈ ತೀರ್ಪನ್ನು ಕುರಿತಂತೆ ನ್ಯಾಯಾಲಯದ ಸಲಹೆ ಕೇಳುವ ಅರ್ಜಿಯನ್ನು ರಾಷ್ಟ್ರಪತಿಗಳ ಮೂಲಕ ಸಲ್ಲಿಸಲು ನಿರ್ಧರಿಸಿದೆ ಎಂದು ಯುಪಿಎ–2 ಸರಕಾರದ ಹಾಲಿ ದೂರಸಂಪರ್ಕ ಮಂತ್ರಿಗಳು ಹೇಳಿದ್ದಾರೆ, ಆದರೆ ವಿವರಗಳನ್ನು ಅವರು ಕೊಟ್ಟಿಲ್ಲ. ಕನಿಷ್ಟ ಏಳು ಪ್ರಶ್ನೆಗಳ ಮೇಲೆ ನ್ಯಾಯಾಲಯದ ಅಭಿಪ್ರಾಯವನ್ನು ಈ ರಾಷ್ಟ್ರಾಧ್ಯಕ್ಷೀಯ ಪರಾಮರ್ಶೆ ಅರ್ಜಿಯಲ್ಲಿ ಕೇಳಲಾಗಿದೆ ಎಂದು ತಿಳಿದು ಬಂದಿದೆ. ಈ ಅರ್ಜಿ ಬಹಳಷ್ಟು ಗಂಭೀರವಾದ ತಪ್ಪು ಮಾಹಿತಿಗಳಿಂದ, ತಪ್ಪು ಭಾವನೆಗಳಿಂದ ಕೂಡಿದ್ದು ರಾಷ್ಟ್ರಪತಿಗಳಿಗೆ ಮತ್ತು ಸ್ವತಃ ಸರಕಾರಕ್ಕೂ ಮುಜುಗರದ ಮೂಲವಾಗುವ ಸಾಧ್ಯತೆಯಿದೆ ಎಂದು ಪರಿಣಿತರು ಭೀತಿ ವ್ಯಕ್ತಪಡಿಸಿದ್ದಾರೆ.

ಈ ಅರ್ಜಿಯಲ್ಲಿ 2008ರ ಮೊದಲು 'ಮೊದಲು ಬಂದವರಿಗೆ ಮೊದಲ ಸೇವೆ' ಆಧಾರದಲ್ಲಿ ಕೊಟ್ಟಿರುವ ಪರವಾನಿಗೆಗಳಿಗೆ ಸಂಬಂಧಪಟ್ಟಂತೆ ಮತ್ತು ಎಲ್ಲಾ ವಲಯಗಳಲ್ಲೂ ನೈಸರ್ಗಿಕ ಸಂಪನ್ಮೂಲಗಳ ನೀಡಿಕೆಯ ವಿಧಾನದ ಬಗ್ಗೆ ಸ್ಪಷ್ಟೀಕರಣ ಕೇಳಲಾಗಿದೆ ಎಂದು ತಿಳಿದು ಬಂದಿದೆ. 'ಸಾರ್ವಜನಿಕ ಆಸ್ತಿಗಳನ್ನು ಬಳಸಿಕೊಳ್ಳುವ ಕಾಂಟ್ರಾಕ್ಟುಗಳನ್ನು ಕೊಡುವ ಅಥವ ಪರವಾನಿಗೆಗಳನ್ನು ನೀಡುವ ಅಥವ ಅನುಮತಿಯನ್ನು ನೀಡುವ ವಿಷಯದಲ್ಲಿ ಮೊದಲು ಬಂದವರಿಗೆ ಮೊದಲು ಸೇವೆ ಎಂಬ ನೀತಿಯಲ್ಲಿ ಅಪಾಯಗಳು ಅಡಕವಾಗಿವೆ' ಎಂದು ಸುಪ್ರಿಂ ಕೋರ್ಟ್ ತೀರ್ಪು 122 ಪರವಾನಿಗೆಗಳನ್ನು ರದ್ದು ಮಾಡುತ್ತ ಹೇಳಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.


ಅಲ್ಲದೆ ಟೆಲಿನೋರ್ ಮತ್ತು ಸಿಸ್ಟೆಮಾದಂತಹ ವಿದೇಶಿ ಕಂಪನಿಗಳು 2ಜಿ ತರಂಗಾಂತರ ಹಂಚಿಕೆಯಲ್ಲಿ ನೇರವಾಗಿ ಭಾಗವಹಿಸದೆ, ಇಂತಹ ಪರವಾನಿಗೆ ಪಡೆದ ಕಂಪನಿಗಳ ಶೇರುಗಳನ್ನು ಖರೀದಿಸಿ ಭಾರೀ ಹೂಡಿಕೆ ಮಾಡಿದ್ದು ಇವರ ಈ ಹೂಡಿಕೆಗಳ ಗತಿಯೇನು ಎಂಬ ಬಗ್ಗೆಯೂ ಸ್ಪಷ್ಟೀಕರಣ ಕೇಳಲಾಗುವುದಂತೆ. ಈ ಕಂಪನಿಗಳ ಮೂಲದೇಶಗಳ ಸರಕಾರಗಳು ಅವರ ಹೂಡಿಕೆಗಳಿಗೆ ರಕ್ಷಣೆ ನೀಡುವಂತೆ ಯುಪಿಎ–2 ಸರಕಾರದ ಮೇಲೆ ಒತ್ತಡ ಹಾಕುತ್ತಿವೆ.

ಈ ಸಲಹೆ ಅರ್ಜಿಯ ಮೂಲಕ 2ಜಿ ತರಂಗಾಂತರ ಹಂಚಿಕೆಯ ಮೊದಲು ಎನ್‌ಡಿಎ ನೀಡಿರುವ 26 ಪರವಾನಿಗೆಗಳು ಮತ್ತು ಮುರಸೋಳಿ ಮಾರನ್ ಮಂತ್ರಿಯಾಗಿದ್ದಾಗ ಯುಪಿಎ ಸರಕಾರ ನೀಡಿದ 25 ಪರವಾನಿಗೆಗಳು ಈಗ ಈ 'ಪರಾಮರ್ಶೆ'ಯ ಅಡಿಗೆ ಬರುತ್ತವೆ. ಅಲ್ಲದೆ ಬಿಎಸ್‌ಎನ್‌ಎಲ್ ಗೆ ನೀಡಿದ 20 ಮತ್ತು ಎಂಟಿಎನ್‌ಎಲ್ ನ 2 ಪರವಾನಿಗೆಗಳೂ ಇದರ ಅಡಿಗೆ ಬರುತ್ತವೆ. ಒಟ್ಟಾರೆಯಾಗಿ, ಇದುವರೆಗೆ ನೀಡಿರುವ 281 ಮೊಬೈಲ್ ದೂರವಾಣಿ ಲೈಸೆನ್ಸ್‌ಗಳಲ್ಲಿ 122 ಸುಪ್ರಿಂ ಕೋರ್ಟ್ ತೀರ್ಪಿನಿಂದಾಗಿ ರದ್ದಾದರೆ, ಈಗ ಯುಪಿಎ ಸರಕಾರದ ಅರ್ಜಿಯಿಂದಾಗಿ ಇನ್ನೂ 102 ಲೈಸೆನ್ಸ್ ಗಳು 'ತ್ರಿಶಂಕು' ಸ್ಥಿತಿಗೆ ಬಂದಂತಾಗಿದೆ. ಹೀಗೆ ಸರಕಾರದ ಈ ಅರ್ಜಿ ದೂರಸಂಪರ್ಕ ವಲಯವನ್ನು ಆಳವಾದ ಅಸ್ಥಿರತೆಗೆ ತಳ್ಳಿದೆ

ಪುಟ 15ಕ್ಕೆ

ನೋಡು, ಸಮಸ್ಯೆ ಬಗೆ ಹರಿಸಲು ನಾವು ಹೇಗೆ ಸುತ್ತುತ್ತೇವೆ......





ವೇದರಾಜ ಎನ್.ಕೆ.

ದಿಲ್ಲಿ ನಗರಸಭಾ ಚುನಾವಣೆ 116 ಕಾಂಗ್ರೆಸ್ ಕೋಟ್ಯಾಧಿಪತಿ ಅಭ್ಯರ್ಥಿಗಳು

ದಿಲ್ಲಿಯಲ್ಲಿ ನಡೆಯುತ್ತಿರುವ ನಗರಸಭೆ ಚುನಾವಣೆಗಳ 2,400 ಅಭ್ಯರ್ಥಿಗಳಲ್ಲಿ 1,485 ಅಭ್ಯರ್ಥಿಗಳು ಸಲ್ಲಿಸಿದ ಅಫಿಡವಿಟ್‌ಗಳಿಂದ ಸಂಗ್ರಹಿಸಿದ ಮಾಹಿತಿ ಹೀಗಿದೆ:

- 1,485 ಅಭ್ಯರ್ಥಿಗಳಲ್ಲಿ 342, ಅಂದರೆ 23ಶೇ. ಕೋಟ್ಯಾಧಿಪತಿಗಳು.
- 207 ಕಾಂಗ್ರೆಸ್ ಅಭ್ಯರ್ಥಿಗಳಲ್ಲಿ 116 ಮಂದಿ (56ಶೇ.) ಕೋಟ್ಯಾಧಿಪತಿಗಳು
- 211 ಬಿಜೆಪಿ ಅಭ್ಯರ್ಥಿಗಳಲ್ಲಿ 103(ಅಂದರೆ 49ಶೇ.) ಕೋಟ್ಯಾಧಿಪತಿಗಳು.
- ಕಾಂಗ್ರೆಸ್ ಅಭ್ಯಥಿಗಳ ಸರಾಸರಿ ಆಸ್ತಿ 2.71 ಕೋಟಿ ರೂ.ಗಳಾದರೆ, ಬಿಜೆಪಿ ಅಭ್ಯರ್ಥಿಗಳದ್ದು 2.81 ಕೋಟಿ ರೂ. ಅತೀ ಹೆಚ್ಚು ಆಸ್ತಿ ಹೊಂದಿರುವ ಅಭ್ಯರ್ಥಿಗಳಲ್ಲಿ ಮೊದಲೆರಡು ಸ್ಥಾನಗಳು ಬಿಜೆಪಿ ಅಭ್ಯರ್ಥಿಗಳದ್ದು(112 ಕೋಟಿ ಮತ್ತು 50 ಕೋಟಿ), ಮೂರನೇ ಸ್ಥಾನ ಒಬ್ಬ ಪಕ್ಷೇತರ ಅಭ್ಯರ್ಥಿಯದ್ದು(40.81 ಕೋಟಿ).
- ಉಳಿದ ಅಭ್ಯರ್ಥಿಗಳಲ್ಲಿ ಬಿಎಸ್ ಪಿ ಸದಸ್ಯರ ಸರಾಸರಿ ಆಸ್ತಿ 78 ಲಕ್ಷ ರೂ.; ನಂತರದ ಸ್ಥಾನ ಸಮಾಜವಾದಿ ಪಕ್ಷದ್ದು(64 ಲಕ್ಷ ರೂ.) ಮತ್ತು ಎನ್‌ಸಿಪಿ ಯದ್ದು(47 ಲಕ್ಷ)

ತಡವರಿಸುತ್ತಿದೆ ಭಾರತದ ಆರ್ಥಿಕ ಬೆಳವಣಿಗೆ

ಅಗೋ ನೋಡಲ್ಲಿ, ಭಾರತ ಎಷ್ಟು ವೇಗವಾಗಿ ಸಾಗಿದೆ, ಅದರ ಜಿಡಿಪಿಯ ಬೆಳವಣಿಗೆಯ ದರ ಏರುತ್ತಲೇ ಇದೆ, 9ಶೇ.ದಾಟುತ್ತಿದೆ ಎಂದು ಇದುವರೆಗೆ ನವ–ಉದಾರವಾದಿಗಳು ಸಾರುತ್ತಿದ್ದರು. ಜಾಗತಿಕ ಕುಸಿತದ ನಡುವೆಯೂ ಅದರ ಬೆಳವಣಿಗೆ ನಿಂತಿಲ್ಲ ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದರು. ಆದರೆ ಈಗ ಆ 'ಯುಗ' ಮುಗಿದಿದೆ, ಅಂತಹ ಬೆಳವಣಿಗೆ ನಿಂತಿದೆಯಷ್ಟೇ ಅಲ್ಲ, ಅದು ಹಿಂದಕ್ಕೆ ಸರಿಯುತ್ತಿದೆ ಎನ್ನುತ್ತಾರೆ ಪ್ರಖ್ಯಾತ ಆರ್ಥಿಕ ತಜ್ಞ ಡಾ.ಸಿ.ಪಿ.ಚಂದ್ರಶೇಖರ್.

ಈಗಷ್ಟೇ ಕೊನೆಗೊಂಡಿರುವ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ದರ 6.9ಶೇ. ಮುಂದಿನ ವರ್ಷವೂ ಇದಕ್ಕಿಂತ ಹೆಚ್ಚಿರಬಹುದು ಎಂದು ಹೇಳುವ ಧೈರ್ಯ ಅತ್ಯಂತ ಆಶಾವಾದಿ ಸರಕಾರಕ್ಕೂ ಇಲ್ಲ. ಆರ್ಥಿಕದಲ್ಲಿ ಹೂಡಿಕೆ ಉನ್ನತ ಮಟ್ಟಕ್ಕೆ ಹೋಗಬೇಕಾದರೆ ಅದಕ್ಕೆ ಸೂಕ್ತ ಲಾಭದ ರೂಪದಲ್ಲಿ ಉತ್ತೇಜನ ಬೇಕಾಗುತ್ತದೆ. ಹೀಗಾಗಬೇಕಾದರೆ ಆಂತರಿಕ ಮಾರುಕಟ್ಟೆ ವಿಸ್ತಾರಗೊಳ್ಳಬೇಕು, ಇಲ್ಲವೇ ವಿದೇಶಗಳಿಗೆ ರಫ್ತು ಪ್ರಮಾಣ ಹೆಚ್ಚಬೇಕು.

ಭಾರತದ ಸಂದರ್ಭದಲ್ಲಿ ನವ–ಉದಾರವಾದಿ ನೀತಿಗಳು ಇಲ್ಲಿನ ಉತ್ಪಾದಕರಿಗೆ ವಿದೇಶಗಳಲ್ಲಿ ಮಾರುಕಟ್ಟೆ ಒದಗಿಸುತ್ತವೆ ಎಂದು ಹೇಳಿಕೊಂಡರೂ ಹಾಗಾಗಲಿಲ್ಲ. ಬದಲಿಗೆ ವಿಸ್ತಾರಗೊಳ್ಳುತ್ತಿದ್ದ ಆಂತರಿಕ ಮಾರುಕಟ್ಟೆ ಬೆಳವಣಿಗೆಗೆ ಉತ್ತೇಜನೆಗಳನ್ನು ಕೊಟ್ಟದ್ದು ನವ–ಉದಾರವಾದಿ ನೀತಿಗಳು ಸೃಷ್ಟಿಸಿದ ಹೊಸ ಮಧ್ಯಮ ವರ್ಗಗಳು ಮತ್ತು ಅವುಗಳಿಗೆ ಕೊಡಮಾಡಿದ ಸಾಲಸೌಲಭ್ಯಗಳು ಹಾಗೂ ಅಸಮಾನ ಬೆಳವಣಿಗೆಯ ಲಾಭ ಪಡೆದ ಕಾರ್ಪೊರೇಟ್ ವಲಯಗಳ ಶ್ರೀಮಂತರು. ಆದರೆ ಇದು ಸದಾಕಾಲ ಉಳಿಯುವ, ಬೆಳೆಯುವ ಮಾರುಕಟ್ಟೆಯಲ್ಲ. ಬಹುಪಾಲು ಜನಗಳ ಕೊಳ್ಳುವ ಶಕ್ತಿಯನ್ನು ಮೊಟಕು ಮಾಡುವ ನೀತಿಗಳಿಂದಾಗಿ ಈಗ ಈ ಆಂತರಿಕ ಮಾರುಕಟ್ಟೆ ಕಿರಿದಾಗುತ್ತಿದೆ, ಹೂಡಿಕೆಗಳು ಇಳಿಯುತ್ತಿವೆ, ಜತೆಗೆ ಬೆಳವಣಿಗೆ ದರಗಳೂ – ಎನ್ನುತ್ತಾರೆ ಈ ಆರ್ಥಿಕ ತಜ್ಞರು.

ಏಶ್ಯಾಪ್ರದೇಶದಲ್ಲಿ ಈಗ ಚಾಲ್ತಿ ಖಾತೆ ಕೊರತೆ ಹೊಂದಿರುವ ಏಕೈಕ ದೇಶವೆಂದರೆ ಭಾರತ ಎಂದು ಇನ್ನೊಂದು ವರದಿ ಹೇಳುತ್ತಿದೆ. ಇದು ಭಾರತವನ್ನು 1991ರ ಮಹಾ ಬಿಕ್ಕಟ್ಟಿನಿಂದ ತಮ್ಮ ನೀತಿಗಳು ಪಾರು ಮಾಡಿದವು ಎನ್ನುತ್ತಿದ್ದವರ ಬಾಯಿ ಕಟ್ಟುವಂತೆ ಮಾಡುತ್ತಿದೆ. ವಾಸ್ತವವಾಗಿ ಭಾರತ 1991 ರಲ್ಲಿದ್ದ ಗಂಭೀರ ಪರಿಸ್ಥಿತಿಯನ್ನು ಮತ್ತೆ ತಲುಪುತ್ತಿದೆಯಂತೆ. ಚಾಲ್ತಿ ಖಾತೆಯ ಕೊರತೆ– ಅಂದರೆ, ವಿದೇಶ ವ್ಯಾಪಾರ ಮತ್ತು ಸೇವೆಗಳ ನಿವ್ವಳ ಪ್ರಮಾಣ– ಜಿಡಿಪಿಯ 3 ಶೇ.ವನ್ನು ದಾಟಿದರೆ ಅದು ಎಚ್ಚರಿಕೆ ಗಂಟೆ ಎನ್ನಲಾಗುತ್ತದೆ. ಆದರೆ ಭಾರತದ್ದು ಈಗ 4 ಶೇ. ದಾಟಿದೆ.

2005–06ರಿಂದ 2011–12ರ ನಡುವೆ ಬಜೆಟುಗಳಲ್ಲಿ ವಿವಿಧ ಬಾಬ್ತುಗಳಲ್ಲಿ ಬಿಟ್ಟುಕೊಟ್ಟ ಒಟ್ಟು ಆದಾಯ(ಕೋಟಿ ರೂ.ಗಳಲ್ಲಿ)

ವರ್ಷ	ಕಾರ್ಪೊರೇಟ್ ಆದಾಯ ತೆರಿಗೆ	ಅಬಕಾರಿ ಸುಂಕ	ಸೀಮಾಸುಂಕ	ಒಟ್ಟು
2005–06	34618	66760	127730	229108
2006–07	50075	99690	123682	273447
2007–08	62199	87468	153593	303260
2008–09	66901	128293	225752	420946
2009–10	72881	169121	195288	437290
2010–11	57912	192227	172740	422879
2011–12	51292	212167	223653	487112
2005–06ರಿಂದ 2011–12ರ ನಡುವೆ ಬಿಟ್ಟುಕೊಟ್ಟ ಒಟ್ಟು ಆದಾಯ	**395878**	**955726**	**1222438**	**2574042**
2005–06ಕ್ಕೆ ಹೋಲಿಸಿದರೆ 2011–12ರ ಏರಿಕೆ %	**48.17**	**217.81**	**75.1**	**112.61**

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಸ್ಪೃಶ್ಯತೆಯ ವಿರುದ್ಧದ ಹೋರಾಟದಲ್ಲಿ ಕಮ್ಯುನಿಸ್ಟರು

ಪುಟ 8 ರಿಂದ

ಸಂಪರ್ಕಕ್ಕೆ ಬಂದು ಮಾರ್ಕ್ಸ್‌ವಾದದ ಕಡೆ ಆಕರ್ಷಿತರಾದರು.

ಕಮ್ಯೂನಿಸ್ಟರಾದ ಮೇಲೂ ಅಂಬೇಡ್ಕರರು ನಿಧನರಾಗುವವರೆಗೂ ಅವರ ನೆಚ್ಚಿನ ಸಹವರ್ತಿಗಳಾಗಿ ಮುಂದುವರೆದರು. ಅವರು ಮಹಾರಾಷ್ಟ್ರದ ಕಮ್ಯೂನಿಸ್ಟ್ ಚಳುವಳಿಯ ನೇತಾರರಲ್ಲೊಬ್ಬರಾದರು. ಪಕ್ಷದ ಮರಾಠಿ ಮುಖವಾಣಿ 'ಜೀವನ್ ಮಾರ್ಗ್‌ನ್'ನ ಸ್ಥಾಪಕ ಸಂಪಾದಕರಾದರು. ಬಾಂಬೆಯ ಗಿರಣಿ ಕಾರ್ಮಿಕರ ನಡುವೆ, ಕೊಂಕಣದ ರೈತರ ನಡುವೆ ಜಾತಿ ಪದ್ಧತಿಯ ಹಾಗೂ ಅಸ್ಪೃಶ್ಯತೆಯ ವಿರುದ್ಧ ಪ್ರಚಾರ ಮಾಡಿದರು. ಅವರ ಪುತ್ರನೂ ಕಮ್ಯೂನಿಸ್ಟ್ ಚಳುವಳಿಯ ಒಬ್ಬ ನಾಯಕನಾಗಿ ಸಿಪಿಐ(ಎಂ) ಪಕ್ಷದ ಮಹಾರಾಷ್ಟ್ರ ರಾಜ್ಯ ಸಮಿತಿ ಸದಸ್ಯರಾಗಿದ್ದರು.

ಮಹಾಡ್ ಪ್ರದೇಶದ ದಲಿತ ಚಳುವಳಿ ಇಡೀ ದೇಶದ ದಲಿತ ಚಳುವಳಿಯ ನಾಯಕ ಪಾತ್ರವನ್ನು ವಹಿಸಿದ ಚಳುವಳಿ. ಇಂತಹ ಚಳುವಳಿಯ ಮುಖ್ಯ ನಾಯಕರಾದ ಮೋರೆಯವರ ಹೆಸರು ಅವರು ಮುಂದೆ ಕಮ್ಯೂನಿಸ್ಟ್‌ರಾದರೆಂದೇ ದಲಿತ ಚಳುವಳಿಯ ಇತಿಹಾಸದಿಂದ ಕೈ ಬಿಡಲಾಯಿತು. ಹೀಗೆ ಒಂದು ಕಡೆ ಮೋರೆ ಹಾಗೂ ಕಮ್ಯೂನಿಸ್ಟ್ ಚಳುವಳಿಗೆ ಹಾಗೂ ಮತ್ತೊಂದು ಕಡೆ ದಲಿತ ಚಳುವಳಿಗೂ ಅನ್ಯಾಯವೆಸಗಲಾಯಿತು. ಈ ಮನೋಭಾವ ಮೋರೆಯವರ ಬಗ್ಗೆ ಮಾತ್ರವಲ್ಲ ದೇಶದ ಅನೇಕ ರಾಜ್ಯಗಳಲ್ಲಿ ಕಮ್ಯೂನಿಸ್ಟರು ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆಯ ವಿರುದ್ಧ ಹೂಡಿದ ಸಮರವನ್ನು ಮರೆ ಮಾಡುವುದರಲ್ಲಿ ಪಾತ್ರ ವಹಿಸಿದೆ.

ಕಮ್ಯುನಿಸ್ಟ್ ಚಳುವಳಿ ಮತ್ತು ಜಾತಿ ವ್ಯವಸ್ಥೆ:

ಜಾತಿ ಪದ್ಧತಿ, ಜಾತಿ ವ್ಯವಸ್ಥೆ ಎಂಬ ಮಾತುಗಳು ಬರುವಾಗೆಲ್ಲಾ ಅದೊಂದು ಸಾಮಾಜಿಕ ಅನಿಷ್ಟ, ಭಾರತಕ್ಕೆ ವಿಶಿಷ್ಟವಾಗಿರುವ ಸಾಮಾಜಿಕ ಪದ್ಧತಿ ಎಂದು ಅದನ್ನು ವರ್ಣಿಸಲಾಗುತ್ತದೆ. ಹಾಗೆಯೇ ಮಾರ್ಕ್ಸ್‌ವಾದಿಗಳು ಕೇವಲ ವರ್ಗ ವಿಭಜನೆ ಹಾಗೂ ವರ್ಗ ಸಂಘರ್ಷದ ಬಗ್ಗೆ ಮಾತನಾಡುತ್ತಾ ಜಾತಿ ಎಂಬ ವಾಸ್ತವವನ್ನು ಪರಿಗಣಿಸುವುದೇ ಇಲ್ಲ. ಆದುದರಿಂದ ಜಾತಿ ವ್ಯವಸ್ಥೆ ಆಧಾರಿತವಾದ ಭಾರತಕ್ಕೆ ಕಮ್ಯುನಿಸಂ ಅಥವಾ ಮಾರ್ಕ್ಸ್‌ವಾದ ಸೂಕ್ತವಲ್ಲ ಎಂಬ ವಾದಗಳನ್ನು ಸಮಾಜವಾದಿಗಳು ಹಾಗೂ ಇತರ ಕೆಲವು ಬುದ್ಧಿ ಜೀವಿಗಳು, ಸಮಾಜ ವಿಜ್ಞಾನಿಗಳು ಹೂಡುತ್ತಾ ಬಂದಿದ್ದಾರೆ.

ಆದರೆ ಅದೇ ಸಂದರ್ಭದಲ್ಲಿ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಬೆಳೆಯುತ್ತಾ ಬಂದಿದೆ, ಭಾರತದಲ್ಲಿ ಒಂದು ಗಣನೀಯ ರಾಜಕೀಯ ಶಕ್ತಿಯನ್ನು ಗಳಿಸಿದೆ ಮತ್ತು ಅದಕ್ಕೂ ಮಿಗಿಲಾದ ಪಾತ್ರವನ್ನು ನಿರ್ವಹಿಸುತ್ತಾ ದೇಶದ ಚರಿತ್ರೆಯ ಅನೇಕ ತಿರುವುಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ಪ. ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಹಾಗೂ ದೇಶದ ಕೆಲವು ಜಿಲ್ಲೆಗಳಲ್ಲಿ ನಿರಂತರ ಜನ ಬೆಂಬಲವನ್ನು ಪಡೆದಿದೆ. ಆಯಾ ಪ್ರದೇಶಗಳ ಸಾಮಾಜಿಕ ಆರ್ಥಿಕ ವಾಸ್ತವವನ್ನು–ಜಾತಿ ವ್ಯವಸ್ಥೆ, ಅಸ್ಪ್ರಶ್ಯತೆ ಒಡ್ಡಿದ ಸವಾಲನ್ನು ಎದುರಿಸದೆ ಈ ಜನ ಬೆಂಬಲ ಸಾಧ್ಯವೇ?

ಅಸ್ಪೃಶ್ಯತೆ ನಿರ್ಮೂಲನ ಚಳುವಳಿಯಲ್ಲಿ ಕಮ್ಯೂನಿಸ್ಟ್ ನಾಯಕರು

ಭಾರತದ ಮಾರ್ಕ್ಸ್‌ವಾದಿ ನಾಯಕರಲ್ಲಿ ನವರತ್ನಗಳೆಂದು ಪ್ರಸಿದ್ಧರಾದ 5–6 ದಶಕಗಳ ಕಾಲ ಪಾಲಿಟ್‌ಬ್ಯೂರೊ ಸದಸ್ಯರಾಗಿದ್ದ ಎ.ಕೆ.ಗೋಪಾಲನ್, ಇ.ಎಂ.ಎಸ್. ನಂಬೂದರಿಪಾದ್, ಪಿ.ಸುಂದರಯ್ಯ, ಪಿ.ರಾಮಮೂರ್ತಿ, ಬಿ.ಟಿ.ರಣದಿವೆ, ಜ್ಯೋತಿ ಬಸು, ಪ್ರಮೋದ್ ದಾಸ್ ಗುಪ್ತ, ಹರ್‌ಕಿಶನ್ ಸಿಂಗ್ ಸುರ್ಜಿತ್, ಎಂ.ಬಸವಪುನ್ನಯ್ಯ ಇವರೆಲ್ಲರೂ ಜಾತಿವ್ಯವಸ್ಥೆಯ ಹಾಗೂ ಅಸ್ಪ್ರಶ್ಯತೆಯ ವಿರುದ್ದ ವೈಯುಕ್ತಿಕವಾಗಿ ಸಿಡಿದೆದ್ದವರು ಮಾತ್ರವಲ್ಲ, ತಮ್ಮ ಪ್ರದೇಶದಲ್ಲಿ, ರಾಜ್ಯಗಳಲ್ಲಿ ದಲಿತರ ದೇವಸ್ಥಾನ ಪ್ರವೇಶ, ನೀರಿನ ಹಕ್ಕು, ಸಾಮೂಹಿಕ ಭೋಜನ, ಅಂತರ್ಜಾತಿ ವಿವಾಹ, ಪಾಠಶಾಲೆ, ಇಂತಹ ಅಸ್ಪೃಶ್ಯತಾ ವಿರೋಧಿ ಕಾರ್ಯಕ್ರಮಗಳಲ್ಲಿ ಹಾಗೂ ಅವರ ಸಂಘಟನೆ, ಹೋರಾಟ ಇವುಗಳಲ್ಲಿ ವ್ಯಾಪಕವಾಗಿ ತೊಡಗಿಕೊಂಡಿದವರೇ. ಹಾಗೆಯೇ ವಿವಿಧ ರಾಜ್ಯಗಳ ನಾಯಕರಾಗಿ, ರೈತ ಚಳುವಳಿಯ ನಾಯಕರಾಗಿ ಬೆಳೆದವರು ಕೂಡ ಅಸ್ಪೃಶ್ಯತಾ ವಿರೋಧಿ, ಜಾತಿ ವಿನಾಶಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡವರೇ ಆಗಿದ್ದಾರೆ. ಈ ಎಲ್ಲ ಹೋರಾಟ, ಕಾರ್ಯಕ್ರಮಗಳ ವಿವರಣೆಗೆ ಇಲ್ಲಿ ಸ್ಥಳಾವಕಾಶವಿಲ್ಲದಿರುವುದರಿಂದ ಕೆಲವು ಪ್ರಮುಖ ಚಳುವಳಿಗಳ ಉದಾಹರಣೆಯನ್ನು ಇಲ್ಲಿ ನೀಡಲಾಗಿದೆ.

ಗುರುವಾಯೂರು ದೇವಾಲಯ ಪ್ರವೇಶ ಚಳುವಳಿ : ಭಾರತದ ಲೋಕಸಭೆಯ ಮೊಟ್ಟ ಮೊದಲ ಹಾಗೂ ಧೀರ್ಘ ಕಾಲ ವಿರೋಧ ಪಕ್ಷದ ನಾಯಕರಾಗಿದ್ದ ಎ.ಕೆ.ಗೋಪಾಲನ್ ರವರು ಭೂ ಹೋರಾಟಗಳ ಅಗ್ರಗಣ್ಯ ನಾಯಕರಾಗಿ ಪ್ರಸಿದ್ಧ ಹೆಸರು. ಅವರು ತಮ್ಮ ಸಾರ್ವಜನಿಕ ಸೇವೆಯಲ್ಲಿ ಮೊಟ್ಟ ಮೊದಲ ಹಾಗೂ ತೀವ್ರವಾಗಿ ಹೊಡೆತ ತಿಂದಿದ್ದು, ಎರಡನೇ ಜೈಲುವಾಸ ಅನುಭವಿಸಿದ್ದು, ಕೊಂಡೊತ್ ಎಂಬ ಪ್ರದೇಶದಲ್ಲಿ ಅಸ್ಪೃಶ್ಯರಿಗೆ ದಾರಿಯಲ್ಲಿ ಓಡಾಡುವ ಹಕ್ಕನ್ನು ಪಡೆಯುವುದಕ್ಕಾಗಿ ನಡೆಸಿದ ಹೋರಾಟದಲ್ಲಿ. ನಂತರ ಅದೇ ವರ್ಷದಲ್ಲಿ ನವೆಂಬರ್‌ನಲ್ಲಿ ಆರಂಭವಾದ ಗುರುವಾಯೂರಿನ ಪ್ರಸಿದ್ಧ ಕೃಷ್ಣನ ದೇವಾಲಯ ಪ್ರವೇಶದ ಸತ್ಯಾಗ್ರಹವಂತೂ ಹಲವು ಹಂತಗಳ ಒಂದು ವರ್ಷ ಕಾಲದ ದೀರ್ಘ ಚಳುವಳಿಯಾಯಿತು. ಕಾಲ್ನಡಿಗೆ ಜಾಥಾದ ಮೂಲಕ ದಾರಿಯಲ್ಲಿನ ಎಲ್ಲ ಹಳ್ಳಿಗಳಲ್ಲಿ ಜಾಗೃತಿಯನ್ನೂ ಮೂಡಿಸುತ್ತಾ ಆರಂಭವಾಯಿತು. ದೇವಾಲಯದ ಎದುರು ಹಲವು ತಿಂಗಳುಗಟ್ಟಲೆ ಸತ್ಯಾಗ್ರಹ ಶಿಬಿರ, ನಂತರ ಕೇರಳಾದ್ಯಂತ ಒಂದು ಸಾವಿರ ಕಿ.ಮೀ.ಗಳ, 500 ಸಾರ್ವಜನಿಕ ಸಭೆಗಳ ಜಾಥಾ, ಇವುಗಳಲ್ಲಿ ಅನೇಕ ಕಾಂಗ್ರೆಸ್ ನಾಯಕರೂ ಭಾಗವಹಿಸಿದ್ದರು. ಎ.ಕೆ.ಜಿ. ಈ ಸತ್ಯಾಗ್ರಹದ ಕ್ಯಾಪ್ಟನ್ ಆಗಿ, ಜಾಥಾ ನಾಯಕನಾಗಿದ್ದರು.

ಇದೇ ಅಸ್ಪೃಶ್ಯತಾ ಚಳುವಳಿಯ ಸಂದರ್ಭದಲ್ಲಿ ಗೋಪಾಲನ್ ಅವರ ತಂದೆ, ಹೆಂಡತಿಯೊಂದಿಗೆ ಸಂಬಂಧ ಮುರಿದು ಬಿತ್ತು.

ರಾಷ್ಟ್ರೀಯ ಕಮ್ಯೂನಿಸ್ಟ್ ನಾಯಕ ಇ.ಎಂ.ಎಸ್. ನಂಬೂದರಿಪಾದ್, ಇತ್ತೀಚೆಗೆ ಮುಖ್ಯಮಂತ್ರಿಯಾಗಿದ್ದ ವಿ.ಎಸ್. ಅಚ್ಯುತಾನಂದನ್ ಸೇರಿದಂತೆ ಕೇರಳದ ಅನೇಕ ನಾಯಕರು ತಮ್ಮ ಜಾತಿಗಳಲ್ಲಿನ ಕಂದಾಚಾರಗಳ ವಿರುದ್ಧ ಹಾಗೂ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣ್ಯದ ಬಿಗಿಹಿಡಿತದ ವಿರುದ್ಧ, ಎರಡು ಲೋಟ ಪದ್ಧತಿ, ನೀರಿನ ನಿಷೇಧಗಳು ದಾರಿಯ ನಿಷೇದಗಳಂತಹ ಅಸ್ಪ್ರಶ್ಯತೆಯ ಆಚರಣೆಗಳ ವಿರುದ್ಧ ತೀವ್ರ ಹೋರಾಟಗಳನ್ನು ಹೂಡಿದವರು.

ಜಾತಿವ್ಯವಸ್ಥೆಯ ವಿರುದ್ಧದ ಇಂತಹ ದೃಢ ಹೋರಾಟಗಳ ಫಲವಾಗಿ ವಿವಿಧ ಜಾತಿಗಳ ಅದರಲ್ಲಿಯೂ ಕೆಳ ಜಾತಿಗಳು ಮತ್ತು ದಲಿತರ ನಾಯಕರುಗಳನೇಕರು ಕಮ್ಯೂನಿಸ್ಟ್ ಪಕ್ಷವನ್ನು ಸೇರಿದರು ಎಂಬುದನ್ನು ಇ.ಎಂ.ಎಸ್. ನಂಬೂದರಿಪಾದ್‌ರವರು ಗುರುತಿಸಿದ್ದಾರೆ. ಈ ಪ್ರಕ್ರಿಯೆಯ ಭಾಗವಾಗಿ ಸಿಪಿಐ(ಎಂ) ಪಕ್ಷ ಕೇರಳದ ಹಿಂದುಳಿದ ಜಾತಿಗಳ, ದಲಿತರ ನಡುವೆ ಗಟ್ಟಿ ನೆಲೆಯನ್ನು ಪಡೆದುಕೊಂಡಿದೆ.

ಇತರ ರಾಜ್ಯಗಳಲ್ಲಿ .

ತಮಿಳುನಾಡಿನಲ್ಲಿ, ಮುಂದೆ ಸಿಪಿಐ(ಎಂ)ನ ಪಾಲಿಟ್ ಬ್ಯೂರೋ ಸದಸ್ಯರಾದ, ಹಾಗೂ ಸಿಐಟಿಯುನ ಸ್ಥಾಪಕ ಪ್ರಧಾನ ಕಾರ್ಯದರ್ಶಿಯಾದ ಪಿ. ರಾಮಮೂರ್ತಿಯವರು ದಲಿತರ ನಡುವೆ ವಿದ್ಯಾಭ್ಯಾಸ, ಸ್ವಚ್ಚತೆಗಳನ್ನು ಹರಡುವುದಕ್ಕಾಗಿ ದುಡಿದರು. ದಲಿತರಿಗೆ ದೇವಾಲಯದಲ್ಲಿ ಪ್ರವೇಶ ದೊರಕಿಸುವುದಕ್ಕಾಗಿ ಐಯ್ಯಂಗಾರ್ ಜಾತಿಯ ಪಾರ್ಥಸಾರಥಿ ದೇವಾಲಯದ ಟ್ರಸ್ಟ್ ನಿಯಮಾವಳಿಗಳಲ್ಲಿನ ಸಂದು ಗೊಂದುಗಳನ್ನು ಬಳಸಿಕೊಂಡು ಇನ್ನೂರು ಚಮ್ಮಾರರನ್ನು ಟ್ರಸ್ಟ್ ಸದಸ್ಯರನ್ನಾಗಿ ಮಾಡುವುದರಲ್ಲಿ ಹೈಕೋರ್ಟಿನವರೆಗೂ ಹೋರಾಡಿ ಜಯಶೀಲರಾದರು. ಚಮ್ಮಾರರು ಮತ್ತು ಕುಟುಂಬದವರಿಗೆಲ್ಲಾ ದೇವಾಲಯ ಪ್ರವೇಶ, ಪೂಜೆಯ ಹಕ್ಕು ಮಾತ್ರವಲ್ಲದೆ ದೇವಾಲಯದ ಆಡಳಿತದ ಹಕ್ಕನ್ನೂ ದೊರಕಿಸಿದರು.

ಅಂಧ್ರದಲ್ಲಿ ತೆಲಂಗಾಣ ರೈತ ಹೋರಾಟದ ಅಪ್ರತಿಮ ನಾಯಕ, ಮುಂದೆ ಹಲವು ವರ್ಷಗಳ ಕಾಲ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯಾಗಿದ್ದ ಪಿ. ಸುಂದರಯ್ಯನವರು ತಮ್ಮ ಸಾರ್ವಜನಿಕ ಜೀವನದ ಅರಂಭದಲ್ಲಿಯೇ ತಮ್ಮ ಗ್ರಾಮದಲ್ಲಿ ದಲಿತ ಜೀತಗಾರರು, ಕೂಲಿಕಾರರನ್ನು ಸಂಘಟಿಸಿ ಅವರಿಗಾಗಿ ಪಾಠಶಾಲೆ, ಕ್ಲಿನಿಕ್‌ಗಳನ್ನು ಆರಂಭಿಸಿದರು. ದಲಿತರೇ ಮಾಲೀಕರಾದ ಸಹಕಾರಿ ಅಂಗಡಿಯನ್ನು ಸ್ಥಾಪಿಸಿದರು. ಇದರಿಂದ ಮೇಲು ಜಾತಿಗಳ ಶ್ರೀಮಂತರ ಮೇಲೆ ಅವಲಂಬನವನ್ನು ತಪ್ಪಿಸಿದರು ಮತ್ತು ದಲಿತರಲ್ಲಿ ಎಚ್ಚರವನ್ನು ಮೂಡಿಸಿದರು. ಎಲ್ಲಕ್ಕಿಂತ ಮಿಗಿಲಾಗಿ ಊರಿನ ಎಲ್ಲಾ ಕುಡಿಯುವ ನೀರನ್ನು ಸೇದುವ ಬಳಸಿಕೊಳ್ಳುವ ಹಕ್ಕಿಗಾಗಿ ಹೋರಾಟವನ್ನು ಹೂಡಿ ಯಶಸ್ವಿಯಾದರು. ಈ ಚಳುವಳಿ ಸುತ್ತಮುತ್ತಲಿನ ಗ್ರಾಮಗಳಿಗೆ ಹಬ್ಬಿ ನಲ್ಲೂರು ಜಿಲ್ಲೆಯಲ್ಲಿಯೇ ಅಸ್ಪ್ರಶ್ಯತೆಯ ವಿರುದ್ಧ ದಿಟ್ಟ ಹೋರಾಟಗಾರರೆಂದು ಹೆಸರಾದರು. ಈ ಚಟುವಟಿಕೆಗಳಿಂದಾಗಿ ತಮ್ಮ ಹತ್ತಿರದ ಬಂಧುಗಳ ಬಹಿಷ್ಕಾರಕ್ಕೆ ಒಳಗಾದರೂ ಕೂಡ ದೃಢವಾಗಿ ಅಸ್ಪ್ರಶ್ಯತೆಯ ವಿರುದ್ಧ ಹೋರಾಟವನ್ನು ಸಾಗಿಸಿದರು.

ತೆಲಂಗಾಣ ಹೋರಾಟ ಎಂಬ ಇಂದ್ರಜಾಲ ಮತ್ತು ಇತರ ಭೂ ಹೋರಾಟಗಳು

"ಈ ಕಮ್ಯೂನಿಸ್ಟರಲ್ಲಿ ಏನು ಇಂದ್ರಜಾಲ ಅಥವ ಮಂತ್ರವಿದೆಯೋ ಗೊತ್ತಿಲ್ಲ! 'ದೊರೆಯೇ, ನಾನು ನಿನ್ನ ಗುಲಾಮ. ನಿನ್ನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ' ಎಂದು ಹೇಳುತ್ತಿದ್ದ ಜನರನ್ನೇ ಹೀರೋಗಳನ್ನಾಗಿ ಮಾಡಿಬಿಟ್ಟಿದ್ದಾರೆ. ಶೂನ್ಯದಿಂದ, ಬಂಜರು ಮಣ್ಣಿನಿಂದ ದೊಡ್ಡ ಹೀರೋಗಳನ್ನು ಸೃಷ್ಟಿಸಿಬಿಟ್ಟಿದ್ದಾರೆ."

ಇದು ಅಂಧ್ರದ ಪ್ರಸಿದ್ಧ ಪತ್ರಕರ್ತ ಸುರವರಂ ಪ್ರತಾಪರೆಡ್ಡಿಯವರು ತೆಲಂಗಾಣ ಹೋರಾಟದ ಸಂದರ್ಭದಲ್ಲಿ ತಮ್ಮ ಪತ್ರಿಕಾ ವರದಿಯಲ್ಲಿ ಮಾಡಿದ ಉದ್ಗಾರ. ತೆಲಂಗಾಣ ಪ್ರದೇಶದ ಮೂರು ಜಿಲ್ಲೆಗಳಲ್ಲಿ 1946 ರಿಂದ 1950ರವರೆಗೂ ವಿವಿಧ ರೂಪದಲ್ಲಿ ನಡೆದ, ಭಾರತದ ಅತ್ಯಂತ ವ್ಯಾಪಕ ಮತ್ತು ಧೀರ ಹೋರಾಟದ ಸಂದರ್ಭ ಅದು. ಭೂ ಮಾಲೀಕರು ಹಾಗೂ ನಿಜಾಂ ಸರ್ಕಾರದ ಪೋಲಿಸರು ಹಾಗೂ ಸೈನಿಕರನ್ನು ಮೂರು ಸಾವಿರಕ್ಕಿಂತ ಹೆಚ್ಚು ಹಳ್ಳಿಗಳು ಮತ್ತು ಪಟ್ಟಣಗಳಿಂದ ಹೊಡೆದು ಓಡಿಸಿದ ಸಶಸ್ತ್ರ ಹೋರಾಟ ಅದು. ಈ ಸಂದರ್ಭದಲ್ಲಿ ಗ್ರಾಮ ರಾಜ್ಯ ಸಮಿತಿಗಳನ್ನು ರಚಿಸಿ ಈ ವಿಶಾಲ ಪ್ರದೇಶದಲ್ಲಿ ಮೂರು– ನಾಲ್ಕು ವರ್ಷಗಳ ಕಾಲ ಅಡಳಿತ ನಡೆಸಲಾಯಿತು. ಈ ಸಮಿತಿಗಳಲ್ಲಿ ಅಂದಿನ ಕಾಲದಲ್ಲಿಯೇ ಗಣನೀಯ ಸಂಖ್ಯೆಯಲ್ಲಿ ದಲಿತರು ಸದಸ್ಯರಾಗಿ ಆಡಳಿತದಲ್ಲಿ ಭಾಗವಹಿಸಿದ್ದರು. ಗ್ರಾಮ ರಕ್ಷಣಾ ದಳಗಳಲ್ಲಿ ಬಹುಸಂಖ್ಯಾತರಾಗಿದ್ದರು. ದಲಿತರು–ದಲಿತರಲ್ಲದವರು ಒಗ್ಗೂಡಿ ನಿರಂತರವಾಗಿ ವರ್ಷಗಳ ಕಾಲ ಸೆಣಸಿದ್ದರ ಫಲವಾಗಿ ಮೂಡಿದ ಸೌಹಾರ್ದ ಭಾವನೆ ಮುಂದೆ ಈ ಪ್ರದೇಶದಲ್ಲಿ ಅಸ್ಪ್ರಶ್ಯತೆಯನ್ನು ತೊಡೆದು ಹಾಕಲು ಅನುಕೂಲ ವಾತಾವರಣವನ್ನು ನಿರ್ಮಿಸಿತು.

ಹಳ್ಳಿಗಳಲ್ಲಿ ಭೂ ಮಾಲೀಕರಿಗೆ ಸೇರಿದ 10 ಲಕ್ಷ ಎಕರೆಗಿಂತ ಹೆಚ್ಚು ಭೂಮಿ ಗೇಣಿದಾರರ, ಭೂ ಹೀನರ ಕೈಗೆ

ಪುಟ 14ಕ್ಕೆ

.....ಹೋರಾಟದಲ್ಲಿ ಕಮ್ಯುನಿಸ್ಟರು

ಪುಟ 8 ರಿಂದ

ವರ್ಗವಣೆಯಾಗಿ ಭೂ ಮಾಲೀಕರ ಶಕ್ತಿಯನ್ನು ಗಣನೀಯವಾಗಿ ಕುಗ್ಗಿಸಿತು. ಹಿಂದುಳಿದ ಜಾತಿಗಳ ಹಾಗು ದಲಿತರಿಗೆ ಭೂ ಹಂಚಿಕೆ ಮಾಡಿ ಅವರ ಶಕ್ತಿ, ಸ್ಥೈರ್ಯ ಹಾಗು ಆತ್ಮ ಗೌರವಗಳನ್ನು ಹೆಚ್ಚಿಸಿತು. ಜಾತಿ ವ್ಯವಸ್ಥೆಯ ಹಾಗು ಅಸ್ಪ್ರಶ್ಯತೆಯ ಆಚರಣೆಗಳ ಕಟ್ಟುನಿಟ್ಟು ಪಾಲನೆಯ ಸಂರಕ್ಷಕರಂತೆ ವರ್ತಿಸುತ್ತಿದ್ದ ಭೂ ಮಾಲೀಕರ ದಬ್ಬಾಳಿಕೆಯ ಶಕ್ತಿ ದುರ್ಬಲಗೊಂಡದ್ದು ಹಾಗು ದಲಿತರಲ್ಲಿ ಮೂಡಿದ ಎಚ್ಚರವೂ ಅಸ್ಪ್ರಶ್ಯತೆ ಸಡಿಲಗೊಳ್ಳಲು ಕಾರಣವಾಯಿತು.

ಅನೇಕ ಭೂ ಹೋರಾಟಗಳು

ಮೂವತ್ತರ ದಶಕದಿಂದಲೇ ಅರಂಭವಾಗಿ 1945–47ರ ನಡುವೆ ಭಾರತದ ಅನೇಕ ರಾಜ್ಯಗಳಲ್ಲಿ ಭುಗಿಲೆದ್ದ ಅನೇಕ ಭೂ ಹೋರಾಟಗಳು ಇಂತಹುದೇ ಪರಿಣಾಮವನ್ನು ಬೀರಿದವು. ಪಶ್ಚಿಮ ಬಂಗಾಳದ ಹಲವು ಜಿಲ್ಲೆಗಳಿಗೆ ಹಬ್ಬಿದ 'ತೇಭಾಗ' ಹೋರಾಟ, ಕೇರಳದ ಉತ್ತರ ಮಲಬಾರಿನ ಹಲವು ಜಿಲ್ಲೆಗಳಿಗೆ ವ್ಯಾಪಿಸಿದ್ದ 'ಚಿರಸ್ಮರಣೆ' ಕಾದಂಬರಿಯ ಪ್ರಸಿದ್ಧ ಕಯ್ಯೂರು ಹೋರಾಟ, ಹಾಗೆಯೇ ಪುನ್ನಪ್ರ-ವೈಯಲಾರ್ ಹೋರಾಟ, ತಮಿಳುನಾಡಿನ ತಂಜಾವೂರು ಹೋರಾಟ, ಅಸ್ಸಾಂನ ಸುರ್ಮಾ ಕಣಿವೆ ಹೋರಾಟ, ಮಹಾರಾಷ್ಟ್ರದ ವಾರಲೀಯರ ಹೋರಾಟಗಳು ಜಾತಿ ವ್ಯವಸ್ಥೆಯ ಬೇರನ್ನು ಅಲುಗಾಡಿಸಿದ ಅಸ್ಪೃಶ್ಯತೆಯ ನಿರ್ಬಂಧಗಳನ್ನು ಸಡಿಲಿಸಿದ ಪ್ರಸಿದ್ಧ ಹೋರಾಟಗಳು.

ಎಡ ರಂಗ ಸರ್ಕಾರಗಳು

ಕೇರಳ, ಪಶ್ಚಿಮ ಬಂಗಾಳ, ತ್ರಿಪುರಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಜಾತಿ ವ್ಯವಸ್ಥೆ, ಅಸ್ಪ್ರಶ್ಯತೆಯ ವಿರುದ್ಧದ ಹೋರಾಟಗಳು ಮತ್ತು ಭೂ ಹೋರಾಟಗಳ ನಡುವೆ ಹಾಕಿದ ಬೆಸುಗೆ ಸ್ವಾತಂತ್ರ್ಯಾನಂತರವು ಮುಂದುವರೆಯಿತು. ತೀವ್ರ ಭೂ ಸುಧಾರಣೆಗಾಗಿ ಭೂ ಮಾಲೀಕರ ಶಕ್ತಿಯನ್ನು ಅಲುಗಾಡಿಸುವದಕ್ಕಾಗಿ ಹಾಗೂ ಅಸ್ಪ್ರಶ್ಯತೆಯ ಆಚರಣೆಗಳ ವಿರುದ್ಧ ಹೋರಾಟಗಳು ನಡೆದವು. ಇವುಗಳ ಪರಿಣಾಮವಾಗಿ 1957ರಲ್ಲಿ ಇಡೀ ದೇಶದಲ್ಲಿ ವ್ಯಾಪಿಸಿದ್ದ ಕಾಂಗ್ರೆಸ್‌ನ ಏಕ ಪಕ್ಷ ಅಧಿಕಾರವನ್ನು ಮುರಿದು ಮೊದಲ ಬಾರಿಗೆ ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಅಧಿಕಾರಕ್ಕೆ ಬಂದಿತು.

ಪಶ್ಚಿಮ ಬಂಗಾಳ ಒಂದರಲ್ಲಿಯೇ 15 ಲಕ್ಷ ಭೂಹೀನ ದಲಿತ ಕುಟುಂಬಗಳಿಗೆ ಭೂಮಿಯನ್ನು ಮತ್ತು ಭೂ ಸಾಗುವಳಿಯ ಕಾನೂನು ಬದ್ಧ ಹಕ್ಕನ್ನು ನೀಡುವುದರಲ್ಲಿ ಯಶಸ್ಸು ಕಂಡಿತು. ಇದು ಕೇವಲ ಸರ್ಕಾರದ ಆಡಳಿತಾತ್ಮಕ ಕ್ರಮವಾಗಿರದೇ 1967ರ ಭೂ ಅಕ್ರಮಣ ಚಳುವಳಿ, 1978ರ ಬರ್ಗಾದಾರರ (ಪಾಲುದಾರರ, ಪೇರುದಾರರ) ಚಳುವಳಿಯ ಮೂಲಕ ಸಾಧಿಸಲಾಯಿತು. ಇದರಿಂದ ದಲಿತರಲ್ಲಿ ಮೂಡಿದ ಎಚ್ಚರ, ವಿದ್ಯಾಭ್ಯಾಸದ ಅವಕಾಶಗಳು ಮತ್ತು ಅವರು ರೈತರಾಗಿ ತಲೆಎತ್ತಿ ನಡೆಯಲು ಮೂಡಿದ ವಾತಾವರಣ ಇವುಗಳು ಅಸ್ಪ್ರಶ್ಯತೆಯ ಆಚರಣೆಗಳಿಗೆ ದೊಡ್ಡ ಪೆಟ್ಟು ನೀಡಿದವು.

ಭೂ ಸುಧಾರಣಾ ಕಾನೂನು, ಭೂ ಹೋರಾಟಗಳ ಜೊತೆ ಜೊತೆಗೆ ಕೇರಳ, ಪಶ್ಚಿಮ ಬಂಗಾಳ, ತ್ರಿಪುರ ರಾಜ್ಯಗಳಲ್ಲಿ ಅಧಿಕಾರ ವಿಕೇಂದ್ರೀಕರಣದ – ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಗಣನೀಯವಾಗಿ ಅಧಿಕಾರವನ್ನು ವಿಕೇಂದ್ರಿಕರಿಸಿದ ತೀವ್ರ ಸುಧಾರಣೆ ಕೂಡ ಗಮನಾರ್ಹ. ಭೂ ಮಾಲೀಕರ ಶಕ್ತಿಯನ್ನು ಕುಗ್ಗಿಸಿದ ನಂತರ ನಡೆದ ಈ ಪಂಚಾಯತ್‌ರಾಜ್ ಚುನಾವಣೆಗಳಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಕೂಲಿಕಾರರು, ಬಡ ರೈತರು ಆಯ್ಕೆಯಾಗಿ ಬರಲು ಹಾಗೂ ಅಧ್ಯಕ್ಷ ಪದವಿಗಳಿಗೆ ಮೀಸಲಾತಿ ಬರುವ ಮೊದಲೇ ದಲಿತರನೇಕರು ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷ ಪದವಿಯನ್ನು ಪಡೆಯಲು ಅವಕಾಶವಾಯಿತು.

ಇದರಿಂದಾಗಿ ಅನೇಕ ಮೀಸಲು ಅಲ್ಲದ ಸಾಮಾನ್ಯ ಕ್ಷೇತ್ರಗಳಲ್ಲಿಯೂ ದಲಿತರು ಗೆದ್ದು ಬಂದರು. ಇದು ಶಾಸಕರ ಸ್ಥಾನಗಳಿಗೂ ವಿಸ್ತರಿಸಿ ಅನೇಕ ದಲಿತರು ಸಾಮಾನ್ಯ ಕ್ಷೇತ್ರದಿಂದ ಗೆದ್ದು ಶಾಸಕರಾಗುವ ಒಂದು ವಿಶಿಷ್ಟ ಸಾಧನೆ ಪಶ್ಚಿಮ ಬಂಗಾಳದ್ದಾಯಿತು. ಮತ್ತೊಂದು ವಿಶೇಷವೆಂದರೇ ಸರ್ಕಾರಿ ಉದ್ಯೋಗಗಳಲ್ಲಿಯೂ ಮುಖ್ಯವಾಗಿ ಶಿಕ್ಷಕ ಹುದ್ದೆಗಳಲ್ಲಿ ದಲಿತರು ತಮ್ಮ ಮೀಸಲಾತಿಯ ಪ್ರಮಾಣವನ್ನು ಮೀರಿ ಆಯ್ಕೆಯಾಗಲು ಸಾಧ್ಯವಾಯಿತು. ಉದಾಹರಣೆಗೆ ಪಶ್ಚಿಮ ಬಂಗಾಳದ ಪಾಥಮಿಕ ಶಿಕ್ಷಕರಲ್ಲಿ ಶೇ. 27ರಷ್ಟು ಹಾಗೂ ಪ್ರೌಢಶಾಲಾ ಶಿಕ್ಷಕರಲ್ಲಿ ಶೇ 29ರಷ್ಟು ದಲಿತರಾಗಿದ್ದಾರೆ.

ಜಾತಿ ಪದ್ಧತಿಯ ವಿಶ್ಲೇಷಣೆ :

ಹೀಗೆ ಕಮ್ಯೂನಿಸ್ಟರು ತಮ್ಮ ಪಕ್ಷದ ಆರಂಭದ ದಿನಗಳಿಂದಲೇ ಜಾತಿ ವ್ಯವಸ್ಥೆಯ ಹಾಗೂ ಅಸ್ಪೃಶ್ಯತೆಯ ವಿರುದ್ಧ ಹೋರಾಟಗಳಲ್ಲಿ ತೊಡಗಿದುದಕ್ಕೆ ಎಲ್ಲ ರೀತಿಯ ಅಸಮಾನತೆಯ ವಿರುದ್ಧ ಸಿಡಿದೆದ್ದು, ಮನುಷ್ಯ–ಮನುಷ್ಯರ ನಡುವೆ ಸಮಾನತೆಯನ್ನು ಸ್ಥಾಪಿಸಬೇಕೆಂಬ ಮಾರ್ಕ್ಸ್‌ವಾದದ ಮೂಲಭೂತ ತುಡಿತ ಪ್ರಮುಖ ಆಧಾರ. ಅದೇ ಸಮಯದಲ್ಲಿ ಭಾರತದ ವಿಶಿಷ್ಟ ಸಾಮಾಜಿಕ ರಚನೆಯಾದ ಜಾತಿ ಪದ್ಧತಿಯನ್ನು ಆಳವಾಗಿ ವಿಶ್ಲೇಷಿಸಿ ಈ ಪದ್ಧತಿಯ ಉಗಮಕ್ಕೆ ಕಾರಣ ಹಾಗೂ ಅದರ ನಿರ್ಮೂಲನೆಯ ದಾರಿಯನ್ನು ಅನ್ವೇಷಿಸಿದ್ದು ಕೂಡ ಒಂದು ಮುಖ್ಯ ಕಾರಣ. 1922ರಿಂದಲೇ ಇಂತಹ ಚಿಂತನೆಯನ್ನು ಗುರುತಿಸಬಹುದಾದರೂ 1928ರಲ್ಲಿ ರೂಪುಗೊಂಡ ಭಾರತ ಕಮ್ಯುನಿಸ್ಟ್ ಪಕ್ಷದ ಮೊತ್ತ ಮೊದಲ ಕ್ರಿಯಾ ಯೋಜನೆಯಲ್ಲಿ ಅದರ ಸ್ಪಷ್ಟ ನಿರೂಪಣೆಯನ್ನು ನಾವು ನೋಡಬಹುದು.

"ಬ್ರಿಟಿಷರ ಆಡಳಿತ, ಭೂ ಮಾಲಕ ಪದ್ಧತಿ, ಪ್ರತಿಗಾಮಿ ಜಾತಿ ವ್ಯವಸ್ಥೆ ,ಮತೀಯ ಮೋಸಗಳು ಮತ್ತು ಭೂತಕಾಲದ ಎಲ್ಲ ಗುಲಾಮಿ ಹಾಗೂ ರೈತ ಸುಲಿಗೆಯ ಪರಂಪರೆಗಳು ಭಾರತದ ಜನತೆಯ ಉಸಿರು ಕಟ್ಟಿಸುತ್ತಿವೆ ಮತ್ತು ಅವರ ವಿಮೋಚನೆಯ ದಾರಿಗೆ ಅಡ್ಡಗಲ್ಲುಗಳಾಗಿವೆ.

ಇವುಗಳು, 20ನೇಯ ಶತಮಾನದಲ್ಲಿಯೂ ಭಾರತದಲ್ಲಿ ಬೇರೆಯವರನ್ನು ಭೇಟಿ ಮಾಡಲಾಗದ, ಎಲ್ಲರೂ ಉಪಯೋಗಿಸುವ ಭಾವಿಗಳಲ್ಲಿ ನೀರು ಕುಡಿಯಲಾಗದ, ಎಲ್ಲರೂ ಕಲಿಯುವ ಶಾಲೆಗಳಲ್ಲಿ ಕಲಿಯಲಾಗದ ಪರಯ್ಯಾ(ದಲಿತ) ಜನ ಸಮುದಾಯವನ್ನು ಕಾಣುವ ಸ್ಥಿತಿಯನ್ನು ತಂದೊಡ್ಡಿವೆ.

ಭಾರತ ಕಮ್ಯೂನಿಸ್ಟ್ ಪಕ್ಷವು ಗುಲಾಮಗಿರಿ, ಜಾತಿ ವ್ಯವಸ್ಥೆ ಮತ್ತು ಜಾತಿ ಬದ್ಧ ಅಸಮಾನತೆಯ ಎಲ್ಲ ರೂಪಗಳ (ಸಾಮಾಜಿಕ ಸಾಂಸ್ಕೃತಿಕ ಇತ್ಯಾದಿ) ವಿರುದ್ಧ ಹೋರಾಡುತ್ತದೆ. ಭಾರತ ಕಮ್ಯೂನಿಸ್ಟ್ ಪಕ್ಷವು ದೇಶದ ಎಲ್ಲ ಪರಯ್ಯಾ ದಲಿತ ದುಡಿಯುವ ಜನರ ಮತ್ತು ಎಲ್ಲ ಶ್ರಮಿಕರ ಸಂಪೂರ್ಣ ಮತ್ತು ಶಾಶ್ವತ ಸಮಾನತೆಗಾಗಿ ಹೋರಾಡುತ್ತದೆ."

ಇದು ಪಕ್ಷದ ಗುರಿ ಹಾಗೂ ಕಾರ್ಯಕ್ರಮದ ಘೋಷಣೆಯಾದರೆ ಜಾತಿ ಪದ್ಧತಿಯ ಸ್ವರೂಪ ಮತ್ತು ಮೂಲದ ಬಗ್ಗೆ ಇ.ಎಂ.ಎಸ್. ನಂಬೂದರಿಪಾದ್‌ರವರು ಹೀಗೆ ವಿವರಿಸಿದ್ದಾರೆ.

"ಗ್ರೀಸ್, ರೋಮ್ ಮತ್ತು ಕೆಲವು ಪಶ್ಚಿಮ ಏಷ್ಯಾ ದೇಶಗಳಲ್ಲಿ ಬೆಳೆದು ಬಂದ ಗುಲಾಮಿ ಪದ್ಧತಿಗೂ ಭಾರತದಲ್ಲಿ ಉಗಮವಾದ ವರ್ಣ–ಜಾತಿ ವ್ಯವಸ್ಥೆಗೂ ಮೂಲಭೂತ ವ್ಯತ್ಯಾಸವಿಲ್ಲ. ಒಂದು ವ್ಯತ್ಯಾಸವೆಂದರೆ ಗುಲಾಮಿ ವ್ಯವಸ್ಥೆಯಲ್ಲಿ ಬಹು ಸಂಖ್ಯೆಯ ಜನರನ್ನು ಗುಲಾಮರೆಂದು ಘೋಷಿಸಿ ಬಹಿರಂಗವಾದ, ನೇರವಾದ ದಮನದ ಮೂಲಕ ಶೋಷಣೆ ಮಾಡಲಾಗುತ್ತಿತ್ತು, ಆದರೆ ಭಾರತದಲ್ಲಿ ಇದನ್ನೇ ಜಾತಿಯ ಹೆಸರಿನಲ್ಲಿ ಮಾಡಲಾಗುತ್ತಿತ್ತು."

ವರ್ಣ–ಜಾತಿ ವ್ಯವಸ್ಥೆ ಅಸ್ಥಿತ್ವಕ್ಕೆ ಬಂದಾಗ ಅದನ್ನು ನಿರಂತರವಾಗಿ ಮುಂದುವರೆಸಲಿಕ್ಕೆ ಹಾಗೂ ಸಮರ್ಥಿಸಿಕೊಳ್ಳಲಿಕ್ಕೆ ಒಂದು ವಿಶಿಷ್ಟ ಧಾರ್ಮಿಕ ಮತ್ತು ಸೈದ್ಧಾಂತಿಕ–ತತ್ವ ಶಾಸ್ತ್ರೀಯ ಚೌಕಟ್ಟನ್ನು ಈ ಶೋಷಣಾ ವ್ಯವಸ್ಥೆಯ ಸುತ್ತ ರೂಪಿಸಲಾಯಿತು. ಹಿಂದೂ ಧರ್ಮ, ಹಿಂದೂ ತತ್ವ ಶಾಸ್ತ್ರ ಮತ್ತು ಹಿಂದೂ ಸಂಸ್ಕೃತಿ ಎಂದರೆ ಇದೇ (ಭಾರತದ ಸ್ವಾತ್ರಂತ್ರ್ಯ ಚಳುವಳಿಯ ಚರಿತ್ರೆ).

ಎಲ್ಲಾ ಜಾತಿ, ಉಪಜಾತಿಗಳ ಜನರೂ ಜಾತಿ ವ್ಯವಸ್ಥೆಯು ಸ್ವತಃ ದೇವರೇ ಸೃಷ್ಟಿಸಿದ್ದೆಂದು ಮತ್ತು ಈ ಜನ್ಮದಲ್ಲಿ ಜಾತಿ ವ್ಯವಸ್ಥೆಗೆ ತಲೆಬಗ್ಗಿ ನಡೆದರೆ ಮುಂದಿನ ಜನ್ಮದಲ್ಲಿ ಸುಖ ಸಂತೋಷಗಳು ಲಭಿಸುತ್ತವೆಂದು ನಂಬಿಸಲಾಯಿತು.

ಕೇರಳವು ಬ್ರಾಹ್ಮಣ್ಯದ ಶ್ರಮ ವಿಭಜನೆಯ ವ್ಯವಸ್ಥೆಯನ್ನು ಅಂಗೀಕರಿಸುವುದರ ಜೊತೆಗೆ ಅದನ್ನು ಮತ್ತಷ್ಟು ಕೆಟ್ಟ ಅಸ್ಪೃಶ್ಯತೆ ಮತ್ತು ಅ-ದರ್ಶನೀಯ ವ್ಯವಸ್ಥೆಯಾಗಿ ಬೆಳೆಸಿತು. (ಕೇರಳ ನಿನ್ನೆ, ಇಂದು, ನಾಳೆ)

ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ವಿವರಿಸಿರುವಂತೆ :

"ಅಸ್ಪೃಶ್ಯತೆಯ ಶಾಪದ ಜೊತೆಯಲ್ಲಿಯೇ ದಲಿತರಿಗೆ ಯಾವುದೇ ಆಸ್ತಿಯ ಮೇಲೆ ಹಕ್ಕು ಇರಲಿಲ್ಲ. ಮೇಲ್ಜಾತಿಯವರು ಉಂಡು ಬಿಸಾಡಿದ, ಹಳಸಿದ ಆಹಾರವನ್ನು ದಲಿತರು ಸೇವಿಸಬೇಕಾಗಿತ್ತು. ಸಾರ್ವಜನಿಕ ಬಾವಿಗಳಿಂದ ನೀರನ್ನು ತರಲು ಅವಕಾಶ ಕೊಡುತ್ತಿರಲಿಲ್ಲ. ದೇವಸ್ಥಾನಗಳ ಪ್ರವೇಶವನ್ನು ನಿರಾಕರಿಸಲಾಗಿತ್ತು. ಜ್ಞಾನ ಮತ್ತು ಶಿಕ್ಷಣದ ಹಕ್ಕುಗಳಿಂದ ದೂರವಿಡಲಾಗಿತ್ತು. ಮೇಲ್ಜಾತಿಯವರ ಮಲ ಹೊರುವ ಕೆಲಸ ಮಾಡಬೇಕಾಗಿತ್ತು. ಸಾರ್ವಜನಿಕ ಸ್ಮಶಾನಗಳನ್ನು ಬಳಸಲು ಅವಕಾಶವಿರಲಿಲ್ಲ , ಮೇಲ್ಜಾತಿಯವರು ವಾಸಿಸುವ ಹಳ್ಳಿಯ ಮುಖ್ಯ ಭಾಗದಲ್ಲಿ ಇವರಿಗೆ ವಾಸಿಸುವ ಅವಕಾಶ ಇರಲಿಲ್ಲ , ಭೂಮಿ ಮತ್ತು ಇತರೆ ಆಸ್ತಿಗಳ ಮಾಲೀಕರಾಗುವುದನ್ನು ದಲಿತರಿಗೆ ನಿರಾಕರಿಸಲಾಗಿದ್ದರಿಂದಾಗಿ ಆರ್ಥಿಕ ಚಲನಶೀಲತೆಯನ್ನುಂಟು ಮಾಡುವ ಯಾವುದೇ ಮೂಲವನ್ನು ಹೊಂದಲು ಅವಕಾಶವಿರಲಿಲ್ಲ. ಹೀಗಾಗಿ ದಲಿತರು ಸಾಮಾಜಿಕ ಬಹಿಷ್ಕಾರ ಮತ್ತು ಆರ್ಥಿಕ ತಾರತಮ್ಯಕ್ಕೆ ಶತಮಾನಗಳ ಕಾಲ ಒಳಗಾಗಿದ್ದರು. ಒಂದಿಲ್ಲೊಂದು ವಿಧಾನದಲ್ಲಿ ದೇಶದ ಹಲವಾರು ಭಾಗಗಳಲ್ಲಿ ಇದು ಇಂದಿಗೂ ಮುಂದುವರೆಯುತ್ತಿದೆ."

"ಸ್ವಾತಂತ್ರ್ಯಾ ನಂತರದ ಸುಮಾರು 60 ವರ್ಷಗಳ ನಂತರವೂ ಸಹ ಜಾತಿ ವ್ಯವಸ್ಥೆಯಲ್ಲಿ ಯಾವುದೇ ಮೂಲಭೂತ ಬದಲಾವಣೆಯಾಗಿಲ್ಲ. ಏಕೆಂದರೆ ಬಂಡವಾಳಶಾಹಿ ವರ್ಗ ಭೂಮಾಲಕತ್ವದೊಂದಿಗೆ ರಾಜಿ ಮಾಡಿಕೊಂಡಿದ್ದು ಜಾತಿ ಪೂರ್ವಾಗ್ರಹಗಳಿಗೆ ಪೋಷಣೆ ನೀಡಿತು. ಭೂಸಂಬಂಧಗಳ ಅಮೂಲಾಗ್ರ ಪರಿವರ್ತನೆ ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆಗೆ ಬಲವಾದ ಹೊಡೆತ ನೀಡಬಹುದಾಗಿತ್ತು. ಆದರೆ ಸ್ವಾತಂತ್ರ್ಯಾ ನಂತರವೂ ಭೂ ಸಂಬಂಧಗಳ ಮೂಲರಚನೆ ಬದಲಾಗಲಿಲ್ಲ."

ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯನ್ನೂ ಸಿಪಿಐ(ಎಂ) ನಾಯಕರು ವಿಶ್ಲೇಷಿಸುವುದರ ಜೊತೆಗೇ ಭಾರತದ ಮಾರ್ಕ್ಸ್‌ವಾದಿ ಇತಿಹಾಸಕಾರರಾದ ಡಿ.ಡಿ.ಕೊಸಾಂಬಿ, ಇರ್ಫಾನ್ ಹಬೀಬ್, ರೊಮಿಲಾ ಥಾಪರ್, ಆರ್.ಎಸ್.ಶರ್ಮ, ಹಾಗೂ ಕೆಲವು ಮಾರ್ಕ್ಸ್‌ವಾದಿ ಸಮಾಜ ಶಾಸ್ತ್ರಜ್ಞರು ಅನೇಕ ಅಧ್ಯಯನ–ಸಂಶೋಧನೆಗಳನ್ನು ಮಾಡಿದ್ದಾರೆ.

ಅಂಬೇಡ್ಕರ್ ಮತ್ತು ಮಾರ್ಕ್ಸ್‌ವಾದಿಗಳ ಸಾಮ್ಯತೆ, ಭಿನ್ನತೆ

ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಬಗ್ಗೆ ಮಾರ್ಕ್ಸ್‌ವಾದಿಗಳ ವಿಶ್ಲೇಷಣೆಯು ಆರಂಭದಿಂದಲೂ ಗಾಂಧೀಜಿಯವರ ಹಾಗೂ ಕಾಂಗ್ರೆಸ್‌ನವರ ವಾದಕ್ಕಿಂತ, 19–20 ನೆಯ ಶತಮಾನಗಳ ಅನೇಕ ಮೇಲ್ಜಾತಿ ಸಮಾಜ ಸುಧಾರಕರ ವಾದಕ್ಕಿಂತ ಭಿನ್ನವಾಗಿರುವುದನ್ನು ಗಮನಿಸಬಹುದು. ವರ್ಣಾಶ್ರಮ ಧರ್ಮ, ವೈದಿಕ ಧರ್ಮ, ಅವರ ತತ್ವ ಶಾಸ್ತ್ರ ಮತ್ತು ಸಂಸ್ಕೃತಿಗಳನ್ನೇ ಧಿಕ್ಕರಿಸದೆ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯ ನಿರ್ಮೂಲನೆ ಸಾಧ್ಯವಿಲ್ಲ ಎಂಬುದರಲ್ಲಿ, ಜಾತಿ →

ಅಸ್ಪೃಶ್ಯತೆಯ ವಿರುದ್ಧದ ಹೋರಾಟದಲ್ಲಿ......

ವ್ಯವಸ್ಥೆ ಎಂಬುದು ಒಂದು ಸಾಮಾಜಿಕ ರೂಪ ಮಾತ್ರವಲ್ಲ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಆಯಾಮಗಳ ಮೇಳವ ಎಂಬುದರಲ್ಲಿ, ಜಾತಿ ವ್ಯವಸ್ಥೆಯ ಸೈದ್ಧಾಂತಿಕ ಆಧಾರಗಳಾದ ಹುಟ್ಟು, ವಿವಾಹ, ಪುನರ್‌ಜನ್ಮದಲ್ಲಿನ ನಂಬಿಕೆ, ದೈವಸೃಷ್ಟಿ ಇತ್ಯಾದಿಗಳ ಬಗ್ಗೆ ಅಂಬೇಡ್ಕರ್‌ರವರ ಹಾಗೂ ಮಾರ್ಕ್ಸ್‌ವಾದಿಗಳ ವಿಶ್ಲೇಷಣೆಯಲ್ಲಿ ಸಂಪೂರ್ಣ ಸಾಮ್ಯತೆಯಿದೆ.

ಅಂಬೇಡ್ಕರ್‌ರವರಂತೆಯೇ ಮಾರ್ಕ್ಸ್‌ವಾದಿಗಳು ದಲಿತರಿಗೆ ಮೀಸಲಾತಿಯ ಕಟ್ಟಾ ಸಮರ್ಥಕರು (ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ಕೂಡ 1957ರ ಪ್ರಥಮ ಕಮ್ಯೂನಿಸ್ಟ್ ಸರ್ಕಾರ ಕೇರಳದಲ್ಲಿ ಜಾರಿಗೆ ತಂದಿತು.) ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಮಹಾಡ್‌ನ ಕೆರೆಯ ಸ್ಪರ್ಶ, ನಾಸಿಕ್‌ನ ದೇವಾಲಯ ಪ್ರವೇಶದಂತಹ ನೇರ ಸಾಮಾಜಿಕ ಕಾರ್ಯಾಚರಣೆಗಳು, ಮೀಸಲಾತಿ, ಮಹಾರ್ ವತನ್ ವಿರೋಧಿ, ಖೋತ್ ಭೂ ಸಂಬಂಧದ ವಿರೋಧದಂತಹ ಆರ್ಥಿಕ ಕ್ರಮಗಳೆರಡೂ ಬೇಕೆಂಬುದನ್ನು ಮಾರ್ಕ್ಸ್‌ವಾದಿಗಳು. ಕಾರ್ಯತಃ ಒಪ್ಪಿಕೊಂಡಿದ್ದರು ಮತ್ತು ಅಂತಹದೇ ಹಲವು ಹೋರಾಟಗಳನ್ನು ಹೂಡಿದ್ದರು ಎಂಬುದನ್ನು ಮೇಲೆ ನೋಡಿದ್ದೇವೆ.

ಡಾ. ಅಂಬೇಡ್ಕರ್‌ರವರ ಆರ್ಥಿಕ ವಿಚಾರಗಳು ಮಾರ್ಕ್ಸ್‌ವಾದಿಗಳ ಆರ್ಥಿಕ ವಿಚಾರಗಳೊಂದಿಗೆ ಸಾಮ್ಯತೆ ಹೊಂದಿವೆಯೇ ಹೊರತು ಗಾಂಧಿವಾದಿಗಳು ,ಕಾಂಗ್ರೆಸ್ಸಿಗರು ಹಾಗೂ ಲೋಹಿಯಾವಾದಿಗಳೂ ಸೇರಿದಂತೆ ಯಾವುದೇ ರೀತಿಯ ಸಮಾಜವಾದಿಗಳೊಂದಿಗೂ ತಿಲ ಮಾತ್ರ ಸಾಮ್ಯವನ್ನು ಹೊಂದಿಲ್ಲ. ಡಾ.ಅಂಬೇಡ್ಕರರು "ಸರ್ಕಾರವು ಸಂಪತ್ತಿನ ಸಮಾನ ಹಂಚಿಕೆ ಸಾಧ್ಯವಾಗುವಂತೆ ಗರಿಷ್ಟ ಮಟ್ಟದ ಉತ್ಪಾದಕತೆ ಸಾಧ್ಯವಾಗುವಂತೆ ಜನರ ಆರ್ಥಿಕ ಜೀವನವನ್ನು ಯೋಜಿಸಬೇಕೆಂಬುದು ಸರ್ಕಾರದ ಹೊಣೆಗಾರಿಕೆ. ಆದರೆ ಇದರಲ್ಲಿ ಖಾಸಗಿ ಉದ್ದಿಮೆಗಳಿಗೆ ಎಲ್ಲಾ ದಾರಿಗಳನ್ನು ಮುಚ್ಚಬಾರದು ಎನ್ನುತ್ತಾರೆ. ಇಂತಹ ಆರ್ಥಿಕ ಧೋರಣೆಯ ಮುಖ್ಯ ಅಂಶಗಳು ಕೆಳಗಿನಂತಿವೆ.

1. ಸರ್ಕಾರದ ಅಧೀನದ ಕೈಗಾರಿಕೆಯಾಗಿ ಕೃಷಿ.
2. ಪ್ರಧಾನ ಕೈಗಾರಿಕೆಗಳು ಹಾಗೂ ಮೂಲಭೂತ ಕೈಗಾರಿಕೆಗಳು ಸರ್ಕಾರದ ಸ್ವಾಧೀನದಲ್ಲಿರಬೇಕು.
3. ಜೀವ ವಿಮೆ ಪ್ರತಿ ವಯಸ್ಕ ನಾಗರಿಕನಿಗೂ ಕಡ್ಡಾಯವಾಗಿರಬೇಕು ಹಾಗೂ ಅದು ಸರ್ಕಾರದ ಏಕಸ್ವಾಮ್ಯವಾಗಿರಬೇಕು.
4. ಕೃಷಿ ಭೂಮಿಯನ್ನು ರೈತರಿಂದ, ಗೇಣಿದಾರರಿಂದ ಪಡೆದುಕೊಂಡು ನಿರ್ದಿಷ್ಟ ಗಾತ್ರದ ಫಾರಂಗಳಾಗಿ ವಿಂಗಡಿಸಬೇಕು. ಅದನ್ನು ಗ್ರಾಮ ನಿವಾಸಿಗಳಿಗೆ ಯಾವುದೇ ಜಾತಿ ಬೇಧವಿಲ್ಲದೆ ಗೇಣಿ ಭೂಮಿಯಾಗಿ ನೀಡಬೇಕು. ಅದನ್ನು ಸಾಮೂಹಿಕವಾಗಿ ಸಾಗುವಳಿ ಮಾಡಬೇಕು. ಕೃಷಿ ಮಾಡಲು ಹಣ, ನೀರು, ಎತ್ತುಗಳು, ಉಪಕರಣಗಳು, ಗೊಬ್ಬರ, ಬೀಜಗಳನ್ನು ಸರ್ಕಾರ ಒದಗಿಸಬೇಕು. ಇಂತಹ ವ್ಯವಸ್ಥೆಯಲ್ಲಿ ಭೂಮಾಲಕರು ಇರುವುದಿಲ್ಲ ಭೂ ಹೀನ ಕೃಷಿಕೂಲಿಕಾರರೂ ಇರುವುದಿಲ್ಲ.

ಡಾ.ಅಂಬೇಡ್ಕರ್‌ರವರ ಈ ಮೇಲಿನ ಆರ್ಥಿಕ ಧೋರಣೆಗಳು ದೇಶದಲ್ಲಿ ಆರ್ಥಿಕ ಅಸಮಾನತೆಗಳನ್ನು ತೊಡೆದು ಹಾಕಲು ಸೂಚಿಸಿರುವ ಉತ್ತಮ ಮಾರ್ಗಗಳಾಗಿವೆ. ಈ ಎಲ್ಲ ಧೋರಣೆಗಳು ಮಾರ್ಕ್ಸ್‌ವಾದಿಗಳು ಒಪ್ಪುವಂತಹವು ಮತ್ತು ಸಾಧ್ಯವಿದ್ದೆಡೆ ಜಾರಿಗೆ ತಂದಿರುವಂತಹವೇ ಆಗಿದೆ. ಈ ಕ್ರಮಗಳನ್ನು ಅಂಬೇಡ್ಕರರಲ್ಲಿ ಅಪಾರ ಗೌರವವನ್ನು ಇಟ್ಟಿರುವ ದಲಿತ ಚಳುವಳಿಗಾರರು, ಸಾಹಿತಿಗಳು ಅಧ್ಯಯನ ಮಾಡಿದ್ದಾರೆಯೇ?, ಅವುಗಳನ್ನು ತಮ್ಮ ಕಾರ್ಯಕ್ರಮಗಳ, ಹೋರಾಟಗಳ ಭಾಗವಾಗಿ ಮಾಡಿಕೊಂಡಿದ್ದಾರೆಯೇ ಎಂಬುದು ಒಂದು ಮುಖ್ಯ ಪ್ರಶ್ನೆ. ಹಾಗೆ ಅಂಬೇಡ್ಕರರ ಸಾಮಾಜಿಕ ಹಾಗೂ ಆರ್ಥಿಕ ಚಿಂತನೆಗಳನ್ನು ದಲಿತ ಚಳುವಳಿ ಕೈಗೆತ್ತಿಕೊಂಡಿದ್ದೇ ಆದರೆ ಮಾರ್ಕ್ಸ್‌ವಾದಿಗಳು ಹಾಗೂ ಅಂಬೇಡ್ಕರ್ ವಾದಿಗಳು ಜೊತೆಯಾಗಿ ಕೆಲಸ ಮಾಡುವುದಕ್ಕೆ ಅಪರಿಮಿತ ಅವಕಾಶ ಲಭ್ಯವಿದೆ.

ಅಂಬೇಡ್ಕರ್‌ರವರು ಜಾತಿ ವ್ಯವಸ್ಥೆಯ ಬಗ್ಗೆ ಕಮ್ಯೂನಿಸ್ಟರ ವಿಚಾರ ಅದನ್ನು ಕೇವಲ ಆರ್ಥಿಕ ಮೂಲದ್ದಾಗಿ ನೋಡುತ್ತದೆ, ಅದರ ಸಾಮಾಜಿಕ ಸ್ವರೂಪವನ್ನು ಗುರುತಿಸುವುದಿಲ್ಲ ಎಂದು ವಾದಿಸಿದ್ದಾರೆ.

ಭಾರತದ ಹಲವು ದಲಿತ ಚಿಂತಕರು ಹಾಗೂ ಲೋಹಿಯಾವಾದಿಗಳು ಸರಿ ಸುಮಾರು ಇದೇ ಅರ್ಥದ ಆರೋಪಗಳನ್ನು ವ್ಯಾಪಕವಾಗಿ ಮಾಡಿದ್ದಾರೆ. ಮಾರ್ಕ್ಸ್‌ವಾದಿಗಳು 'ಜಾತಿ ದಮನ, ಅಸ್ಪೃಶ್ಯತೆಯ ವಿರುದ್ಧದ ಹೋರಾಟಗಳನ್ನು ವರ್ಗ ಶೋಷಣೆಯ ವಿರುದ್ಧದ ಹೋರಾಟದೊಂದಿಗೆ ಬೆಸೆಯಬೇಕು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ವರ್ಗ ಸಂಘರ್ಷ ಮುಖ್ಯವಾಗಿ ಭೂ ಸುಧಾರಣೆ ಇವು ಜಾತಿ ಪದ್ಧತಿಯನ್ನು ತಾನೇ ತೊಲಗಿಸುತ್ತದೆ ಎಂಬ ಸರಳ ತಿಳುವಳಿಕೆ ಹಲವು ಕಾಲ ಮಾರ್ಕ್ಸ್‌ವಾದಿಗಳನ್ನು ಕಾಡುತ್ತಿದ್ದಿತು. ಅದರಿಂದಾಗಿ ಅಸ್ಪೃಶ್ಯತೆ ವಿರುದ್ಧದ, ಜಾತಿ ವಿನಾಶದ ಹೋರಾಟಗಳಿಗೆ ಕೊಡಬೇಕಾದ ಗಮನವನ್ನು ನೀಡಲಿಲ್ಲ ಎಂಬುದನ್ನು ಪ್ರಾಂಜಲವಾಗಿ ಒಪ್ಪಿಕೊಂಡಿದ್ದಾರೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ದಲಿತರ ಸಮಸ್ಯೆಗಳನ್ನು ಅಸ್ಪೃಶ್ಯತೆಯ ಆಚರಣೆಯನ್ನು, ಬೇಧದ ಪ್ರಶ್ನೆಗಳನ್ನು ಎತ್ತಿಕೊಂಡು ಹಲವು ಹೋರಾಟಗಳನ್ನು ಮಾಡಲಾಗಿದೆ.

ಇತ್ತೀಚಿನ ಹೋರಾಟಗಳು ಎಡ ಚಳುವಳಿ ಬೆಳೆದ ರಾಜ್ಯಗಳಲ್ಲಿ:-

ನಿರಂತರ ಅಸ್ಪೃಶ್ಯತೆಯ ವಿರುದ್ಧ ಪ್ರಚಾರ, ಭೂ ಸುಧಾರಣೆ, ಪಂಚಾಯತಿ ರಾಜ್‌ಗಳು ಅಸ್ಪೃಶ್ಯತೆಯ ಆಚರಣೆಗಳನೇಕವನ್ನು ಅಳಿಸಿ ಹಾಕಿವೆ. ಅಸ್ಪೃಶ್ಯತೆ, ಜಾತಿ ದಮನದ ವಿರೋಧವಾಗಿ ಹೋರಾಟಗಳು ಆಂಧ್ರ ಮತ್ತು ತಮಿಳುನಾಡಿನಲ್ಲಿ ಗಮನಾರ್ಹ ಮುನ್ನಡೆಯಾಗಿವೆ. ಅಸ್ಪೃಶ್ಯತಾ ವಿರೋಧಿ, ಜಾತಿ ದಮನದ ವಿರೋಧಿ ಸಮಿತಿಯನ್ನು ರಚಿಸಲಾಗಿದ್ದು ಅವುಗಳು ನೇತೃತ್ವವಹಿಸಿವೆ. ಅದರಲ್ಲಿ ಕಮ್ಯುನಿಸ್ಟರು, ಪ್ರಗತಿಪರರು, ದಲಿತ ಸಂಘಟನೆಗಳನ್ನು ಒಳಗೊಳ್ಳಲಾಗಿದೆ. ಅಸ್ಪೃಶ್ಯತೆ ವಿರುದ್ದವಾಗಿ, ದೇವಸ್ಥಾನ ಪ್ರವೇಶ, ನೀರಿನ ಹಕ್ಕಿಗಾಗಿ ಹೋರಾಟ ವ್ಯಾಪಕವಾಗಿ' ನಡೆದಿವೆ. ಇದಲ್ಲದೇ ತಮಿಳುನಾಡಿನಲ್ಲಿ ಜಾತಿ ವಿಭಜಕ ಗೋಡೆಗಳನ್ನ ಒಡೆಯುವ ಚಳುವಳಿ ಅತ್ಯಂತ ಪರಿಣಾಮಕಾರಿಯಾಗಿ ನಡೆದಿದೆ. ವಿಶೇಷವಾಗಿ ತುಳಿತಕ್ಕೊಳಗಾದ ಅರುಂಧತಿಯಾರ್ ದಲಿತರ ಸಮಸ್ಯೆಗಳ ಬಗ್ಗೆ (ಮಲ ಎತ್ತುವುದರ ವಿರುದ್ಧ ಇತ್ಯಾದಿಗಳು) ತೀಕ್ಷ್ಣ ಹೋರಾಟಗಳು ನಡೆದಿವೆ. ಈ ಸಮಿತಿ ಆಂಧ್ರ, ತಮಿಳುನಾಡು ಮತ್ತಿತರೆ ರಾಜ್ಯಗಳಲ್ಲಿಯೂ ಅಸ್ಪೃಶ್ಯತೆ ಆಚರಣೆಗಳ ಕುರಿತು ವಿಶೇಷವಾದ ಪ್ರಾಯೋಗಿಕವಾದ ಅಧ್ಯಯನವನ್ನು ಮಾಡಿ 157 ಕ್ಕೂ ಹೆಚ್ಚು ಅಸ್ಪೃಶ್ಯತೆಯ ಆಚರಣೆಗಳನ್ನು ಗುರುತಿಸಿವೆ. ಅವುಗಳ ವಿರುದ್ಧ ಪರಿಣಾಮಕಾರಿ ಹೋರಾಟಗಳನ್ನು ನಡೆಸಿ ಯಶಸ್ವಿಯಾಗಿದೆ. ಅಲ್ಲದೆ ಆಂಧ್ರದಲ್ಲಿನ ಚಳುವಳಿಯ ತೀವ್ರತೆಯಿಂದಾಗಿಯೇ ದಲಿತರ ಒಟ್ಟು ಪ್ರಶ್ನೆಗಳ ಬಗೆಗೆ ಪ.ಜಾತಿ.ಪ.ವರ್ಗಗಳ ಪ್ರಶ್ನೆಗಳಿಗಾಗಿ ನ್ಯಾಯಾಂಗ ಆಯೋಗ ರಚಿಸುವಂತಾಗಿದೆ. ಅಖಿಲ ಭಾರತ ಮಟ್ಟದಲ್ಲೂ ಜಾತಿ ದಮನದ ವಿರೋಧಿ , ದಲಿತ ಹಕ್ಕುಗಳ ಸಮಿತಿ ಕಾರ್ಯ ನಿರ್ವಹಿಸುತ್ತಿದ್ದು ಅಖಿಲ ಭಾರತ ಮಟ್ಟದ ಚಳುವಳಿಗೆ ಗಮನ ನೀಡುತ್ತಿದೆ. ಕರ್ನಾಟಕದಲ್ಲಿಯೂ ಹಲವಾರು ಪ್ರಶ್ನೆಗಳಲ್ಲಿ ಮಧ್ಯ ಪ್ರವೇಶ ಸಾಧ್ಯವಾಗಿದೆ. ●

ಬಿಜೆಪಿ ದರ್ಬಾರ್

ಪುಟ 11 ರಿಂದ

ವಿಷಯಗಳು ಮುಖ್ಯಮಂತ್ರಿಗಳಿಗಿಂತ ಮುಖ್ಯ ನ್ಯಾಯಮೂರ್ತಿಗಳಿಗೆ ಗೊತ್ತಿರುತ್ತದೆ. ಆದ್ದರಿಂದ ಮುಖ್ಯನ್ಯಾಯಮೂರ್ತಿಗಳ ಸಲಹೆ ಪರಿಗಣಿಸುವುದು ಕಡ್ಡಾಯ ಎಂದೂ ತೀರ್ಪು ಹೇಳಿದೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಎಂಬುದೊಂದು ಅಧಿಕಾರಕ್ಕೆ ಬಂದ ಮೇಲೆ ಆಡಳಿತದ ನಾನಾ ವಲಯಗಳಲ್ಲಿ ನಿಜಕ್ಕೂ ಏನು ನಡೆಯುತ್ತಿದೆ ಎಂಬುದು ಪ್ರಜ್ಞಾವಂತರೆಲ್ಲರೂ ಗಂಭೀರವಾಗಿ ಯೋಚಿಸಬೇಕಾದ ವಿಷಯವಾಗಿದೆ.

ಪ್ರವಾಹ ಸಂತ್ರಸ್ಥರ ಮನೆಗಳ ಕತೆ

ಬರ ಪರಿಹಾರದ ಮಾತಾಡುವಾಗ ಈ ಮಾಹಿತಿಯೂ ಮುಖ್ಯವೇ. ಉತ್ತರ ಕರ್ನಾಟಕದ ಭಾಗದಲ್ಲಿ ಕಳೆದ ಮೂರು ವರ್ಷಗಳ ಹಿಂದೆ ಬಂಧ ಭೀಕರ ಪ್ರವಾಹದಲ್ಲಿ ಸಂತ್ರಸ್ಥರಾದವರಿಗೆ ಒಟ್ಟು 57,389 ಮನೆ ಕಟ್ಟಿಕೊಡುವುದಾಗಿ ಬಿಜೆಪಿ ಸರ್ಕಾರ ಹೇಳಿತ್ತು. ನಿಜವಾದ ಅಗತ್ಯ ಇದಕ್ಕಿಂತ ಎಷ್ಟೊ ಜಾಸ್ತಿ ಇತ್ತು. ಆದರೆ ಮೂರು ವರ್ಷಗಳ ನಂತರ ಸರ್ಕಾರ ಭರವಸೆ ನೀಡಿದಷ್ಟು ಮನೆಗಳನ್ನಾದರೂ ಪೂರೈಸಿ ಕೊಟ್ಟಿಲ್ಲ. 57,389 ಮನೆಗಳ ಪೈಕಿ 29,863 ಮನೆಗಳು ಇನ್ನೂ ಪ್ರವಾಹ ಪೀಡಿತರಿಗೆ ಸಿಕ್ಕೇ ಇಲ್ಲ ಎನ್ನುತ್ತಿವೆ ವರದಿಗಳು. ಬರ ಪರಿಹಾರದ ಕತೆ ಏನಾಗಲಿದೆ ನೋಡಬೇಕಿದೆ.

ಯುಪಿಎ ದರ್ಬಾರ್

ಪುಟ 12 ರಿಂದ

ಎಂದು ಹೇಳಲಾಗುತ್ತಿದೆ.

ಯುಪಿಎ-2 ಸರಕಾರಕ್ಕೆ ತನ್ನ ಈ ಅರ್ಜಿಯಿಂದಾಗಿ ದೂರಸಂಪರ್ಕ ವಲಯ ಮತ್ತು ದೇಶದ ಮೇಲೆ ಉಂಟಾಗುವ ಪರಿಣಾಮಗಳೇನು ಎಂಬ ಅರಿವಾದರೂ ಇದೆಯೇ ಎಂಬುದು ಕೆಲವರು ಪರಿಣಿತರ ಸಂದೇಹ. ಈ ಅರ್ಜಿಯನ್ನು ತಯಾರಿಸಿದ ಗುಂಪಿನಲ್ಲಿ ಕನಿಷ್ಟ ಮೂವರು ಈ 2ಜಿ ಚಿತ್ರಾನ್ನದಲ್ಲಿ ಆಳವಾಗಿ ಸಿಲುಕಿಕೊಂಡವರು- ಒಬ್ಬರು, ಈ ಹಗರಣದಲ್ಲಿ ಆಗಿರುವ ನಷ್ಟ ಸೊನ್ನೆ ಎಂದು ತೀರ್ಪು ಬರುವ ವರೆಗೂ ಹೇಳುತ್ತ ತಿರುಗುತ್ತಿದ್ದ ಹಾಲಿ ದೂರಸಂಪರ್ಕ ಮಂತ್ರಿಗಳು; ಎರಡನೇಯವರು, ಸರಕಾರದ ಪರವಾಗಿ ಸಮರ್ಥನೆ ಮಾಡಿಕೊಳ್ಳುತ್ತಿದ್ದ ಕಾನೂನು ಮಂತ್ರಿಗಳು ಮತ್ತು ಮೂರನೇಯವರು ಸುಪ್ರಿಂ ಕೋರ್ಟ್ ಎದುರು ಈ ನೀಡಿಕೆಯ ವಿಧಾನವನ್ನು ಸಮರ್ಥಿಸಿಕೊಳ್ಳುವಲ್ಲಿ ಎರಡೆರಡು ಬಾರಿ ವಿಫಲರಾದ ಅಟಾರ್ನಿ ಜನರಲ್.

ರಾಷ್ಟ್ರಪತಿಯ ಮೂಲಕ ಹಾಕಿಸುವ ಈ ಅರ್ಜಿ ಸಾಧಿಸುವ ಏಕೈಕ ಸಂಗತಿಯೆಂದರೆ ಮುಂದಿನ ಒಂದು-ಒಂದೂವರೆ ವರ್ಷ ಈ ವಲಯದಲ್ಲಿ ಅನಿಶ್ಚಿತತೆ, ಆ ನಂತರ ಎಲ್ಲವನ್ನೂ ಹೊಸದಾಗಿ ಅವೇ ಸಮಸ್ಯೆಗಳೊಂದಿಗೆ ಆರಂಭಿಸುವುದು- ಹೀಗನ್ನುತ್ತಾರೆ ಒಬ್ಬ ವಿಶೇಷಜ್ಞರು. ಹಾಗಿದ್ದರೆ ಈ ಅರ್ಜಿಯಾದರೂ ಏಕೆ? ಬಹುಶಃ 1.76ಲಕ್ಷ ಕೋಟಿ ರೂ. ನಷ್ಟವಾದರೂ ಮೀಸೆ ಮಣ್ಣಾಗಲಿಲ್ಲ ಎಂದು ತೋರಿಸುವುದು ಅಥವಾ ಏನಿಲ್ಲೆಂದರೂ, ಬೇರೆಯವರ ಮೀಸೆಯೂ ಮಣ್ಣಾಗಿದೆ ಎಂದು ತೋರಿಸುವುದು, ಅದು ವರೆಗೆ ಏನೂ ಆಗದವರಂತೆ ಸೋಗು ಹಾಕಿಕೊಂಡಿರಲು ಅವಕಾಶ ಕಲ್ಪಿಸಿಕೊಳ್ಳುವುದು.

ಇದು ನಿಮಗೆ ಗೊತ್ತೇ?

ಭಾರತದ ಕಾರ್ಪೊರೇಟ್ ವಲಯ ಕಳೆದ ಆರು ವರ್ಷಗಳಲ್ಲಿ ಯುಪಿಎ ಸರಕಾರಗಳಿಂದ ಪಡೆದ ಬಕ್ಷೀಷಿನ ಮೊತ್ತ 25,74,042 ಕೋಟಿ ರೂ. ಕಳೆದ ಆರು ವರ್ಷಗಳ ಬಜೆಟುಗಳಲ್ಲಿ 'ಬಿಟ್ಟುಕೊಟ್ಟ ರೆವಿನ್ಯೂ' ಎಂದು ನಮೂದಿಸಿರುವ ಅಂಕಿ-ಅಂಶಗಳಿಂದ ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ಅವರು ಕಲೆ ಹಾಕಿದ ಅಂಕಿ-ಅಂಶಗಳ ವಿವರವನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ.



ಭಾರಿ ಬಹಿರಂಗ ಸಭೆಯ ಒಂದು ಪಾರ್ಶ್ವನೋಟ



ಕೆಂಪು ಸ್ವಯಂಸೇವಕರ ಪಡೆ



ಸೀತಾರಾಂ ಯೆಚೂರಿಯವರೊಂದಿಗೆ ರಾಜ್ಯ ಪ್ರತಿನಿಧಿಗಳು ಮತ್ತು ವೀಕ್ಷಕರು



ರಾಜಕೀಯ ಸಂಘಟನಾ ವರದಿಯ ಮೇಲಿನ ಚರ್ಚೆಯಲ್ಲಿ ಕಾ. ಪ್ರಸನ್ನಕುಮಾರ್



ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಮೇಲಿನ ಚರ್ಚೆಯಲ್ಲಿ ಕಾಂ. ಬಿ. ಮಾಧವರವರು



ಬಹಿರಂಗ ಸಭೆಯ ವೇದಿಕೆ

ಸಿಪಿಐ(ಎಂ) ನೂತನ ಪಾಲಿಟ್‌ಬ್ಯೂರೋ ಸದಸ್ಯರು



ಪ್ರಕಾಶ್ ಕಾರಟ್ ಪ್ರಧಾನ ಕಾರ್ಯದರ್ಶಿಗಳು
ಎಸ್. ರಾಮಚಂದ್ರನ್ ಪಿಳ್ಳೈ
ಸೀತಾರಾಂ ಯೆಚೂರಿ
ಭಿಮನ್ ಬಸು
ಮಾಣಿಕ್ ಸರ್ಕಾರ್, ತ್ರಿಪುರ ಮುಖ್ಯಮಂತ್ರಿಗಳು
ಪಿಣರಾಯಿ ವಿಜಯನ್
ಬುದ್ದದೇವ ಭಟ್ಟಾಚಾರ್ಯ
ಮಾಜಿ ಮುಖ್ಯಮಂತ್ರಿಗಳು ಪ.ಬಂಗಾಳ
ಕೆ. ವರದರಾಜನ್
ಬಿ.ವಿ. ರಾಘವುಲು
ಬೃಂದಾ. ಕಾರಟ್
ನಿರುಪಮ ಸೇನ್
ಕೊಡಿಯೇರಿ ಬಾಲಕೃಷ್ಣನ್
ಎಂ.ಎ. ಬೇಬಿ (ಹೊಸ ಸೇರ್ಪಡೆ)
ಸೂರ್ಯಕಾಂತ ಮಿಶ್ರ "
ಎ.ಕೆ. ಪದ್ಮನಾಭನ್ "

ನೂತನ ಕೇಂದ್ರ ಸಮಿತಿ

13 ಜನ ನೂತನ ಸದಸ್ಯರು ಸೇರಿದಂತೆ 89 ಜನ ಸದಸ್ಯರ ಕೇಂದ್ರ ಸಮಿತಿಯನ್ನು ಮಹಾಧಿವೇಶನ ಚುನಾಯಿಸಿತು. ಇದರಲ್ಲಿ 2 ಸ್ಥಾನಗಳು ಸದ್ಯಕ್ಕೆ ಖಾಲಿ ಇವೆ. ಕೇಂದ್ರ ಸಮಿತಿಗೆ ಇಬ್ಬರು ಕಾಯಂ ಆಹ್ವಾನಿತರನ್ನು ಹಾಗೂ ನಾಲ್ಕು ಜನ ವಿಶೇಷ ಆಹ್ವಾನಿತರನ್ನು ಮಹಾಧಿವೇಶನ ಚುನಾಯಿಸಿದೆ.

ಕರ್ನಾಟಕದಿಂದ ರಾಜ್ಯ ಕಾರ್ಯದರ್ಶಿಗಳಾದ ಜಿ.ವಿ. ಶ್ರೀರಾಮರೆಡ್ಡಿಯವರು ಕೇಂದ್ರ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



ರಾಜಕೀಯ ನಿರ್ಣಯದ ಮೇಲಿನ ಚರ್ಚೆಯಲ್ಲಿ ಕಾಂ. ಜಿ.ವಿ. ಶ್ರೀರಾಮರೆಡ್ಡಿ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH